# ಧೂಮ್ರ ವಲಯಗಳು

ಆರ್.ವೈ. ಧಾರವಾಡಕರ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಧೂಮ್ರ ವಲಯಗಳು

ರಾ. ಯ. ಧಾರವಾಡಕರ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು - ೫೬೦ ೦೦೨

**DHOMRAVALAYAGALU** (Essays) by **Ra. Ya. Dharavadakara.** Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : xxvi + ೮೬
ಬೆಲೆ : ರೂ. ೩೫-೦೦

ರಕ್ಷಾಪುಟ ವಿನ್ಯಾಸ : ಕೆ. ಚಂದ್ರನಾಥ ಆಚಾರ್ಯ

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯. ಸುಬೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦ ೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ "ವಿಶ್ವ ಕನ್ನಡ ಸಮ್ಮೇಳನ" ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು - ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ- ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧

(ಗೋವಿಂದ ಎಂ. ಕಾರಜೋಳ)

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

(ರಮೇಶ್ ಬಿ.ಝಳಕಿ)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

**ಎಲ್.ಎಸ್. ಶೇಷಗಿರಿ ರಾವ್**

ಅಧ್ಯಕ್ಷ

ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ


**ಅಧ್ಯಕ್ಷರು**

ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**

ಡಾ॥ ಚಂದ್ರಶೇಖರ ಕಂಬಾರ

ಡಾ॥ ಎಂ.ಎಂ. ಕಲಬುರ್ಗಿ

ಡಾ॥ ದೊಡ್ಡರಂಗೇಗೌಡ

ಡಾ॥ ಅರವಿಂದ ಮಾಲಗತ್ತಿ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಡಾ॥ ಪ್ರಧಾನ್ ಗುರುದತ್ತ

ಡಾ॥ ಹಂಪ ನಾಗರಾಜಯ್ಯ

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಶ್ರೀಮತಿ ಸಾರಾ ಅಬೂಬಕರ್

ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**

ಶ್ರೀ ಮನು ಬಳಿಗಾರ್, ಕ.ಆ.ಸೇ.

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಮುನ್ನುಡಿ

ಕನ್ನಡ ಸಾರಸ್ವತ ಪ್ರಪಂಚಕ್ಕೆ ಪ್ರಿನ್ಸಿಪಾಲ್ ಧಾರವಾಡಕರರು ಸುಪರಿಚಿತರು. ಅವರ ಸಾಹಿತ್ಯಕೃತಿಗಳು ಕನ್ನಡ ಸಾಹಿತ್ಯ ಪ್ರೇಮಿಗಳ ವಿಶೇಷ ಮನ್ನಣೆ ಪಡೆದಿರುವವಲ್ಲದೇ, ಅವರ ಹಲವು ಕೃತಿಗಳು ಸರಕಾರದಿಂದ ಪ್ರಶಸ್ತಿಗಳನ್ನೂ ಪಡೆದಿವೆ. ಅವರ 'ಕನ್ನಡ ಭಾಷಾಶಾಸ್ತ್ರ' ಎಂಬ ಸಂಶೋಧನಾತ್ಮಕ ಗ್ರಂಥವು ಕನ್ನಡ ಸಾಹಿತ್ಯ ಭಂಡಾರಕ್ಕೆ ಬೆಲೆಯುಳ್ಳ ಕೊಡುಗೆ. ಈ ಗ್ರಂಥಕ್ಕೆ ಮೈಸೂರು ಸರಕಾರದ 'ದೇವರಾಜ ಬಹಾದ್ದೂರ' ಪ್ರಶಸ್ತಿ ದೊರೆತದ್ದು ಅನೇಕರಿಗೆ ಗೊತ್ತಿದ್ದ ವಿಷಯ. ಅವರ ಇನ್ನೊಂದು ಕೃತಿ 'ಆರು ಪ್ರಬಂಧಗಳು' ೧೯೩೨- ೩೩ರಲ್ಲಿ ಪ್ರಕಟವಾದ ಕನ್ನಡ ಗ್ರಂಥಗಳಲ್ಲಿ ಸರ್ವೋತ್ಕೃಷ್ಟ ಕೃತಿಗಳಲ್ಲಿ ಒಂದೆಂದು ಮೈಸೂರು ಸರಕಾರದ ಪ್ರಶಸ್ತಿಯನ್ನು ಪಡೆದಿದೆ. ಸುಮಾರು ಕಾಲು ಶತಮಾನ ಪ್ರಾಧ್ಯಾಪಕರಾಗಿ, ಕಳೆದ ೧೫ ವರ್ಷಗಳಿಂದ ಒಂದು ದೊಡ್ಡ ವಿದ್ಯಾಸಂಸ್ಥೆಯ ಪ್ರಿನ್ಸಿಪಾಲರಾಗಿ, ನಾಡಿನಾದ್ಯಂತ ಅಸಂಖ್ಯಾತ ವಿದ್ಯಾರ್ಥಿವೃಂದವನ್ನು ಪಡೆದು, ಶ್ರೇಷ್ಠ ಆಡಳಿತಗಾರ, ವಾಗ್ಮಿ, ಸಾಹಿತಿ ಎಂದು ತಮ್ಮ ಬಹುಮುಖ ಪ್ರತಿಭೆಯಿಂದ ಕನ್ನಡ ಜನಕೋಟಿಗೆ ಪರಿಚಿತರಾದ ಶ್ರೀ ಧಾರವಾಡಕರರ ಪುಸ್ತಕಕ್ಕೆ ಮುನ್ನುಡಿ ತೀರ ಅನವಶ್ಯಕವಾದ ಸಂಪ್ರದಾಯವೆಂದೇ ನನ್ನ ಭಾವನೆ. ಅವರು ಈ ಕೃತಿಗೆ ನನ್ನ ಮುನ್ನುಡಿಯನ್ನು ಬಯಸಿರುವುದರಲ್ಲಿ ತೋರಿದ ಸೌಜನ್ಯಕ್ಕೆ ಮಾರುಹೋಗಿ ಈ ನಾಲ್ಕು ಮಾತುಗಳನ್ನು ಬರೆಯುತ್ತಿದ್ದೇನೆ.

ಶ್ರೀ ಧಾರವಾಡಕರರನ್ನು ನಾನು ಕಳೆದ ಹದಿನೈದು ವರ್ಷಗಳಿಂದಲೂ ಬಲ್ಲೆ. ಅವರನ್ನು ಭೇಟಿಯಾಗುವುದೆಂದರೆ ಅದೊಂದು ಆನಂದದಾಯಕ ಅನುಭವ. ಸದಾ ನಗುಮುಖ, ಗಂಭೀರವಾದ ನಡಿಗೆ, ಅವರ ಮಾತಿನ ಹಾಗೂ ಭಾಷಣ ಶೈಲಿಯೂ ಹಾಗೆಯೇ. ಸಾವಕಾಶ ಆದರೂ ಸ್ಫುಟವಾದ ಮಾತು. ಶಬ್ದ ಜೋಡಣೆ ಮುತ್ತಿನ ಹಾರದಂತೆ. ಅಂಥ ಕಲಾವಂತಿಕೆ ಮಾತಿನಲ್ಲಿ, ನಡುನಡುವೆ ಸಂದರ್ಭಕ್ಕೊಪ್ಪುವ ಅನುಭವ ಕಥನಗಳು, ಉಪಕಥೆಗಳು. ಮಾತಿನುದ್ದಕ್ಕೂ ಚುರುಕಾದ ಹಾಸ್ಯ, ನಕ್ಕು

ನಗಿಸುವ ನಗೆ, ಅಪಹಾಸ್ಯವಿಲ್ಲದ ವಿನೋದ. ಸುಸಂಸ್ಕೃತರಾದ ಅವರೊಡನೆ ಸಂಭಾಷಣೆ ಯೆಂದರೆ, ಅದೊಂದು ಆಹ್ಲಾದಕರ ಅನುಭವ. ಹರಿಯುವ ನೀರಿನ ಮೇಲೆ ಹೊಳೆಯುವ ಸೂರ್ಯಪ್ರಕಾಶದಂತೆ ಆ ಮಾತಿನ ಚಮತ್ಕಾರ. ಅವರ ಕೂಡ ಕಳೆಯುವ ವೇಳೆಯಲ್ಲಿ ಬೇಸರವೆಂಬುದೇ ಇಲ್ಲ. ಈ ತರದ ಅನುಭವವನ್ನು ಇಂಗ್ಲಿಷಿನಲ್ಲಿ 'never a dull moment' ಎಂದು ವರ್ಣಿಸುವದುಂಟು. ಅವರ ನಿತ್ಯ ಬಾಳಿನ ಹಾಗೂ ಬರಹಗಳ ವೈಶಿಷ್ಟ್ಯವೆಂದರೆ ರಸಿಕತೆ. ಅವರು ಇಂಗ್ಲಿಷ್ ಹಾಗೂ ಕನ್ನಡ ಸಾಹಿತ್ಯ ವಚನಗಳಲ್ಲಿ ಸ್ವಚ್ಛಂದವಾಗಿ ವಿಹರಿಸಿದವರು. ವಿಶಾಲವಾದ ಓದು, ಚುರುಕಾದ ಬುದ್ಧಿಮತ್ತೆ, ಬಹುಶ್ರುತತ್ವ, ಬಹುಮುಖ ಅನುಭವ, ಇವೆಲ್ಲಕ್ಕೂ ಹೆಚ್ಚಾಗಿ ರಸಿಕತೆ ಇವುಗಳನ್ನು ಇಷ್ಟೊಂದು ಪ್ರಮಾಣದಲ್ಲಿ ಪಡೆದಿರುವ ಶ್ರೀ ಧಾರವಾಡಕರರು ಶ್ರೇಷ್ಠ ಪ್ರಬಂಧಕಾರನಿಗಿರಬೇಕಾದ ಎಲ್ಲ ಗುಣಗಳನ್ನೂ ಪಡೆದಿದ್ದಾರೆ. ಅಂತೆಯೇ ಈ ಸಂಕಲನದಲ್ಲಿಯ ಪ್ರಬಂಧನೆಗಳು ಸುಂದರ ಸಾಹಿತ್ಯಕೃತಿಗಳಾಗಿವೆ.

ಪ್ರಬಂಧ, ಒಂದು ಸಾಹಿತ್ಯರೂಪವಾಗಿ ಮೊದಲಿಗೆ ಬೆಳೆದದ್ದು ಪಾಶ್ಚಿಮಾತ್ಯ ದೇಶಗಳಲ್ಲಿಯೇ. ಸುಮಾರು ನಾಲ್ಕು ಶತಮಾನಗಳ ಹಿಂದೆ ಹುಟ್ಟಿದ ಈ ಸಾಹಿತ್ಯರೂಪ ಹುಲುಸಾಗಿ ಬೆಳೆದು ಇಂದು ಪಂಡಿತಪಾಮರರ ಮೆಚ್ಚಿಕೆಯನ್ನು ಪಡೆದಿದೆ. ಮೊಟ್ಟ ಮೊದಲು 'Essay' ಎಂಬ ಶಬ್ದವನ್ನು ಪ್ರಯೋಗಿಸಿ ಈ ಸಣ್ಣ ಗಾತ್ರದ ಗದ್ಯರೂಪವನ್ನು ಪ್ರಪಂಚಕ್ಕೆ ಇತ್ತವನು ಫ್ರಾನ್ಸ್ ದೇಶದ ಮೈಕೆಲ್ ಮಾಂಟೇನ್ ಎಂಬಾತನು. ಅವನದು ಆತ್ಮಕಥೆ ಹೇಳುವ ರೀತಿ. 'ನನ್ನ ಮನಸ್ಸಿನ ವಿವಿಧ ಭಾವನೆಗಳನ್ನು, ನನ್ನ ಬಾಳಿನಲ್ಲಿದ್ದ ಅಪೂರ್ಣತೆಯನ್ನು, ಹೆಚ್ಚೇನು ನನ್ನ ನಿಜವಾದ ಸ್ವರೂಪವನ್ನು ನೀವು ಇಲ್ಲಿ ಕಾಣುವಿರಿ' ಎಂದು ಆತ ಆರಂಭದಲ್ಲಿಯೇ ಹೇಳುತ್ತಾನೆ. ಈ ತರಹದ ಯಾವುದೇ ಒಂದು ವಿಷಯದ ಬಗ್ಗೆ ಲೇಖಕನ ಅನುಭವಗಳನ್ನು ಸಂಕ್ಷೇಪವಾಗಿ ಹೇಳುವ ಈ ಸಾಹಿತ್ಯ ಪ್ರಕಾರವನ್ನು ಅನೇಕ ಬರಹಗಾರರು ತಮಗೆ ಬೇಕಾದ ಹಾಗೆ ಮಾರ್ಪಡಿಸಿಕೊಂಡು ಬಳಸಹತ್ತಿದರು. ಅಂದಿನಿಂದ ಪ್ರಬಂಧ ನಿತ್ಯನೂತನ ವೇಷಗಳಲ್ಲಿ ಲ್ಯಾಂಬನಿಂದ ಲುಕಸ್‌ನವರೆಗೆ, ಬೇಕನ್‌ನಿಂದ ಬೆಲಾಕ್‌ನವರೆಗೆ ದಿನಕೊಂದು ಚೆಂದಾಗಿ ಬೆಳೆಯುತ್ತ ಬಂದಿದೆ.

ಲಲಿತಪ್ರಬಂಧವೆಂದರೇನು ಎಂಬುದನ್ನು ನಿರ್ದಿಷ್ಟವಾಗಿ ಹೇಳುವದು ಕಠಿಣವಾದ ಕೆಲಸ. ಪ್ರಬಂಧವನ್ನು ಅದು ಹುಟ್ಟಿದಾಗಿನಿಂದ ಅನೇಕರು ಅನೇಕ ರೀತಿ ವರ್ಣಿಸುತ್ತ ಬಂದಿದ್ದಾರೆ. ಮಾಂಟೇನ್ ಅದನ್ನು 'medley of reflections' ಎಂದು ಕರೆದರೆ, ಬೇಕನ್ ಅದನ್ನು 'dispersed meditations' ಎಂದು

ಕರೆದಿದ್ದಾನೆ. ಡಾ. ಜಾನ್ಸನ್ 'a loose sally of the mind, an irregular and indigested piece, not a regular and orderly composition' ಎಂದು ಅದರ ಲಕ್ಷಣಗಳನ್ನು ಹೇಳಿದ್ದಾನೆ. ಮತ್ತೊಬ್ಬ ವಿಮರ್ಶಕ ಅದನ್ನು 'lyric in prose' ಎಂದು ಬಣ್ಣಿಸಿದ್ದು ಉಂಟು. ಇಂದು ಅನೇಕ ಬರಹಗಾರರ ಪ್ರಬಂಧಗಳನ್ನು ನೋಡಿದಾಗ ಸ್ಥೂಲವಾಗಿ ಈ ಹಲವು ಪ್ರಕಾರದ ಪ್ರಬಂಧಗಳ ಮುಖ್ಯ ಲಕ್ಷಣಗಳನ್ನು ಈ ರೀತಿ ಹೇಳಬಹುದು. (೧) ಪ್ರಪಂಚದ ಯಾವುದೇ ವಿಷಯ ಪ್ರಬಂಧದ ವ್ಯಾಪ್ತಿಗೆ ಒಳಪಟ್ಟದ್ದು. ಯಾವ ವಿಷಯದ ಮೇಲೆಯಾದರೂ ಪ್ರಬಂಧ ರಚನೆ ಮಾಡಬಹುದು. ಅದರ ರೂಪ ಶೈಲಿ ಬೇಕಾದಂತೆ ಇರಬಹುದು. ಜೆಪ್ಸನ್ ಹೇಳುವ ಹಾಗೆ, 'In form it may be narrative, descriptive or expository. It may be discursive, critical, autobiographical, argumentative. It may vary in length, it may be serious or trivial, earnest or ironical, sentimental or satirical.' (೨) ಅದು ಗಾತ್ರದಲ್ಲಿ ಸಣ್ಣದಾಗಿರ ಬೇಕು. ಇಂದು ಗಾತ್ರದಲ್ಲಿ ದೊಡ್ಡದಾದ ಪ್ರಬಂಧಗಳನ್ನು dissertation ಅಥವಾ ಬೇರೆ ಯಾವುದೇ ಹೆಸರಿನಿಂದ ಕರೆಯುವದುಂಟು. ಬಹುಮಟ್ಟಿಗೆ ಪ್ರಬಂಧದ ಗಾತ್ರ ಸಣ್ಣದಾಗಿರಬೇಕು ಎಂಬುದನ್ನು ಎಲ್ಲರೂ ಒಪ್ಪುವಂತೆ ಕಾಣುತ್ತದೆ. (೩) ಅದು ನೀತಿಬೋಧೆಗೆ ಪ್ರಾಧಾನ್ಯತೆಯನ್ನಿತ್ತ ಬರವಣಿಗೆ ಯಾಗಿರಬಾರದು. ಜೆಪ್ಸನ್ ಹೇಳುವ ಹಾಗೆ 'It must not be didactic, hortatcry c: rhetorical, must not set out to teach or to preach. It must not be redolent of the school room, the pulpit or the platform. The writer is not mounted on a high horse. He is not speaking from the pontifical or professional chair.' (೪) ರಸಿಕ ವ್ಯಕ್ತಿತ್ವದ ನಿರೂಪಣೆ ಅದಾಗಿರಬೇಕು. ಅದಕ್ಕೆ ಅನುಗುಣವಾದ ಸರಳ ಹಾಗೂ ರಸವತ್ತಾದ ಸರಸ ಸಲ್ಲಾಪದಂತಿರುವ ಶೈಲಿ ಅದಕ್ಕಿರಬೇಕು. ಜೆಪ್ಸನ್ ಹೇಳುವಂತೆ 'He is in a communicative mood; he takes his readers into confidence and admits them for the time being into the inner circle of his acqaintance.' ಇವುಗಳಲ್ಲಿ ವಿಷಯಕ್ಕಿಂತಲೂ ಹೇಳುವ ರೀತಿ ಮುಖ್ಯ. ಓದುಗರ ಮನಸ್ಸಿನಲ್ಲಿ ಜ್ಞಾನವನ್ನು ತುಂಬಲು ಈತ ಉತ್ಸುಕನಾಗಿರುವದಿಲ್ಲ. ಜ್ಞಾನಬೋಧೆ, ನೀತಿಬೋಧೆ ಇದ್ದರೆ ಅದು ಕೇವಲ ಆಕಸ್ಮಿಕ. ನಾವು ಮುಖ್ಯವಾಗಿ

ನೋಡುವುದು ಅದರಲ್ಲಿ ಕಾಣುವ ಮನಸ್ಸಿನ ವಿಲಾಸವನ್ನು. ಇಂಥ ಲಲಿತ ಪ್ರಬಂಧಗಳನ್ನು ಬರೆದ ಪಾಶ್ಚಾತ್ಯ ಲೇಖಕರಲ್ಲಿ ಅಗ್ರಗಣ್ಯರು ಮಾಂಟೇನ್, ಕೌಲೆ, ಆ್ಯಡಿಸನ್, ಗೋಲ್ಡ್‌ಸ್ಮಿತ್, ಲ್ಯಾಂಬ್, ಡಿಕ್ವಿನ್ಸಿ ಸ್ಟಿವನ್ಸನ್, ಚೆಸ್ಟರಟನ್, ಬೆಲಾಕ್ ಮುಂತಾದವರು. ಇದರಲ್ಲಿ ಕೆಲವರದು ಆತ್ಮಕಥೆ ಹೇಳುವ ರೀತಿ. ಈ ರೀತಿಯನ್ನು ಬಳಸಿದವರಲ್ಲಿ ಲ್ಯಾಂಬ್, ಆ್ಯಡಿಸನ್, ಗೋಲ್ಡ್‌ಸ್ಮಿತ್ ಇವರು ಪ್ರಮುಖರು. ಇದರಲ್ಲೂ ಲ್ಯಾಂಬ್ ಅಗ್ರಗಣ್ಯ. ಆತನ 'Dream Children' ಪ್ರಬಂಧವನ್ನು ಓದಿದ ಯಾವ ಓದುಗನ ಕಣ್ಣೂ ಒದ್ದೆಯಾಗದೇ ಇರದು. ಅದು ಅವನ ದುರಂತ ಜೀವನವನ್ನು ಚಿತ್ರಿಸುವ ಗದ್ಯಕಾವ್ಯವೇ ಆಗಿದೆ. ಅದನ್ನು ಓದಿದಾಗ,

> "Our sweetest songs are those
> That tell of saddest thought."

ಎಂಬ ಕವಿಯ ಮಾತು ನನಗೆ ಪರಮ ಸತ್ಯ ಎನಿಸಿತು.

(೫) ಪ್ರಬಂಧದ ಇನ್ನೊಂದು ರೀತಿ ಎಂದರೆ ವಾದ ಹೂಡುವದು, ಚರ್ಚೆ ಮಾಡುವದು, ಜಿಜ್ಞಾಸೆಯ ಬಲೆಯನ್ನು ಹೆಣೆಯುವದು. ಈ ತರಹದ ಬರಹದಲ್ಲಿ ಲಘುವಾದ ಹಾಸ್ಯ ಕೂಡಿರುವುದರಿಂದಲೂ, ಇಲ್ಲಿ ಕಾಣುವ ವಾದ ಚಾತುರ್ಯವು ಸಂತೋಷದಾಯಕವಾದುದು. (೬) ಯಾವ ವಿಷಯವನ್ನೂ ಪ್ರಬಂಧ ಆಮೂಲಾಗ್ರವಾಗಿ ವಿವೇಚಿಸುವುದಿಲ್ಲ, ಕಾರಣ ಅಪೂರ್ಣತೆ ಅದರ ಒಂದು ಲಕ್ಷಣ. ಯಾವುದೇ ವಿಷಯದ ಹಲವಾರು ಮುಖಗಳನ್ನು ತನ್ನ ರಸಿಕ ದೃಷ್ಟಿಯಿಂದ ಕಂಡು ಅದರ ರುಚಿಯನ್ನು ಓದುಗರಿಗೆ ತೋರಿಸುವುದೇ ಪ್ರಬಂಧಕಾರನ ರೀತಿ. ಇವೆಲ್ಲ ಗುಣಗಳನ್ನು ಶ್ರೀ ಧಾರವಾಡಕರರ ಪ್ರಬಂಧಗಳು ಧಾರಾಳವಾಗಿ ಪಡೆದಿವೆ.

Orlo Williams ಹೇಳುವ 'It is really at its best, the most delightful airy mould of thought which admits of every literary grace in a very high quality of mind, compatible with its essential smallness of scale' ಎಂಬ ಮಾತು ಈ ಪ್ರಬಂಧಗಳಿಗೆ ಒಪ್ಪುವಂತಿದೆ. ಲಲಿತಪ್ರಬಂಧ ನಿಜವಾಗಿಯೂ ಶ್ರೇಷ್ಠ ಕೃತಿಯಾಗಿದೆಯೇ ಎಂದು ಒರೆಗೆ ಹಚ್ಚಲು ವ್ಹರ್ಜಿನಿಯಾ ವುಲ್ಫ ಹೇಳುವ ಪರೀಕ್ಷೆಯೆಂದರೆ, 'The essay should lay the reader under a spell with its first word, and he should awake refreshed only

with the last.' ಈ ಒರೆಗಲ್ಲಿಗೆ ಹಚ್ಚಿದಾಗಲೂ ಶ್ರೀ ಧಾರವಾಡಕರರ ಪ್ರತಿಯೊಂದು ಪ್ರಬಂಧವೂ ಓದುಗರ ಮನಸ್ಸನ್ನು ಮೊದಲಿನಿಂದ ಕೊನೆಯವರೆಗೆ ಹಿಡಿದು ನಿಲ್ಲಿಸುತ್ತದೆ.

ಈ ಸಂಕಲನದ ಮೊದಲನೇ ಪ್ರಬಂಧ 'ಹರಟೆ ಅಥವಾ ನಿಬಂಧ ಎಂದರೇನು' ಎಂಬುದು. ಇಂಗ್ಲಿಷ್ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ಪ್ರಬಂಧಗಳ ಬೆಳವಣಿಗೆ ಹಾಗೂ ಹಲವು ಪ್ರಕಾರಗಳ ಸರಸ ನಿರೂಪಣೆಯಿದೆ. 'ನನ್ನ ಅಹಂಕಾರ' ಮತ್ತು 'ಮೂಢ ನಂಬಿಕೆಗಳು' ಇವೆರಡೂ ವಾದಚಾತುರ್ಯವನ್ನೊಳಗೊಂಡ ಪ್ರಬಂಧಗಳು. ಅಹಂಕಾರ ಪ್ರತಿಯೊಬ್ಬ ಮನುಷ್ಯನಿಗೂ ಬೇಕು ಎಂದು ವಾದಿಸುವಾಗ, ಸ್ವಾಭಿಮಾನ ಶೂನ್ಯದ ಚೇಷ್ಟೆ ಮಾಡಲು ಧಾರವಾಡಕರರು ಬಳಸುವ ಉಪಮೆ ಮೆಚ್ಚುವಂಥದಾಗಿದೆ. ''ಇಕ್ಕಳ ಕೈಮುಗಿದ ಹಾಗೆ ಯಾಚನಾ ಹಸ್ತಗಳನ್ನು ತಿಕ್ಕುವ ಮನುಷ್ಯನು ಮನುಷ್ಯನೇ? ಗಂಟೆಯ ಮೇಲಿನ ಮುಖ್ಯ ಪ್ರಾಣನ ಹಾಗೆ ಕೊಂಡವರೆದುರು ಕೈಮುಗಿದುಕೊಂಡು ಕುಳಿತರೆ ಆಗುವದೇನು? ಅದಕ್ಕಾಗಿ ನಿಮ್ಮ ಮನಸ್ಸಿನಲ್ಲಿ ಅಹಂಕಾರದ ಕುತುಬಮಿನಾರವನ್ನು ಏರಿಸಿರಿ''- ಎಂಥ ಸ್ಫುಟವಾದ ಚಿತ್ರಗಳನ್ನು ಮೂಡಿಸುವ ಸಂಕೇತಗಳು! 'ರೈಲು ಪ್ರವಾಸ' ಒಂದು ಮರೆಯದ ಅನುಭವ. ಒಂದಿಲ್ಲೊಂದು ವೇಳೆ ನಾವೆಲ್ಲರೂ ಕಂಡು ಅನುಭವಿಸಿದ ಥರ್ಡಕ್ಲಾಸ್ ರೈಲು ಪ್ರವಾಸದ ಅನುಭವವನ್ನು ಶ್ರೀ ಧಾರವಾಡಕರರ ಬಾಯಿಂದಲೇ ಕೇಳಬೇಕು. ''ಮಾಡಿದರೆ ಪ್ರವಾಸ ಮಾಡಬೇಕು ಥರ್ಡಕ್ಲಾಸಿನಲ್ಲಿಯೇ. ಅದು ಕರ್ತಾರನ ಕಮ್ಮಟ, ಜನತಾ ನಾಟಕ ಶಾಲೆ, ಪ್ರಪಂಚದ ವಿದ್ಯಾ ಶಾಲೆ. ತಮ್ಮ ಮುಂದೇ paper curtain ಅರ್ಥಾತ್ Times of India ಅಥವಾ 'ಹಿಂದೂ' ಹಿಡಿದುಕೊಂಡು ಒಬ್ಬರ ಮುಖವನ್ನೊಬ್ಬರು ನೋಡದೆ ಪ್ರವಾಸ ಮಾಡುವ ಜನರ ಫರ್ಸ್ಟ್ ಕ್ಲಾಸ್ ಅವರಿಗೆ ಸರ್ವಥಾ ಬೇಡ. ಸೆಕಂಡ್ ಕ್ಲಾಸ್ ಜನರ ರೀತಿಯೇ ಬೇರೆ. ಅದೇ ''ತಮ್ಮ ಇನ್ಕ್ರಿಮೆಂಟು, ಪ್ರೊಮೋಶನ್ನುಗಳ ಮಾತಿನ ಹೊರತು ಬೇರೆ ಏನನ್ನೂ ಅರಿಯದ'' ಈ ಜನರನ್ನು ನೋಡಿ ಶ್ರೀ ಧಾರವಾಡಕರರು ಮರುಗುತ್ತಾರೆ. ''ಈ ಜನ ಡಬ್ಬಿಯಲ್ಲಿ ಬರುವಾಗ ತಮ್ಮ ಜೀವನದ ದುಃಖವನ್ನೆ ಹೊತ್ತುಕೊಂಡು ಬಂದರು. ರೈಲಿನಲ್ಲಿಯೂ ಅದನ್ನೇ ಪ್ರಸಾದವಾಗಿ ಹಂಚಿದರು. ಇಳಿಯುವಾಗಲೂ ಅದನ್ನೇ ಗಂಟುಕಟ್ಟಿ ಹೊತ್ತುಕೊಂಡು ಇಳಿದರು.'' ಆದರೆ ಥರ್ಡಕ್ಲಾಸ್ ಜನ ''ಸಂಸಾರ ತಾಪತ್ರಯಗಳು ಏನೇ ಇರಲಿ. ಉರದುದ್ದವಿರಲಿ, ಶಿರದುದ್ದವಿರಲಿ, ಎಷ್ಟೇ ಇರಲಿ ಅವನ್ನೆಲ್ಲ ರೈಲಿನ ಹೊರಗೆ ಬಿಸಾಕಿ ಎಷ್ಟು ಆನಂದದಲ್ಲಿ ಕುಳಿತಿದ್ದಾರೆ ಈ ಭೂಪರು! ಜಮಖಾನೆ ಹಾಸಿದ್ದಾರೆ;

ಹಾಸಿಗೆ ಗಂಟಿನ ತಲೆದಿಂಬು ಇಟ್ಟಿದ್ದಾರೆ. ಹೊಡೀತಿದ್ದಾರೆ ಹರಟೆ! ಮಳೆ, ಬೆಳೆ, ಕಾರಹುಣ್ಣಿವೆಯ ಕರಿ. ಎಷ್ಟೊಂದು ವಿಷಯಗಳು!.... ಥರ್ಡ್‌ಕ್ಲಾಸ್ ಪ್ರಯಾಣದ ಈ ಸುಖ, ಈ ಆನಂದ, ಈ ಸಮಾಜ ಜೀವನದ ಅನುಭವ, ಈ ಕಾವ್ಯ, ಈ ಲೋಕಾನುಬೋಧೆ, ಇಲ್ಲಿ ಅಲ್ಲದೆ ನಿಮಗೆಲ್ಲಿ ಸಿಕ್ಕಬೇಕು!'' ಎಂಬ ಉದ್ಗಾರ ನಿಜವಾಗಿಯೂ ಅತ್ಯಂತ ಸಮಂಜಸವಾಗಿದೆ. 'ನಾನು ಭಾಷಣಕ್ಕೆ ಹೋಗಿದ್ದೆ' ಇದು ಪ್ರಖ್ಯಾತ ಭಾಷಣಕಾರರೆಂಬ ಪ್ರತೀತಿ ಹೊಂದಿದ ಶ್ರೀ ಧಾರವಾಡಕರರ ಅನುಭವದ ಕಥನ. ಭಾಷಣಕಾರರೆಂಬ ತಮ್ಮ ಪ್ರಖ್ಯಾತಿಯ ಬಗ್ಗೆ ಅವರು ಹೇಳುವ ಮಾತು, ಅವರನ್ನು ಬಲ್ಲವರು ಅವರಿಗೆ ಎಷ್ಟು ಚೆನ್ನಾಗಿ ಹೊಂದುತ್ತವೆ ಎಂಬುದನ್ನು ಬಲ್ಲರು. ''ನಾನು ಹೊರಗೆ ಹೊರಟರೆ ಸಾಕು, ಭಾಷಣದ ಗಾಳಿ ಬೀಸಿದಂತಾಗುತ್ತದೆ. ನಾನೆಂದರೆ ನಡೆದಾಡುವ ಭಾಷಣ. ಚಲತ್ ಶಿಲಾಶಾಸನ.'' ಭಾಷಣದ ಹುಚ್ಚು ಅತಿರೇಕವಾಗಿ ಎಲ್ಲ ಸಂದರ್ಭಕ್ಕೂ ಭಾಷಣಕ್ಕೆ ಕರೆಯುವವರನ್ನು ಕುರಿತು ಧಾರವಾಡಕರರು ಹೇಳುವ ಮಾತನ್ನು ಕೇಳಿ, ''ಬಾವಿ ತೋಡಬೇಕಾದರೆ ವಾಪಿಪ್ರಾರಂಭ ಭಾಷಣ, ಗಡಗಡೆ ಕೂಡಿಸ ಬೇಕಾದರೆ ಘಟಯಂತ್ರ ಪ್ರಾರಂಭ ಭಾಷಣ, ಹಗ್ಗ ಹಾಕಬೇಕಾದರೆ ರಜ್ಜು ಪ್ರಾರಂಭ ಭಾಷಣ, ಕೊಡ ಇಳಿಬಿಟ್ಟರೆ ಕುಂಭ ಪ್ರಾರಂಭೋತ್ಸವ, ನೀರು ಎಳೆದರೆ ಉದಕೋತ್ಸವ.'' ಇಲ್ಲಿಗೆ ಬಂತು ಸಮಾರಂಭಗಳ ಭಾಷಣಗಳ ಗತಿ! ಧಾರವಾಡದಲ್ಲಿ ಭಾಷಣಕಾರರಿಗೇನೂ ಕಡಿಮೆಯಿಲ್ಲ. ''ನೋಡಬೇಕು ನೀವು ನಮ್ಮ ಧಾರವಾಡವನ್ನು ನಾಡಹಬ್ಬ ಪ್ರಾರಂಭೋತ್ಸವಗಳ ಕಾಲದಲ್ಲಿ! ಏನು ಪರ್ವಕಲಾ ಅದು ಭಾಷಣ ಬ್ರಾಹ್ಮಣರಿಗೆ! ಎಲ್ಲರೂ ಪಕ್ಷಮಾಸದ ಆಚಾರ್ಯರು. ಈ ಕಾಲದಲ್ಲಿ ಕರ್ನಾಟಕದ ಎಲ್ಲ ರೈಲೂ ಬಸ್ಸೂ ಒಂದೇ ಮುಖವಾಗಿ ಪ್ರವಹಿಸುತ್ತವೆ – ಧಾರವಾಡದ ಅರಬ್ಬೀ ಸಮುದ್ರದ ಕಡೆಗೆ'' – ಇದು ಧಾರವಾಡದ ಎಲ್ಲ ಹಿರಿಕಿರಿ ಭಾಷಣಕಾರರ ಪ್ರತಿ ವರ್ಷದ ಅನುಭವ. ಪುಸ್ತಕದ ಹೆಸರನ್ನು ಹೊತ್ತ ಪ್ರಬಂಧ 'ಧೂಮ್ರವಲಯ' ಸಿಗರೇಟ ಮಹಿಮೆಯನ್ನು ಬಣ್ಣಿಸುವ ಸಾಹಸ. ಅವರ ದೃಷ್ಟಿಯಲ್ಲಿ ಸಿಗರೇಟು ಬ್ರಹ್ಮಸೃಷ್ಟಿಯ ಮಹಾಶ್ವೇತೆ. ಧಾರವಾಡಕರರು ಸಿಗರೇಟಿನ ಪರಮಭಕ್ತರು. ಸಿಗರೇಟಿನ ಮಹಿಮೆ ಅವರ ಮಾತಿನಲ್ಲಿಯೇ ಕೇಳಬೇಕು. ''ಸಿಗರೇಟು ಸ್ನೇಹದ ಸಂಕೇತ, ಪರಿಚಯದ ಸಂಚಕಾರ, ಕಾವ್ಯದ ಸೆಲೆ, ಇಹಜೀವನದ ಬ್ರಹ್ಮಾನಂದ, ರಸಿಕತೆಯ ಮಡುವು; ಸ್ನೇಹದ ವಿದ್ಯುತ್ ಶಕ್ತಿಯ ಸ್ವಿಚ್ ಎಂದರೆ ಸಿಗರೇಟು.'' ಅವರ ಪ್ರಬಂಧಗಳ ಬರವಣಿಗೆಯೂ ಸಿಗರೇಟಿನ ಧೂಮ್ರವಲಯದಂತೆ ಸುರುಳಿ ಸುರುಳಿಯಾಗಿ ಹೊರಟ ವಿಚಾರ

ವಿಲಾಸಗಳು. 'ದೂರದೃಷ್ಟಿ'ಯೆಂಬ ಅವರ ಪ್ರಬಂಧ ತೀರ ಇತ್ತೀಚೆ ಅವರು ಜಡ್ಡಿಗೆ ಬಿದ್ದಾಗಿನ ಅನುಭವ-ಕಥನ. ಮಾತನಾಡಿಸಲು ಬಂದ ಪ್ರತಿಯೊಬ್ಬರೂ ಉಪದೇಶ ಹೇಳುವವರೇ. ಜಡ್ಡಿಗೆ ಬಿದ್ದ ಗೃಹಸ್ಥನ ಗತಿ, ತಂದೆ- ಮಗ ಕತ್ತೆಯನ್ನು ಹೊತ್ತ ಕಥೆಯನ್ನು ನೆನಪಿಗೆ ತರುತ್ತದೆ. ಧಾರವಾಡಕರರು ಜೀವನವನ್ನು ನೋಡುವ ದೃಷ್ಟಿಯನ್ನು ಇಲ್ಲಿ ಕಾಣಬಹುದು. ಅವರೇ ಒಪ್ಪುವಂತೆ, ಅವರಿಗೆ ಸಾಕಷ್ಟು ದೂರದೃಷ್ಟಿಯಿಲ್ಲದಿದ್ದರೂ, ದೂರದ ದೃಷ್ಟಿ (Noncomplaining nature) ಇದೆ.

ಇವೆಲ್ಲ ಪ್ರಬಂಧಗಳ ಚೆಲುವೂ ಅವು ಒಡಮೂಡಿಸುವ ವ್ಯಕ್ತಿತ್ವದ ರಸಿಕತೆಯಲ್ಲಿದೆ. ಜಗತ್ತಿನಲ್ಲಿಯ ದುಃಖ ಅನ್ಯಾಯಗಳನ್ನು ಕಂಡು ಮನಸ್ಸನ್ನು ಕಹಿ ಮಾಡಿಕೊಳ್ಳದೇ, ಸುತ್ತಲೂ ಒಳ್ಳೆಯದನ್ನು, ಸುಂದರವಾದುದನ್ನು ಕಂಡು, ಅದರಲ್ಲಿಯೇ ಆನಂದವನ್ನು ಪಡೆಯುವ ವಿನೋದ ಪ್ರಿಯ ಪ್ರವೃತ್ತಿ ಅವರದು. ಈ ಪಡೆದ ಆನಂದವನ್ನು ಎಲ್ಲರಿಗೂ ಹಂಚುವ ಜಾಣ್ಮೆ, ರಸಿಕತೆ ಅವರಲ್ಲಿ ಧಾರಾಳವಾಗಿವೆ. ಈ ಗುಣಗಳ ಸುಂದರ ಫಲಗಳೇ ಈ ಪ್ರಬಂಧಗಳು, ಹರಟೆಗಳು. ಅವುಗಳ ಬರಹದ ಶೈಲಿಯೂ ಸರಳ ಹಾಗೂ ಸುಲಲಿತ. ನಿತ್ಯ ಬಳಕೆಯ, ಧಾರವಾಡದ ಮಣ್ಣಿನ ವಾಸನೆಯನ್ನೇ ಹೊತ್ತಂಥ ಭಾಷೆಯನ್ನು ನಾವು ಇಲ್ಲಿ ಕಾಣಬಹುದು. ಈ ಪ್ರಬಂಧಗಳನ್ನು ಓದಿದಾಗ ಕವಿ ಹೇಳಿದ 'ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ' ಎಂಬ ಮಾತು ನೆನಪಿಗೆ ಬರುತ್ತದೆ. ಹದವಾದ ಮನಸ್ಸಿನಿಂದ ನಿರರ್ಗಳವಾಗಿ, ನಿರಾಯಾಸವಾಗಿ ಹರಿಯುವ ಸರಸ ಸಲ್ಲಾಪಗಳಿವು. ಇಲ್ಲಿ ಪಾಂಡಿತ್ಯದ ಜಡತೆಯಿಲ್ಲ, ಇವುಗಳನ್ನು ಓದುವುದೆಂದರೆ ಬೆಳದಿಂಗಳಿನಲ್ಲಿ ವಿರಹಿಸಿದಂತೆ. ಈ ಪ್ರಬಂಧಗಳನ್ನು ಕನ್ನಡದ ಸಾಹಿತ್ಯಪ್ರೇಮಿಗಳು ಓದಿ, ಅವುಗಳಲ್ಲಿಯ ಸುಸಂಸ್ಕೃತವಾದ ಮನೋರಂಜನೆಯನ್ನು ಅನುಭವಿಸಲಿ! ಜ್ಞಾನಪ್ರವಾಹವನ್ನು ಆಸ್ವಾದಿಸಿ ತಣಿಯಲಿ! ಶ್ರೀ ಧಾರವಾಡಕರರು ಇಂಥ ಅನೇಕ ಪ್ರಬಂಧಗಳಿಂದ ಕನ್ನಡ ಸಾಹಿತ್ಯ ಸಿರಿಯನ್ನು ಹೆಚ್ಚಿಸುತ್ತಿರಲಿ ಎಂದು ಹಾರೈಸುತ್ತೇನೆ.

ಭೋಟಾಮಹಾಬಳೇಶ್ವರ
ಧಾರವಾಡ — ಸದಾಶಿವ ಒಡೆಯರ
೩೦-೧೨-೧೯೬೫

# ಮೊದಲ ಮಾತು

ನಾನು ಕಳೆದ ಹಲವು ವರುಷಗಳಲ್ಲಿ ಬರೆದ ಲಘುನಿಬಂಧಗಳನ್ನು ಸಂಕಲಿಸಿ ಪ್ರಸಿದ್ಧಿಸಬೇಕೆಂದು ಅನೇಕ ದಿನಗಳಿಂದ ಬಯಸಿದ್ದೆ. ಆ ಬಯಕೆಯೇ ಈಗ "ಧೂಮ್ರ ವಲಯಗಳು" ಎಂಬ ಹೆಸರಿನಿಂದ ತಮ್ಮ ಕೈಸೇರುತ್ತಿದೆ. ಇನ್ನುಳಿದ ಹಲವು ಹಳೆ-ಹೊಸ ನಿಬಂಧಗಳು ಇನ್ನೊಂದು ಸಂಕಲನದ ವಸ್ತುವಾಗಿ ತೀವ್ರ ಹೊರಬರಬಹುದು.

- ಈ ನಿಬಂಧ ಅಥವಾ ಹರಟೆಗಳನ್ನು ಓದಿದ ಅನೇಕರು ಇವುಗಳಲ್ಲಿಯ ನಗೆಯನ್ನು ಮೆಚ್ಚಿಕೊಂಡರು. ಇದನ್ನು ಓದುವಾಗ, ನಗೆ ನಗೆಗಾಗಿ ಮಾತ್ರವಿದೆಯೇ ಹೊರತು ಯಾವುದಾದರೂ ವ್ಯಕ್ತಿ ಇಲ್ಲವೆ ವಸ್ತು ಇಲ್ಲವೆ ಸ್ಥಳವನ್ನು ಸೂಚಿಸಿ, ಹೀಗಳೆವ ಉದ್ದೇಶ ಸುತರಾಂ ಇಲ್ಲವೆಂಬುದನ್ನು ಮಾನ್ಯ ವಾಚಕರು ಗಮನಿಸಬೇಕು. ನಗೆಗಾರ ತನ್ನನ್ನೇ ನಗೆಗೀಡು ಮಾಡಿಕೊಳ್ಳದೆ ಬಿಡನೆಂದು ಇರುವಾಗ, ತನ್ನ ಸುತ್ತಲಿನ ಪರಿಸರವನ್ನು ನಗೆಗೆಡೆ ಮಾಡಿದರೆ, ಆದರಲ್ಲಿ ಯಾವ ಹೀಯಾಳಿಕೆಯ ಉದ್ದೇಶವೂ ಇರದು. "ನಾನು ಭಾಷಣಕ್ಕೆ ಹೋಗಿದ್ದೆ" - ಎಂಬಲ್ಲಿ ಬರುವ ಮಾತುಗಳನ್ನು ನೋಡಿ, ಆದರಲ್ಲಿ ಹೀಯಾಳಿಕೆಯ ಉದ್ದೇಶವನ್ನು ಕಲ್ಪಿಸುವುದಾದರೆ, ಧಾರವಾಡದ ನೀರು, ಗಾಳಿ, ಅನ್ನಗಳಿಂದ ಪೋಷಿತವಾದ ಈ ದೇಹ ಉಂಡ ಮನೆಗೆ ಎರಡು ಬಗೆದಂತಾದೀತು. ಧಾರವಾಡದಿಂದ ಅಗಲಬೇಕಾಗಿ ಬಂದಾಗ ಕವಿವರ್ಯ ಬೇಂದ್ರೆ ಅವರು ಹೇಳಿದ ಮಾತುಗಳು, ಧಾರವಾಡದ ಸಾಂಸ್ಕೃತಿಕ ನೆಲದಲ್ಲಿ ಕೆಲಕಾಲ ಸಹಿತ ನಿಂತ ಯಾವ ಮನುಷ್ಯನಿಗೂ ಅನ್ವಯಿಸುತ್ತವೆ :

  *ನಾವು ಬರ್‍ತೇವಿನ್ನ ನೆನಪಿರಲಿ ತಾಯಿ*
  *ನಂ ನಮಸ್ಕಾರ ನಿಮಗ,*
  *ಕಾಯ್ದಿರಿ - ಕೂಸಿನ್ಹಾಂಗ ನಮಗ -*

*ನಾವು ಬರ್ತೇವಿನ್ನ*
*ನೀವು - ತಾಯಿತನ ನಡಿಸಿದಿರಿ*
*ಹಾಲು ಕುಡಿಸಿದರಿ*
*ಮರಳು ಆಡಿಸಿದಿರಿ ಕನಸಿನ್ಯಾಗ*
*ಬೆಳಗು-ಆತು ಭಾಳ ಬ್ಯಾಗ*
*ಜೋಲಿ - ಹೋದಾಗ ಆದಿರಿ ಕೋಲು*
*ಹಿಡಿದಿರಿ ನಮ್ಮ ತೋಲು*
*ನಾವು - ಮರತೇವದನ ಹ್ಯಾಂಗ?*
*ಏನು ನಿಮ್ಮ ಮೋಲು - ಲೋಕದಾಗ ?*
*ನೂರಾರು ವೇಷ ಕಳಿಸಿದಿರಿ*
*ಮಡ್ಡ ಇಳಿಸಿದರಿ*
*ಮಾನ ಬೆಳೆಸಿದಿರಿ*
*ನಾವು ಬರತೇವಿನ್ನ*
*ನಂ ನಮಸ್ಕಾರ ನಿಮಗ -*

ಆದ್ದರಿಂದ, ಆ ಹರಟೆಯಲ್ಲಿ ಬಂದ ಧಾರವಾಡ ವಿಷಯಕ ಮಾತುಗಳು ಕೇವಲ ಪರಿಹಾಸ ಮಾತ್ರವೆಂದು ಪರಾಂಬರಿಸಬೇಕು.
ಪರಿಹಾಸ ವಿಜಲ್ಪಿತಮ್ ಸಖೇ,
ಪರಮಾರ್ಥೇನ ನ ಗೃಹ್ಯತಾಂ ವಚಃ ||

- ಈ ಸಂಕಲನದಲ್ಲಿಯ ನಿಬಂಧಗಳನ್ನು ಓದುವವರು ನಗುವರೆಂದು ಹೇಳಿದೆನಲ್ಲವೇ? ಆದೇ ಮಾನವತೆಯ ಲಕ್ಷಣ. ನಗು-ಅಳು ಮಾನವ ಪ್ರಾಣಿಗೆ ಮಾತ್ರ ಸಾಧ್ಯವಲ್ಲದೆ, ಇತರ ಯಾವ ಪ್ರಾಣಿಗೂ ಸಾಧ್ಯವಿಲ್ಲ.
"Man is the only animal that laughs and weeps"
ಎಂದು William Hazlitt ಹೇಳಿದರು.
ನಗೆ ಪರಮಾತ್ಮನ ಹಾಗೆ ಅನಂತರೂಪವುಳ್ಳದು. ನಗೆ, ಮೃದುನಗೆ, ಕಹಿ ನಗೆ, ಕ್ರೂರ ನಗೆ, ಠಕ್ಕ ನಗೆ, ಆಢ್ಯತೆಯ ನಗೆ, ಸಂತೃಪ್ತಿಯ ನಗೆ, ಸೌಜನ್ಯದ ನಗೆ, ದಾಕ್ಷಿಣ್ಯದ ನಗೆ, ಹೋಹೋಹೋ ಅಟ್ಟಹಾಸದ ಅರ್ಭಟೆಯ ನಗೆ, - ಇವೆಲ್ಲ ವಿನೋದಪ್ರಾಸಾಧದ ವಿವಿಧ ಕೋಣೆಗಳು. ನಗೆಯ ಹುಟ್ಟನ್ನು ಕುರಿತು ಸರ್ವಜ್ಞ ಹೀಗೆ ಹೇಳಿದನು :

*ಕತ್ತೆ ಅರಚಿದಡಲ್ಲಿ, ತೊತ್ತು ಹಾಡಿದಡಲ್ಲಿ*
*ಮತ್ತೆ ಕುಲರಸಿಕನಿರುವಲ್ಲಿ - ಕಡುನಗೆಯು*
*ಹುತ್ತ ಕಾಣಯ್ಯ ಸರ್ವಜ್ಞ.*

ಆದರೆ, ನಗೆ ಬರಬೇಕಾದರೆ, ಕತ್ತೆಯೇ ಅರಚಬೇಕೆಂದೇನೂ ಇಲ್ಲ; ಕತ್ತೆಯಂಥವರು ಮಾತನಾಡಿದರೂ, ಕುಲರಸಿಕನು ಅಲ್ಲಿ ನಗೆಯನ್ನು ಕಾಣುತ್ತಾನೆ. ತಾನು ಕಂಡ ನಗೆಯನ್ನು ಬೇಟೆಯಾಡಿದ ಮೃಗದ ಹಾಗೆ ಎತ್ತಿ ತೋರುತ್ತಾನೆ. ನಗೆಯ ಸಾಮರ್ಥ್ಯವಿಲ್ಲದ ವ್ಯಕ್ತಿ ಕೊಲೆ-ಒಳಸಂಚುಗಳಿಗೆ ಮಾತ್ರ ಯೋಗ್ಯನೆಂದು Carlyle ಹೇಳಿದರು :

"The man, who can not laugh is not only fit for treasons, stratagems and spoils, but his whole life is already a treason and stratagem."

ಆದ್ದರಿಂದ ಮನುಷ್ಯ ನಗಬೇಕು. ನಗುವುದನ್ನು, ನಗಿಸುವುದನ್ನು ಕಲಿಯಬೇಕು. ಎಷ್ಟೋ ಸಲ ಮನುಷ್ಯ ಅಳಬಾರದೆಂದು ನಗುತ್ತಾನೆ. ಇನ್ನು ಸ್ವಲ್ಪ ತಡೆದಿದ್ದರೆ, ಅತ್ತೇಬಿಡುತ್ತಿದ್ದನೇನೋ! "I hasten to laugh at everything for fear of being obliged to weep." ಎಂದು ಬಿಮಾರ್ಕಿಯಾಸ್ ಎನ್ನುವವರು ಹೇಳಿದರು.* ಅಂತಲೇ, ಎಷ್ಟೋ ಸಲ ನಗೆಯ ಸಿಹಿನೀರಿನ ಮೂಲ ಕಣ್ಣೀರಿನ ಕಡಲೇ ಇದೆಯೇನೋ ಯಾರು ಬಲ್ಲರು? ನಗೆ-ಅಳು ತೀರ ಸಮೀಪದ ಆಪ್ತಬಂಧುಗಳು. ಕೈಲಾಸಮ್ ಹೇಳಿದ ಹಾಗೆ :

The barque of humour often veers
Through shoals of smiles to seas of Tears.

*(ಕಿರಿಯಾಳದ ನಗೆ - ನೀರಿನ ಮೇಲೆ*
*ತಿರುಗುತ ಬಹುವೇಳೆ*
*ಕಣ್ಣೀರಿನ ಕಡಲಿನ ಪಾಲು*
*ಹಾಸ್ಯದ ಹರಿಗೋಲು*

*- ಜಿ.ಪಿ. ರಾಜರತ್ನಮ್)*

---

* ಡಾ. ಎಂ.ಎಸ್. ಸುಂಕಾಪುರ - ಕನ್ನಡ ಸಾಹಿತ್ಯದಲ್ಲಿ ಹಾಸ್ಯ.

ಅಂತಲೇ, ನಗುವು ಆತ್ಮಶುದ್ಧೀಕರಣ ಶಕ್ತಿ. ಅದು ನಗಿಸುವವನ, ನಗುವವನ "ಹೃತ್ಕಪಾಟೋದ್ಘಾಟ"ನ ಮಾಡುತ್ತದೆ. ಅಳುವೂ ಹಾಗೆಯೇ. ಡಿ.ವಿ.ಜಿ. ಅವರು "ಮಂಕುತಿಮ್ಮನ ಕಗ್ಗ"ದಲ್ಲಿ ಹೇಳಿದ ಹಾಗೆ :

*ಅಳುವೇನು? ನಗುವೇನು? ಹೃತ್ಕಪಾಟೋದ್ಘಾಟ*
*ಶಿಲೆಯೆ ನೀಂ ಕರಗದಿರಲ್? ಅರಳದರೆ ಮರುಳೇಂ?*
*ಒಳಜಗವ ಹೊರವಡಿಪ, ಹೊರಜಗವನೊಳಕೊಳುವ*
*ಸುಳುದಾರಿಯೊಳು ನಗುವ - ಮಂಕುತಿಮ್ಮ.*

ಅವರೇ ಹೇಳುವಂತೆ

*ನಗುವೊಂದು ರಸಪಾಕ, ಅಳುವೊಂದು ರಸಪಾಕ,*
*ನಗುವು ಆತ್ಮ ಪರಿಮಳವ ಪಸರಿಸುವ ಕುಸುಮ.*

"Laughter is above all, a corrective" ಎಂದು Bergson ಹೇಳಿದರು.

ಆದ್ದರಿಂದ, ಮನುಷ್ಯ ಯಾಕೆ ನಗುತ್ತಾನೋ! ಅಂತೂ ನಗುತ್ತಾನೆ. ಅನೇಕ ಕಾರಣಗಳಿಗಾಗಿ ನಗುತ್ತಾನೆ. ಎಷ್ಟೋ ಸಲ ಈ ದುರ್ದೈವೀ ಘಟಿಂಗ್ ಜಗತ್ತನ್ನು ಮರೆಯಲು ನಗುತ್ತಾನೋ ಯಾರು ಬಲ್ಲರು?

Hartley Coleridge ಒಂದು ಸಲ ಹೇಳಿದರು :

On this hapless earth
There is small sincerity or mirth;
Laughter of it is an art
To drown the outcry of the heart.

ಇದ್ದರೂ ಇರಬಹುದು; ಅದಕ್ಕಾಗಿಯೇ, ಹೀಯಾಳಿಕೆಯ ನಗೆ ಶ್ರೇಷ್ಠ ನಗೆಯಾಗದು. ಅದು ತಾಮಸಿಕ. ಕವಿವರ್ಯ ಬೇಂದ್ರೆ ಅವರು ಹೇಳಿದ ಹಾಗೆ–

*ತನ್ನರಿವಿನ ಎಚ್ಚರಿಕೆಯಲ್ಲಿ*
*ಮಿಂಚುವ ಸ್ಮಿತ ಹಸಿತ - ಸಾತ್ವಿಕ*
*ತಾನು ಅಜ್ಞಾನದಲ್ಲಿದ್ದು ಹೆರವರನ್ನು*
*ನಗೆಗೀಡು ಮಾಡುವುದು ನಗೆಗೇಡು - ತಾಮಸಿಕ*

ಇಂಥ ಹೊಗೆಯ ತಾಮಸಿಕ ನಗೆ ಬೇಡ -

*ನಗೆಯಲ್ಲಿ ಹೊಗಿ ಬ್ಯಾಡ*
*ಹೊಗಿ ಹಿಂದ ಧಗಿಬ್ಯಾಡ*
*ಬಾಳಿಗೆ ಎರಡು ಬಗಿಬ್ಯಾಡ*
*ನನ ಗೆಳೆಯಾ*
*ಬ್ಯಾಸರಿಕೆ ಬ್ಯಾಡೊ ನಗುವಾಗ*

*(ಅಂಬಿಕಾತನಯದತ್ತ - ಯಕ್ಷಯಕ್ಷಿ)*

ನಗೆಯಲ್ಲಿ ಹೊಗಿ ಬ್ಯಾಡ-ಹೊಗಿ ಹಿಂದ ಧಗಿ ಬ್ಯಾಡ - ಇದನ್ನೇ ಡಿ.ವಿ.ಜಿ. ಅವರು ಕೂಡ,

*ನಗುವುದು ಸಹಜಧರ್ಮ, ನಗಿಸುವುದು ಪರಧರ್ಮ*
*ನಗುವ ಕೇಳುತ ನಗಿಸುವುದು ಅತಿಶಯದ ಧರ್ಮ*
*ನಗುವ, ನಗಿಸುವ, ನಗಿಸಿ ನಗುತ ಬಾಳುವ ವರವ*
*ಮಿಗೆ ನೀನು ಬೇಡಿಕೊಳೊ ಮಂಕುತಿಮ್ಮ ॥*

ಎಂದು ಹೇಳಿದರು.

ಈ ನಿಬಂಧಗಳಲ್ಲಿ ಬರುವ ನಗೆ ಯಾವ ಪ್ರಕಾರದ್ದೊ ಯಾವ ವಿಧದ್ದೋ ನಾನರಿಯೆ. - ಆದರೆ ಈ ನಗೆಯ ಹಿಂದೆ ಹೊಗೆಯಿಲ್ಲ - ಧಗೆಯಿಲ್ಲ ಎಂಬುದು ಮಾತ್ರ ಖಚಿತ.

● ನನ್ನ ಈ ಹರಟೆಗಳ ಸಂಕಲನಕ್ಕೆ ಒಂದು ಮುನ್ನುಡಿಯನ್ನು ಬರೆದು ಕೊಡಬೇಕೆಂದು ಮಾನ್ಯ ಮಿತ್ರ ಸದಾಶಿವ ಒಡೆಯರನ್ನು ಬಿನ್ನವಿಸಿಕೊಂಡಾಗ, ಅವರು ಆನಂದದಿಂದ ಒಪ್ಪಿಕೊಂಡು, ಅಂದವಾದ ಮುನ್ನುಡಿಯನ್ನು ದಯಪಾಲಿಸಿದ್ದಾರೆ. ಸದಾಶಿವ ಒಡೆಯರು ಸಾಹಿತಿಗಳು; ದಕ್ಷ ಆಡಳಿತಗಾರರು; ಎಲ್ಲಕ್ಕೂ ಹೆಚ್ಚು ಹೃದಯ ಸಂಪತ್ತುಳ್ಳ ಸುಸಂಸ್ಕೃತ ಸ್ನೇಹಿತರು. ಅವರ ಕೂಡ ಮಾತನಾಡುವುದೆಂದರೇ ಒಂದು ರಸದೂಟ. ಆಫೀಸಿನಲ್ಲಿ ಅವರನ್ನು ಭೆಟ್ಟಿಮಾಡಿ, ಮುಖ ಒಣಗಿಸಿಕೊಂಡು ಬಂದವರನ್ನು ನಾನಿನ್ನೂ ಕಂಡಿಲ್ಲ, ಅದು ಅವರ ಸಾತ್ವಿಕ ಸಜ್ಜನಿಕೆಯ ಕುರುಹು. ಅಖಿಲಭಾರತದಲ್ಲಿಯೇ ತೀರ ಚಿಕ್ಕ ವಯಸ್ಸಿನಲ್ಲಿ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಜವಾಬುದಾರಿಯನ್ನು ಹೊತ್ತ ಮಾನ್ಯ ಮಿತ್ರರಾದ ಶ್ರೀ ಸದಾಶಿವ

ಒಡೆಯರು ನನ್ನಲ್ಲಿ ತೋರಿಸಿದ ಅಭಿಮಾನಕ್ಕಾಗಿ ಅವರಿಗೆ ತುಂಬಾ ಉಪಕೃತ.

- ಸ್ವತಃ ಸಾಹಿತಿಗಳೂ, ನೀರದ ಪ್ರಕಾಶನದ ಒಡೆಯರೂ ಆದ ಮಿತ್ರ ವರದರಾಜ ಹುಯಿಲಗೋಳ ಅವರು ಈ ಪ್ರಕಟನೆಯ ಅವಕಾಶವನ್ನು ಕಲ್ಪಿಸಿ ಕೊಟ್ಟಿರದಿದ್ದರೆ, ಇನ್ನೂ ಎಷ್ಟು ದಿನ ಈ ನಿಬಂಧಗಳು ಗಜಗರ್ಭದಲ್ಲಿ ಇರುತ್ತಿದ್ದವೋ ಹೇಳಲಾರೆ. ಅದಕ್ಕಾಗಿ ಅವರಿಗೆ ಕೃತಜ್ಞತೆಗಳು.

- ರಕ್ಷಾಕವಚಕ್ಕಾಗಿ ಸುಂದರವೂ – ಬಹುಶಃ ಯಥಾವತ್ತೂ – ಆದ ಚಿತ್ರವನ್ನು ಬರೆದುಕೊಟ್ಟದ್ದಕ್ಕಾಗಿ "ಕರ್ಮವೀರದ" ಕಲಾಕಾರ ಶ್ರೀ ಟಿ.ಕೆ. ರಾವ್ ಅವರಿಗೂ, ತುಂಬಾ ಮುತವರ್ಜಿ ವಹಿಸಿ ಅಂದವಾಗಿ ಮುಂದ್ರಿಸಿದ 'ವಸಂತ ಪ್ರಿಂಟಿಂಗ್ ವರ್ಕ್ಸ್'ದ ಒಡೆಯರಾದ ಶ್ರೀಮಾನ್ ಎಂ.ಜಿ. ಪಾಲೇಕರ ಅವರಿಗೂ ನನ್ನ ಕೃತಜ್ಞತೆಗಳು.

ಜೆ.ಎಸ್.ಎಸ್. ಕಾಲೇಜು, ಧಾರವಾಡ
೧೪-೧-೧೯೬೬
ಶ್ರೀ ಮಕರ ಸಂಕ್ರಮಣ

ರಾ.ಯ. ಧಾರವಾಡಕರ

*To my students of the J.S.S. College, Dharwar*
*Who made teaching not a duty*
*But a pleasure for me -*

**R. Y. D.**

ಒಂದು ಮಾತು :

He who laughs lasts.

ಒಂದು ಗಾದೆ ಮಾತು :

Laugh and the world laughs with you.
Weep, and you weep alone-

ಒಂದು ಹಳೆಯ ಗಾದೆ :

He laughs best, who laughs last.

ಒಂದು ಹೊಸ ಗಾದೆ :

He laughs best, who laughs at himself.

ಕವಿ ವಾಣಿ :

Laugh and be merry.
Better remember the world with a song.

- *John Masefield*

---

ಧೂಮ್ರ ವಲಯಗಳು - ಪುಸ್ತಕವನ್ನು ಕರ್ನಾಟಕ ವಿಶ್ವವಿದ್ಯಾಲಯದವರು ಬಿ.ಎಸ್‌ಸಿ. (೧), ಬಿ.ಕಾಮ್. (೧) ಕ್ಕೆ ಪಠ್ಯ ಪುಸ್ತಕವಾಗಿ ಇರಿಸಿದ್ದಕ್ಕಾಗಿ ಉಪಕೃತರು.

ಪ್ರಕಾಶಕರು.

# ಪರಿವಿಡಿ


| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಎರಡು ನುಡಿ | v |
| ಅಧ್ಯಕ್ಷರ ಮಾತು | vi |
| ಪ್ರಕಾಶಕರ ಮಾತು | vii |
| ಆಯ್ಕೆ ಸಮಿತಿ | ix |
| ಮುನ್ನುಡಿ | x |
| ಮೊದಲ ಮಾತು | xvii |
| ೧. ಹರಟೆ ಅಥವಾ ನಿಬಂಧವೆಂದರೇನು? | ೧ |
| ೨. ನನ್ನ ಅಹಂಕಾರ | ೧೧ |
| ೩. ರೈಲು ಪ್ರವಾಸ | ೧೮ |
| ೪. ನಾನು ಭಾಷಣಕ್ಕೆ ಹೋಗಿದ್ದೆ | ೩೪ |
| ೫. ಮೂಢನಂಬಿಕೆಗಳು | ೫೧ |
| ೬. ದೂರದೃಷ್ಟಿ | ೬೦ |
| ೭. ಧೂಮ್ರ ವಲಯಗಳು | ೭೨ |

ನಗೆಯಲ್ಲಿ ಹೊಗಿ ಬ್ಯಾಡ
- ಹೊಗಿ ಹಿಂದ ಧಗಿ ಬ್ಯಾಡ
ಬಾಳಿಗೆ ಎರಡು ಬಗಿ ಬ್ಯಾಡ
ನನಗೆಣೆಯಾ

**ಬ್ಯಾಸರಿಕೆ ಬ್ಯಾಡೋ ನಗುವಾಗ**
**ಅಂಬಿಕಾತನಯದತ್ತ**

## ಹರಟೆ ಅಥವಾ ನಿಬಂಧವೆಂದರೇನು?

"ಗೊಡ್ಡು ಹರಟೆ", "ಕಾಡು ಹರಟೆ", "ಹಾಳು ಹರಟೆ ಕೈಯಲ್ಲಿ ಪರಟೆ" - ಎಂದು ಮೊದಲಾಗಿ ನಾವು ಹರಟೆಯನ್ನು ಸಾಮಾನ್ಯವಾಗಿ ಹೀಯಾಳಿಸಿದರೂ ಹರಟೆಯನ್ನು ಹೊಡೆಯುವುದನ್ನು ಯಾರೂ ನಿಲ್ಲಿಸಲಿಲ್ಲ. ರಾಮಾಯಣದಂತೆ ಹರಟೆ ತಲೆಬುಡವಿಲ್ಲದೆ ಬೆಳೆಯುತ್ತಲೇ ಇದೆ. ಹರಟೆ ಹೊಡೆಯುವುದು, ಕಥೆ ಹೊಸೆಯುವುದು ಮನುಷ್ಯ ಸ್ವಭಾವವಾಗಿವೆ. ಸ್ವತಃ ಹರಟೆ ಹೊಡೆಯಲು ಬಾರದಿದ್ದವರೂ ಕೂಡ ಹರಟೆಯನ್ನು ಕೇಳಿ, ಹೊಡೆಸಿ, ಆನಂದಪಡುತ್ತಿದ್ದಾರೆ. ಬದನೆಕಾಯಿ, ವಾದಿ-ರಾಜ ಗುಳ್ಳವಾದರಾಯ್ತು; ತಿನ್ನಲು ಅಭ್ಯಂತರವಿಲ್ಲ.

ಹಾಗಾದರೆ ಈ ಹರಟೆಯೆಂದರೇನು? ಅದರಲ್ಲಿ ನಮಗೆ ಇಷ್ಟು ಉತ್ಸಾಹವೇಕೆ? - ಎಂಬುದನ್ನು ಚರ್ಚಿಸುವುದೇ ಇಲ್ಲಿ ನನ್ನ ಉದ್ದೇಶವಾಗಿದೆ. ಕನ್ನಡದಲ್ಲಿ ಅದು ಬೆಳೆದ ರೀತಿ ಈಗ ಪ್ರಸ್ತುತವಲ್ಲ.

"ಹರಟೆ" ಎಂಬುದನ್ನು ನಾವು ಇಂದು ಉಪಯೋಗಿಸುವುದು ಇಂಗ್ಲಿಷದ "essay" ಎಂಬುದರ ಪರ್ಯಾಯ ಪದವಾಗಿ. ಹಿಂದಿನ ನಮ್ಮ ಕವಿಗಳು ರಾಜರ "ಸುಖ ಸಂಕಥಾ ವಿನೋದದಲ್ಲಿ" "ಹರಟೆ" ಹೊಸೆದಿರಬಹುದಾದರೂ ಗ್ರಂಥಸ್ಥ ರೂಪವಾಗಿ ಅದು ಬಂದುದು ಇತ್ತೀಚೆ ಮಾತ್ರ. ಇಂಗ್ಲಿಷದಿಂದ ಆಮದುವಾಗಿ ಬಂದ ಅನೇಕ ಸರಕುಗಳಂತೆ "ಹರಟೆ"ಯು ಕೂಡ ಹಡಗು ಇಳಿದುಬಂದುದೇ. ಕನ್ನಡಕ್ಕೆ ಇಂಗ್ಲಿಷ್ ಸಂಪರ್ಕ ಬಾರದಿದ್ದಲ್ಲಿ "ಹರಟೆ" ಇನ್ನೂ 'ಕಾಡಾಗಿ', ಬಹುಶಃ ಸಾಹಿತ್ಯ ರೂಪವನ್ನು ಕಾಣದೆ ಇರುತ್ತಿತ್ತು.

ಹಾಗಾದರೆ ಪುನಃ ಅದೇ ಪ್ರಶ್ನೆ : 'ಹರಟೆ' ಎಂದರೇನು?-ವ್ಯಾಖ್ಯೆ ಹೇಳುವುದು ಯಾವಾಗಲೂ ಕಠಿಣ ಸಾಧ್ಯ. ವ್ಯಾಖ್ಯೆ ಜ್ಞಾನದ ಆದಿ : ಅಂತ್ಯ; ಬೀಜ: ಹಣ್ಣು. ಒಂದು ವಿಷಯವನ್ನು ಪೂರ್ಣ ಗ್ರಹಿಸಿದ ಹೊರತು ಅದರ ವ್ಯಾಖ್ಯೆ ಹೇಳಲು ಸಾಧ್ಯವಿಲ್ಲ; ಒಂದು ವ್ಯಾಖ್ಯೆಯಿಂದ ಮೊದಲು ಮಾಡಿದ ಹೊರತು ವಿಷಯ ಪ್ರವೇಶ ವಾಗುವಂತಿಲ್ಲ. ತುಳಿಯದೆ ದಾರಿ ಬೀಳದು; ದಾರಿಬೀಳದೆ ತುಳಿಯಲಾಗದು. ಅದರಲ್ಲಿಯೂ 'ಹರಟೆ' ಅಥವಾ 'ನಿಬಂಧ'ದ ವಿಷಯ ತುಂಬಾ ಕಷ್ಟದಾಯಕ ವಾಗಿದೆ. ಯಾಕಂದರೆ ನಿಬಂಧವೆಂದರೇನೆಂಬುದನ್ನು ನಿಶ್ಚಿತವಾಗಿ ಹೇಳಲು ಬರುವಂತಿಲ್ಲ, ಆ ಪದವನ್ನು ಬಹುವಿಧವಾಗಿ ಉಪಯೋಗಿಸಲಾಗಿದೆ.

ಒಂದು ಕಡೆಗೆ ಮಾಸ್ತಿ ಮೆಕಾಲೆ ಅವರ ವಿಮರ್ಶಾತ್ಮಕ ನಿಬಂಧಗಳಿದ್ದರೆ, ಮತ್ತೊಂದು ಕಡೆಗೆ ಗಿಬನ್ ಮುಳಿಯೆ ತಿಮ್ಮಪ್ಪಯ್ಯನವರ ಪುಸ್ತಕದಷ್ಟು ಗಾತ್ರದ ಪ್ರಬಂಧಗಳಿವೆ. ಒಂದು ಕಡೆಗೆ ಬೇಕನ್ ಹೊನ್ನಾಪುರಮಠರ ನೀತಿಮಂಜರಿ ಇದ್ದರೆ, ಮತ್ತೊಂದೆಡೆಗೆ ಎನ್ಕೆ ಅವರ ಮುಂಗಾಲ್ಪುಟಿಗೆಯಿದೆ. ಅಂದಮೇಲೆ ನಿಬಂಧವೆಂದ ರಾವುದು? ಅದೂ ಅಲ್ಲದೆ ಪೋಪ್ ಮಹಾಕವಿಯು ಬರೆದ "Essay on Man" ಎಂಬುದು ಗದ್ಯರೂಪದಲ್ಲಿ ಕೂಡ ಇಲ್ಲ; ಪದ್ಯದಲ್ಲಿದೆ.

ಅಂದಮೇಲೆ ನಿಬಂಧವೆಂದರೇನು? ಇಂಗ್ಲಿಷ್ ಸಾಹಿತ್ಯದ ಸುಪ್ರಸಿದ್ಧ ವಿಮರ್ಶಕರಾದ ಡಾ. ಜಾನ್ಸನ್ ಅವರು ನಿಬಂಧದ ವ್ಯಾಖ್ಯೆಯನ್ನು ಈ ರೀತಿ ಹೇಳಿದ್ದಾರೆ :- "An essay is a loose sally of the mind' an irregular indigested piece." ಎಂದು.

ಇಂಗ್ಲಿಷ್ 'essay' ಶಬ್ದವೇ "assay" ಪ್ರಯತ್ನ ಮಾಡು ಅಂದರೆ ಸಂಪೂರ್ಣವಾಗಿ ವಿವರಿಸದೆ ಕೆಲಮಟ್ಟಿಗೆ ಮಾತ್ರ ಹೇಳು ಎನ್ನುವದರಿಂದ ಬಂದಿದೆ.

ತನ್ನ ನಿಬಂಧಗಳು "ತೂರಿದ ಚಿಂತನೆಗಳು" (dispersed meditations) ಎಂದುಕೊಂಡ ಬೇಕನ್ನನಲ್ಲಿಯೂ ಕೂಡ ಅವನ ಆತ್ಮಾಭಿವ್ಯಕ್ತಿಯನ್ನು ಕಾಣದಿಲ್ಲ.

Alexander Smith ಅವರು ನಿಬಂಧದಲ್ಲಿ ಕವಿಯ ಭಾವವೇ ಮುಖ್ಯವೆಂದು ಹೇಳುತ್ತಾರೆ. "Give the mood and the essay from the first sentence to the last grows round it as the cocoon grows around the silkworm."

ಆದ್ದರಿಂದ ಒಂದು ವಿಷಯವನ್ನು ನಿಬಂಧಕಾರನು ಸಂಪೂರ್ಣವಾಗಿ ಚರ್ಚಿಸಿ ಅದರ ಲಾಭಹಾನಿಗಳನ್ನೆಲ್ಲ ಹೇಳಬೇಕೆಂದು ನಿರ್ಬಂಧವಿಲ್ಲ. ನಿಬಂಧ ಕಾರನು ಪಂಡಿತನಾಗಿರಲೇಬೇಕೆಂಬ ಅವಶ್ಯಕತೆಯಿಲ್ಲ. ವ್ಯಕ್ತಿತ್ವ ಮತ್ತು ನಿರ್ವಹಣವಿದ್ದರೆ ಸಾಕು, ಎಂಥವರೂ ಒಳ್ಳೇ ನಿಬಂಧಕಾರರಾಗಬಹುದು. Prof. Orlo Williams ಅವರೂ ಇದೇ ಮಾತನ್ನು ಹೇಳುತ್ತಾರೆ. "The essayist handles the theme not like a professor : but like an artist."

ಈ ಎಲ್ಲ ವಿವರಣೆಯಿಂದ ಒಂದು ಮಾತು ಮಾತ್ರ ಸ್ಪಷ್ಟ ನಿಬಂಧದ ಬೆಲೆ ವಸ್ತುವಿನ ಅನ್ವೇಷಣೆಯಲ್ಲಿ ಇಲ್ಲ; ಬರೆಯುವ ಕೈಯಲ್ಲಿ ಇದೆ. ಬರೆದ ವಿಷಯದಲ್ಲಿ ಇಲ್ಲ; ಬರೆಯುವ ಬಗೆಯಲ್ಲಿ ಇದೆ. ಪ್ರಮುಖವಾದದ್ದು ವಿಷಯವಲ್ಲ; ಲೇಖಕನ ವ್ಯಕ್ತಿತ್ವ. ಅದರಲ್ಲಿ ಮನಸ್ಸನ್ನು ಹಿಡಿಯುವಷ್ಟು ಸಾಮರ್ಥ್ಯವಿದ್ದಷ್ಟೂ ನಿಬಂಧದ ಯಶಸ್ಸಿದೆ; ಸಾಫಲ್ಯವಿದೆ. ಅಂತಲೇ, ಒಡೆದ ಕನ್ನಡಿಯನ್ನು ಮೊದಲು ಮಾಡಿಕೊಂಡು ಓಂಕಾರದವರೆಗೆ, 'ದಸ್ತುಬೀನು' ಮೊದಲು ಮಾಡಿಕೊಂಡು ದಲಿತರ ಉದ್ಧಾರದ ವರೆಗೆ ಕವಿಯು ಬರೆಯಬಲ್ಲ. ಒಂದು ಊಹೆಯ ಎಳೆಯೋ, ಅನುಭಾವದ ಸುಳಿಯೋ, ಅನುಭವದ ಪಡೆನುಡಿಯೋ-ಯಾವುದಾದರೂ ಸಿಕ್ಕರೂ ಸಾಕು; ರೇಶಿಮೆಹುಳು ಒಡಲಿನಿಂದಲೇ ರೇಶಿಮೆಯನ್ನು ಸುತ್ತುವಂತೆ ನಿಬಂಧ ಹೆಣೆದು ಕೊಳ್ಳುತ್ತದೆ. ಅಂತಲೇ "An essay is lyric in prose" - ನಿಬಂಧ ಗದ್ಯದ ಭಾವಗೀತೆ - ಎಂದು ಹೇಳುವದುಂಟು. ಅದಕ್ಕೆ ಇಂಥದೇ ವಿಷಯ ಬೇಕೆಂಬ ನಿರ್ಬಂಧವಿಲ್ಲ, ಊಹೆ, ಎನಿಸಿಕೆ, ಅನುಭವ, ಅನುಭಾವ, ವಿಡಂಬನ - ಯಾವುದೂ ಹರಟೆಯ ವಸ್ತುವಾಗಬಲ್ಲುದು.

ರಾಬರ್ಟಲಿಂಡ್ ಅವರು ಕ್ಷೌರದಲ್ಲಿ ಕೂಡ ಜಗತ್ತಿನ ತತ್ವವನ್ನು ಕಂಡಿದ್ದಾರೆ. ಒಂದು ಸುಖರೂಪವಾದ ಕ್ಷೌರವಾಗಬೇಕಾದರೂ ಕೂಡ ಎಷ್ಟು ಕಠಿಣವಾದದ್ದೆಂಬುದು

ಅನುಭವಿಸಿದವರಿಗೆ ಮಾತ್ರ ವೇದ್ಯ. ಒಂದು ಸುಖರೂಪವಾದ ದಾಡಿಯಾಗಬೇಕಾದರೆ ಎಷ್ಟು "ಕೈ" ಕೊಡಬೇಕು! ರೇಝರ ಅಂತೂ ಸರಿಯೇ. ಆದರೆ, ಬರಿಯ ರೇಝರ ಮಾತ್ರ ಸಾಲದು. ಸ್ವಲ್ಪ ಗೊರಸು ಗಡ್ಡವಿದ್ದರೆ, ಆ ಪಾಪ ದೇವರಿಗೇ ಬರಬೇಕೇ ವಿನಾ ಮನುಷ್ಯನಿಗೆ ಬರಬಾರದು. ಅದಕ್ಕಾಗಿ ಒಳ್ಳೇ 'ಬ್ರಶ್' ಬೇಕು. ಮಿದುವಾದ ಸಾಬೂನು ಬೇಕು. ಒಂದೇ ಎರಡೆ? ಹೀಗಾಗಿ ಆ ರೇಝರು, ಆ ಬ್ರಶ್ಶು, ಆ ಸಾಬೂನು - ಈಯೆಲ್ಲ "ಕೈಗೂಡಿದಾಗ" ಮಾತ್ರ ಒಂದು ಸುಖರೂಪವಾದ ಹಜಾಮತಿ.... ಇಲ್ಲದಿದ್ದರೆ ಈ ಸಂಕಟ ದೇವರಿಗೇ ಗೊತ್ತು.... ಹೀಗೆಯೇ ಜೀವನ! ಇಲ್ಲಿಯೂ ರೇಝರ್, ಬ್ರಶ್, ಸಾಬೂನುಗಳು ಸಹಕರಿಸಿದರೇ ಬಾಳು ಸಾಧ್ಯ. ಯಾವುದೊಂದು ಏನೂ ಮಾಡದು. ಬರಿಯ ಒಂದು Socialism ಬರಿಯ ಒಂದು communism ಒಂದು feminism - ಯಾವ ಒಂದು "ಇಝಮ್ಮೂ" ನಮ್ಮನ್ನು ಮುಂದೊಯ್ಯವು. ಮನುಷ್ಯ ಬದುಕಬೇಕಾದರೆ ಜೀವನದ ಸಮಗ್ರತೆಯನ್ನು ಅರಿತಿರಬೇಕು. ಒಂದನ್ನೇ ಸಾರಿ ಹೇಳುವುದು ತಪ್ಪು ಅವಧಾರಣೆ... ಇದು ನಿಬಂಧದ ರೀತಿ. ಹೀಗಾಗಿ ನಿಬಂಧಕಾರನಿಗೆ ಇಂಥ ವಿಷಯವೇ ಬೇಕೆಂದಿಲ್ಲ, ಕಾಣುವ ಕಣ್ಣಿದ್ದರೆ ಅಣುವಿನಿಂದ ಆತ್ಮದವರೆಗೆ ಯಾವ ದಿವ್ಯ ತತ್ವವನ್ನೂ ಕಾಣಬಹುದು.

ಎನಿಸಿಕೆಯಂತೆಯೇ ಊಹೆ. ತನ್ನ ಕಲ್ಪನೆಯಲ್ಲಿ ಕವಿ ಯಾವ ವಿನೋದದ ಸುಳಿಯನ್ನೂ ಕೆತ್ತಬಹುದು. ಮೂರ್ತಿರಾಯರ ಕುಂಚುಶರಟು ನಮಗೆ ಚಿರಪರಿಚಿತ. ಆಂಗ್ಲ ಸಾಹಿತ್ಯದಲ್ಲಿ ಈ ವಿಭಾಗದಲ್ಲಿ ಲ್ಯಾಂಬ್ ಎತ್ತಿದ ಕೈ. ಅವನಲ್ಲಿ ಊಹೆ, ವಿನೋದ ತಾವೇ ತಾವಾಗಿ ತಾಂಡವವಾಡುತ್ತವೆ. ಸಪ್ತಸ್ವರ್ಗಗಳನ್ನು ದಾಟಿ ಸುವರ್ಣ ಮಂದಿರಕ್ಕೆ ಕೈಮಾಡಿ ಕರೆದೊಯ್ಯುತ್ತಿವೆ. ಪದಾರ್ಥ ಬೇಯಿಸಿ ತಿಂದರೆ ಹೆಚ್ಚು ರುಚಿಯಾಗುತ್ತದೆಂದು ಮಾನವನು ಕಂಡ ಬಗೆಯನ್ನು ಲ್ಯಾಂಬ್ ವಿವರಿಸಿದ ರೀತಿ ನೀವು ನೋಡಿರುವಿರಾ? ಇರದಿದ್ದರೆ, ಅವನ "Dissertation upon roast pig" ಓದಿರಿ. ಆ ಚೀನೀ ಕಥೆಯನ್ನು ಅರಿತುಕೊಳ್ಳಿರಿ.... "ಹೋ-ಟಿ" (ಹೊಟ್ಟೆಯಲ್ಲ) ಒಬ್ಬ ಚೀನೀ ಮನುಷ್ಯ. ಅವನು ಹೊಲದಲ್ಲಿ ಕೆಲಸಮಾಡಲು ಹೋದಾಗಲೆಲ್ಲ ತನ್ನ ಮಡ್ಡು ಮಗನ ಮೇಲೆಯೇ ಮನೆಯನ್ನೆಲ್ಲ ಒಪ್ಪಿಸಿ ಹೋಗುತ್ತಿದ್ದನು. ಮಗನ ಹೆಸರು ಬೋ-ಬೋ. ಆಗ ಅಲ್ಲಿಯ ೨೦೦-೩೦೦ ಗುಡಿಸಲುಗಳಿಗೆ ಈ ಬೋ-ಬೋನೇ ಅಂಗರಕ್ಷಕ. ಒಂದು ಸಲ ಹೀಗೆ ಎಲ್ಲರೂ ಹೊರಗೆಹೋದಾಗ ಒಮ್ಮೆಲೇ ಅಲ್ಲಿಯ ಗುಡಿಸಲುಗಳಿಗೆ ಉರಿಹತ್ತಿತು. ಬೋ-ಬೋ ಉಳಿಸಲು ಎಷ್ಟೋ ಯತ್ನಿಸಿದನು. ಅದು ಸಾಧ್ಯವಾಗಲಿಲ್ಲ. ಕೊನೆಗೆ ನಿರುಪಾಯನಾಗಿ ಎಲ್ಲ ಉರಿ ಆರಿದ ಮೇಲೆ, ತಂದೆಯ

ಹೆದರಿಕೆಗಾಗಿ ಉಳಿದಷ್ಟನ್ನಾದರೂ ಪಾರುಮಾಡಿಕೊಳ್ಳಲು ಯತ್ನಿಸಿದನು. ಬಿದಿರನ್ನು ರಕ್ಷಿಸಿದ್ದಾಯಿತು. ಗಡಿಗೆ-ಮಡಿಕೆಗಳನ್ನುಳಿಸಿಕೊಂಡದ್ದಾಯಿತು. ಮಗ್ಗುಲಲ್ಲಿಯೇ ಸುಟ್ಟು ಬಿದ್ದಿರುವ ಹಂದಿಗೆ ಕೈಹಾಕಲಾಯಿತು... ಆದರೆ ಗಡಿಬಿಡಿಯಲ್ಲಿ ಇಟ್ಟ ಬೊಟ್ಟೇ ಸುಡಹತ್ತಿತು. ಪಾಪ! ಬೋ-ಬೋ ಮುಂಗಾಣದವನಾಗಿ ಚುರುಕುಗೊಂಡ ಬೊಟ್ಟನ್ನು ಬಾಯಲ್ಲಿ ಇಟ್ಟುಕೊಂಡನು... ಆಹ್! ಏನೋ ಒಂದು ತರಹದ ರುಚಿ! ಏನೋ ಆನಂದ! ಏನೋ ಹೊಸದು! ಹೊಸ ಸಂವೇದನೆ! ಪುನಃ ಅದೇ ಬೊಟ್ಟನ್ನೇ ಆ ಹಂದಿಯ ಮೇಲಿಟ್ಟು ಪುನಃ ಬಾಯಿಗಿಳಿಸಿದ. ಅದೇ ಆನಂದ! ಅದೇ ರುಚಿ! ಎಲ್ಲ ಬೊಟ್ಟುಗಳನ್ನೂ ಪರೀಕ್ಷಿಸಿದ! ಅದೇ ರುಚಿ! ಬೊಟ್ಟು ಮುಷ್ಟಿಗೆ ಬಂದಿತು. ತಂದೆ ಬಂದಾಗ ಈ ಮಾತು ಹೇಳಲು ಅವನಿಗೂ ಅದೇ ಅನುಭವ. ನಿಜವಾದ ದಿವ್ಯತತ್ವ ಪಿತಾಪುತ್ರರಿಗೆ ಹೊಳೆಯಿತು. ೨೦೦-೩೦೦ ಗುಡಿಸಲುಗಳಲ್ಲಿದ್ದ ಹಂದಿಗಳು ಅಕಸ್ಮಾತ್ತಾಗಿ ಸುಡಲಾಗಿ ಸುಟ್ಟ ಹಂದಿಗೆ ಇಂಥ ರುಚಿ ಬರುತ್ತದೆಂಬ ಸಿದ್ಧಾಂತ! ಅಂದಿನಿಂದ ಹಬ್ಬ ಹುಣ್ಣಿವೆ ಮಾಡಬೇಕಾದರೆ ಸರಿ! ೨೦೦-೩೦೦ ಗುಡಿಸಲುಗಳು ಅಗ್ನಿನಾರಾಯಣನಿಗೆ ಆಹುತಿ... ದಿವಸ ಕಳೆದುವು. ಕೊನೆಗೆ ಪರಿಶ್ರಮ ಪಟ್ಟೂ ಪಟ್ಟೂ ೨೦೦-೩೦೦ ಗುಡಿಸಲು ಬೇಕಿಲ್ಲ ಒಂದಾದರೆ ಸಾಕು ಎಂಬ ಅನುಭವ ಬಂತು. ಕೊನೆಗೆ ಒಂದೂ ಬೇಡ; ಬರೀ ಹಂದಿ ಸುಟ್ಟರೆ ಸಾಕು ಅದು ಹೆಚ್ಚು ರುಚಿಕರ ವಾಗುತ್ತದೆ ಎಂಬ ಸತ್ಯ ಹೊಳೆಯಿತು. ಅಂದಿನಿಂದ ತಾಜಾ ವಸ್ತುವಿಗಿಂತ ಬೆಂದ ವಸ್ತು ಹೆಚ್ಚು ರುಚಿಯಾಗಿರುತ್ತದೆ ಎಂಬ ಮಾತನ್ನು ಜಗತ್ತು ಕಂಡಿತು. ಇದನ್ನು ಕಂಡುಹಿಡಿದ ಶ್ರೇಯಸ್ಸು ಹೋ-ಟಿ ಮತ್ತು ಬೋ-ಬೋ ಪಿತಾಪುತ್ರರದು.

ಸತ್ಯವೇನೇ ಇರಲಿ ಬಿಡಲಿ! ಈ ಊಹೆಯ ಮಿಂಚೆಳೆಯನ್ನು ಹಿಡಿದು ಹೊರಟು, ಒಂದೊಂದಾಗಿ ಹೊಸಕಲ್ಪನೆಯ ಚಾತುರ್ಯವನ್ನು ತೋರುತ್ತಿರುವ ಲ್ಯಾಂಬ್ ಕವಿಯ ನಿಬಂಧಚಾತುರ್ಯಕ್ಕೆ ಮೆಚ್ಚದವರಾರು?

ಅಂದಾಕ್ಷಣಕ್ಕೆ ನಿಬಂಧ ಬರಿಯ ಊಹೆಯ ಚಮತ್ಕೃತಿಯಾಗಲೀ, ವಿನೋದದ ಸಾಹಸವಾಗಲೀ ಇರಬೇಕೆಂದು ಮಾತ್ರವಲ್ಲ, ಅನೇಕ ನಿಬಂಧಕಾರರ ಸುಖ-ದುಃಖಗಳನ್ನೂ ಆಸೆ-ಕನಲಿಕೆಗಳನ್ನೂ ಅವರ ನಿಬಂಧದಲ್ಲಿ ಕಾಣಬಹುದಾಗಿದೆ. "We learn in suffering what we teach in song" ಎನ್ನುವ ಕವಿ ಮಾತು ನಿಬಂಧಕಾರನಿಗೂ ಅನ್ವಯಿಸುತ್ತದೆ. ಇದಕ್ಕೆ ಪುನಃ ಲ್ಯಾಂಬ್ ಕವಿಯ "ಕನಸಿನ ಮಕ್ಕಳು" ಒಳ್ಳೆಯ ದೃಷ್ಟಾಂತ.

ಚಾರ್ಲ್ಸ್ ವಿಬ್ಲೆ ಅವರು ಹೇಳುವಂತೆ ಲ್ಯಾಂಬ್ ಕವಿಯ ಜೀವನವೆಂದರೆ ಒಂದು ಕಣ್ಣೀರ ಕಾರ್ಗಡಲು. ಅವನ ಸಹೋದ್ಯೋಗಿಗಳಾದ ಕೋಲ್‌ರಿಜ್, ಷೆಲೆ, ಬೈರನ್ ಮೊದಲಾದವರು "ಪ್ಯಾಂಟಿಸೊಕ್ರಸಿ" "ಆದರ್ಶ ವ್ಯವಸ್ಥೆ"ಗಳ ಬಗ್ಗೆ ಗಂಭೀರ ವಿಚಾರ ಮಾಡುತ್ತಿರುವಾಗ ಲ್ಯಾಂಬ್‌ನ ದಿನಚರಿಯೆಂದರೆ ರೋಗಿಯಾದ ತಾಯಿಯ ಶುಶ್ರೂಷೆ ಮಾಡುವುದು, ವೃದ್ಧ ತಂದೆಯ ಮನರಂಜನೆಗಾಗಿ ಅವನ ಕೂಡ ಆಟವಾಡುತ್ತ ಕುಳಿತುಕೊಳ್ಳುವುದು. ವಿಕ್ಷಿಪ್ತ ತಂದೆ, ರೋಗಿ ತಾಯಿ ಮತ್ತು ಹುಚ್ಚು ತಂಗಿಗಾಗಿ ಮೀಸಲಾದ ಲ್ಯಾಂಬನ ಜೀವನವು ಆಯುಷ್ಯದಲ್ಲಿ ಯಾವ ಸುಖವನ್ನೂ ಕಾಣಲಿಲ್ಲ. ಕಚೇರಿ ಬಿಟ್ಟು ಬರುವುದೊಂದೇ ತಡ ಶುಶ್ರೂಷೆ, ಸೇವೆಗೆ ಪ್ರಾರಂಭ. ಅದರಲ್ಲಿ ೧೭೯೬ನೇ ಇಸವಿಯಂತೂ ಲ್ಯಾಂಬನ ಜೀವನದಲ್ಲಿ ಕಾಳ ಅಮವಾಸ್ಯೆ. ಒಂದು ಸಲ ಅವನು ಹೊರಗೆ ಹೋದಾಗ, ಅವನ ತಂಗಿ ಮೇರಿ ಹುಚ್ಚಿನ ಆವೇಶದಲ್ಲಿ ರೇಗಿಗೆದ್ದು ಕೈಯಲ್ಲಿಯ ಚಾಕುವಿನಿಂದ ತಾಯಿಯನ್ನು ಇರಿದುಬಿಟ್ಟಳು. ನಡುವೆ ಬಿಡಿಸಹೋದ ಆಳುಮಗಳನ್ನೂ ಹೊಡೆಯತಕ್ಕವಳೇ; ಆದರೆ ಅಷ್ಟರಲ್ಲಿಯೇ ಲ್ಯಾಂಬ್ ಒಂದು ಅನಾಹುತವನ್ನು ತಪ್ಪಿಸಿದನು. ಈ ರಕ್ತಮಯ ಭಯಾನಕ ಸನ್ನಿವೇಶವನ್ನು ಕಂಡು ಲ್ಯಾಂಬನ ಕಣ್ಣು ಕತ್ತಲೆಗುಡಿಸಿತು, ಅವನು ಮುಂಗಾಣದವನಾದನು. ಕೊನೆಗೆ ಮೇರಿಯನ್ನು ಹುಚ್ಚರ ಆಸ್ಪತ್ರೆಗೆ ಹಾಕಿ ತಾನೂ ಅವಳ ಸೇವೆಗೆ ನಿಲ್ಲಬೇಕಾಯಿತು. ಇಂದಿಗೆ ಪ್ರಾರಂಭ ಲ್ಯಾಂಬನ ದುರಂತ ಜೀವನದ ಕತೆ. ತಂಗಿಯ ಶುಶ್ರೂಷೆಗಾಗಿ, ಅವಳಿಗೆ ಮಾತ್ರ ತನ್ನ ಪ್ರೀತಿಯನ್ನು ಧಾರೆಯೆರೆಯಲು ಸಿದ್ಧನಾದನು. ಮದುವೆ ಆದಲ್ಲಿ ಹೆಂಡತಿಯ ಪ್ರೇಮವು ತಂಗಿಯ ಪ್ರೀತಿಗೆ ಆತಂಕ ತರುವದೆಂದು ಭಾವಿಸಿದನು. ಅಂದಿನಿಂದ ಜಗತ್ತಿನಲ್ಲಿ ಅವನಿಗೆ ಎರಡೇ ವಸ್ತುಗಳು. ಒಂದು ನಿರ್ಮಲ ಧರ್ಮ; ಎರಡನೆಯದ್ದು ತಂಗಿಯ ಪ್ರೀತಿ. ಅದಕ್ಕಾಗಿ ಆಮರಣ ಬ್ರಹ್ಮಚಾರಿಯಾಗಿರಲು ನಿಶ್ಚಯಿಸಿದನು. ಇಡೀ ಪ್ರಪಂಚದ ಸಾಹಿತ್ಯೇತಿಹಾಸದಲ್ಲೇ ಇಂಥ ಆದರ್ಶ ಅಣ್ಣ-ತಂಗಿಯರ ಪ್ರೇಮ ಮತ್ತು ತ್ಯಾಗಗಳ ಸಾಹಸವನ್ನು ಕಾಣೆವು. ಮೇರಿ ನೆಟ್ಟಗಿದ್ದರೆ ಲ್ಯಾಂಬ್ ಎಲ್ಲಿ ಉನ್ಮಾದಿತನಾಗುವನೋ ಎಂದು ಭಯ; ಲ್ಯಾಂಬ್ ನೆಟ್ಟಗಿದ್ದಾಗ ಮೇರಿಯ ಬಗ್ಗೆ ಚಿಂತೆ. ಅನೇಕ ಸಲ ಇಬ್ಬರೂ ಸಂಜೆಯ ಮಬ್ಬುಗತ್ತಲೆಯಲ್ಲಿ ಇದಿರು ಬದಿರು ಕೂಡುವುದು; ಬರೀ ಒಬ್ಬರ ಮುಖವನ್ನು ಒಬ್ಬರು ನೋಡುವುದು. ಇವಳು ನಕ್ಕರೆ ಅವನಿಗೆ ಆನಂದ; ಅವನು ನಕ್ಕರೆ ಇವಳಿಗೆ ಸಂತೋಷ. ಇಬ್ಬರೂ ಗಂಭೀರ ರಾದರೆ, ಇಬ್ಬರಿಗೂ ಕಣ್ಣೀರೇ ಮೊರೆ. ಅತ್ತುಅತ್ತು ಮನಸ್ಸು ಹಗುರಾಗಿ ಮಕ್ಕಳ ಮನಸ್ಸಿನಂತಾದರೆ ಪುನಃ ಆಹ್ಲಾದಕ್ಕೆ ಪ್ರಾರಂಭ.

ಆದರೆ, ಈ ಮೊದಲೇ ಇನ್ನೊಂದು ದುರ್ವಿಧಿ ಲ್ಯಾಂಬನಿಗೆ ಎರಗಿತ್ತು. ಚಿಕ್ಕಂದಿನಿಂದಲೂ ಲ್ಯಾಂಬ್ "Alice Winterton" ಎಂಬ ಹುಡುಗಿಯನ್ನು ಪ್ರೀತಿಸುತ್ತಿದ್ದ. ಅಖಂಡ ಏಳು ವರ್ಷ ಸುಖಃದುಃಖಗಳಲ್ಲಿ, ನೆಳಲು ಬೆಳಕುಗಳಲ್ಲಿ ಅವಳಿಗಾಗಿ ತಪಸ್ಸು ಮಾಡಿದನು. ಅನೇಕ ಸಲ ದೇವಿಯು ಒಲಿಯುವ ಲಕ್ಷಣವೂ ಕಂಡಿತು. ಆದರೆ ವಿಧಿಯು ವಿಷಯವನ್ನು ಇಲ್ಲಿಗೇ ಬಿಡಲಿಲ್ಲ. ಲ್ಯಾಂಬ್ ಆ ಯಕ್ಷಿಯ ಪಾಣಿಗ್ರಹಣಕ್ಕಾಗಿ ಸೂಚಿಸಿದಾಗ ಯಾರೋ ಅವಳ ಕಿವಿಯಲ್ಲಿ ಉಸುರಿದರು – ಲ್ಯಾಂಬ್ ಮನೆತನದಲ್ಲಿರುವ ಹುಚ್ಚಿನ ಬಗ್ಗೆ ಜಾಗರೂಕವಾಗಿರಬೇಕೆಂದು. ಜಗತ್ತಿನ ರೀತಿಯನ್ನು ಬಲ್ಲ ಸುರಸುಂದರಿ ಲ್ಯಾಂಬನ ಕೈಬಿಟ್ಟಳು. ಲ್ಯಾಂಬನಿಗೆ ಅತೀವ ದುಃಖವಾಯಿತು. ಅವಳ ಸಲುವಾಗಿ ಪರಿತಪಿಸಿದನು; ಕಂಗೆಟ್ಟನು. ಏನಾದರೂ ಷೆಲಿ ಹೇಳುವ ಕವಿವಾಕ್ಯ ಸತ್ಯವಾಯಿತು :

"We pursue a maiden and clasp a reed; Gods and men we are all deluded thus." ಲ್ಯಾಂಬ್ ಹಿಮ್ಮರಳಿದನು. Aliceಳು ಬರ್‌ಟ್ರಾಮ್ ಎಂಬ ಪುಸ್ತಕ ವ್ಯಾಪಾರಿಯ ಕೈಹಿಡಿದು "ಧನ್ಯ"ಳಾದಳು.... ಲ್ಯಾಂಬನ ಮನಸ್ಸಿನಲ್ಲಿಯ Aliceಳ ಚಿತ್ರ ಮಾತ್ರ ಮಾಸಲಿಲ್ಲ.

ಎಷ್ಟೋ ವರ್ಷಗಳ ವರೆಗೆ, ತನ್ನ ಮರಣದ ಪರ್ಯಂತರವೂ ಕೂಡ ಲ್ಯಾಂಬ್ Aliceಳ ಮನೆಯ ಸುತ್ತು ಸಂಜೆವೇಳೆ ತಿರುಗುತ್ತಿದ್ದನೆಂದು ಹ್ಯಾಜ್ಲಿಟ್ ಹೇಳುತ್ತಾನೆ. ಮೇರಿ ಚಿರಂತನ ಯೋಗಿಣಿ; ಲ್ಯಾಂಬ್ ಚಿರಂತನ ಬ್ರಹ್ಮಚಾರಿ. ಈ ಜೊತೆ ಜೀವನದಲ್ಲಿ ಹಾಗೇ ಸಾಗಿದುವು. ಎಲಿಸ್‌ಳ ವಿಷಯ ಬಂದಾಗಲೆಲ್ಲ ಲ್ಯಾಂಬ್ ಕಣ್ಣೀರು ಸುರಿಸದೆ ಇಲ್ಲ. "ಹಳೆಯ ಪಳಕೆಯ ಮುಖಗಳಲ್ಲಿ" ಅವಳಿಗಾಗಿ ಪ್ರಲಪಿಸಿದ್ದಾನೆ :

***"I loved a love once, fairest among women;***
***Closed are her doors; I must not see her;***
***All all are gone; the old familiar faces."***

ಲ್ಯಾಂಬ್ ಎಲಿಸ್‌ಳನ್ನು ಮದುವೆಯಾಗಿದ್ದರೆ?.....ಮದುವೆಯಾಗಿದ್ದರೆ?..... ರೇಫೆ ರಾಜ್ಯ. ಆದರೂ ಆಗಿದ್ದರೆ?...... ಆ ಕನಸೇ "ಕನಸಿನ ಮಕ್ಕಳು" ನಿಬಂಧದ ವಸ್ತು.

"ಕನಸಿನ ಮಕ್ಕಳು" ಒಂದು ಸುಂದರ ಭಾವಗೀತೆ. ಆದರ್ಶನಿಬಂಧ. ಕವಿ

ಲ್ಯಾಂಬ್ ತನ್ನ ಆರಾಮು ಖುರ್ಚಿಯಲ್ಲಿ ಒರಗಿರುತ್ತಾನೆ. ಹಾಗೆ ವಿಚಾರ ಮಾಡುತ್ತ ಮಾಡುತ್ತ ಕಣ್ಣು ಅರೆಮುಚ್ಚಿದಂತಾಗುತ್ತದೆ. ನೋಡ ನೋಡುತ್ತಿರುವದರಲ್ಲಿ ಏನೋ ಒಂದು ಚಿತ್ರ; ಏನೋ ಬಣ್ಣ ಬೆಳಕು! ಹಾಗೇ ಧೇನಿಸುತ್ತಿರುವಾಗ ಎರಡು ಚಿಕ್ಕ ಮಗುಗಳು ಎದುರಿಗೆ ಬರುತ್ತವೆ. ಒಂದು ಹೆಣ್ಣು ಒಂದು ಗಂಡು; ಮುದ್ದಾದ ಶಿಶುಗಳು. ಹಾಗೇ ನುಸುಳುತ್ತ ಲ್ಯಾಂಬನ ಕಾಲಹತ್ತಿರ ಹಾಯುತ್ತವೆ, ಅವನ ಕೈ ತಟ್ಟುತ್ತವೆ, ಮೈ ಮುಟ್ಟುತ್ತವೆ. ತಂದೆಯ ಮೇಲಿರುವ ವಾತ್ಸಲ್ಯದಿಂದ ಅವನಿಗೆ ಹತ್ತಾರು ಪ್ರಶ್ನೆಗಳನ್ನು ಕೇಳುತ್ತವೆ. ಲ್ಯಾಂಬ್ ಚಿಕ್ಕವನಿರುವಾಗ ಹೇಗಿದ್ದ? ಅವನ ಅಣ್ಣ ಹೇಗಿದ್ದ? ಅವರು ಓದುತ್ತಿರುವ ಪುಸ್ತಕವಾವುದು? ಅವನು ಉಣ್ಣುವ ರೀತಿ, ಆಡಿದ ಆಟ, ನೂರಾರು ಮಾತು, ನಮ್ಮ ಮಕ್ಕಳೆಲ್ಲ ನಮಗೆ ಕೇಳುವ ವಿಷಯ. ಲ್ಯಾಂಬ್ ಕೂಡ ಮಕ್ಕಳ ಮೇಲಿನ ಪ್ರೀತಿಯಿಂದ ಎಲ್ಲ ಮಾತುಗಳಿಗೂ ಬೇಸರದೆ ಉತ್ತರ ಹೇಳುತ್ತಾನೆ. ಹೆಣ್ಣು ಮಗುವಂತೂ ತುಂಬಾ ಮುದ್ದಾದದ್ದು ಅವಳ ಪ್ರಶ್ನೆಗೆ ಉತ್ತರ ಹೇಳುತ್ತ ಹೇಳುತ್ತ ಅಂತಃಕರಣ ತುಂಬಿ ಅವಳನ್ನು ಮುದ್ದಿಡಹೋಗುತ್ತಾನೆ. ಓ! ಅವಳ ಆ ಸುಂದರ ಕಪ್ಪು ಕಣ್ಣುಗಳು!! ಮಗುವಿನ ತಾಯಿ ಎಲಿಸ್‌ಳೇ ನೆನಪಾಗುತ್ತಾಳೆ. ಇನ್ನೇನು ಹರ್ಷವುಕ್ಕಿ ಮುದ್ದಿಡುವವ.... ಮಗು ಮೆಲ್ಲನೆ ಕೈಮರೆಸಿ ಜಾರುತ್ತದೆ. ಎರಡೂ ಶಿಶುಗಳು ದೂರದೂರ ದಿಗಂತದಲ್ಲಿ ಲೀನವಾಗುವಂತೆ ತೇಲುತ್ತವೆ. ಲ್ಯಾಂಬ್ ಹಿಡಿಯ ಹೋಗುತ್ತಾನೆ, ಮಗುಗಳನ್ನು ಅಲ್ಬರಿದು ಕಿರುಚುತ್ತಾನೆ. ದೂರದಿಂದಲೇ ಕೈಮಾಡಿ ಮಗುಗಳು ಸಾರುತ್ತವೆ, "ನಾವು ನಿನ್ನ ಮಕ್ಕಳಲ್ಲ; ಎಲಿಸ್‌ಳ ಮಕ್ಕಳೂ ಅಲ್ಲ, ನಾವು ಶಿಶುಗಳು ಕೂಡ ಅಲ್ಲ, ಎಲಿಸ್‌ಳ ಮಕ್ಕಳು ಬರ್‌ಟ್ರಮ್‌ನನ್ನು ತಂದೆ ಎಂದು ಸಂಬೋಧಿಸುತ್ತಾರೆ. ನಾವು ಏನೂ ಅಲ್ಲ, ಬರಿಯ ಶೂನ್ಯ. ನೀನು ಎಲಿಸಳನ್ನು ಪಡೆದು ನಮ್ಮ ಜನನವಾಗಬೇಕಾದರೆ ನಾವು ಬೇಸರಿಯದೆ ವಿಯತ್ಪಥದಲ್ಲಿ ದಾರಿಕಾಯುತ್ತ ಕೂಡಬೇಕಾಗಿದೆ" ಎಂದು. ಕೈಯಲ್ಲಿಯ ಹಕ್ಕಿ ಹಾರುತ್ತವೆ. ಲ್ಯಾಂಬ್ ಕಣ್ಣು ತೆರೆಯುತ್ತಾನೆ, ಸುತ್ತಲೇನೂ ಇಲ್ಲ, ತಾನು, ತನ್ನ "ಬ್ರಹ್ಮಚಾರಿ ಖುರ್ಚಿ" ಮತ್ತು ಮಗ್ಗುಲಿಗೆ ಪ್ರೀತಿಯ ತಂಗಿ ಮೇರಿ. ಆ ಶಿಶುಗಳು? ಲ್ಯಾಂಬ್ ಎಲಿಸ್‌ಳನ್ನು ಮದುವೆ ಯಾಗಿದ್ದರೆ ಮಾತ್ರ! ಎಷ್ಟು ಜನ್ಮಚಕ್ರ ಉರುಳ ಬೇಕೋ ಏನೋ!.... ಹಣಕ್ಕಾಗಿ ಒಬ್ಬ ಪುಸ್ತಕ ಮಾರುವವನನ್ನು ಮದುವೆಯಾಗಿ ಎಲಿಸ್ ಬಾಳಿ ಸತ್ತಳು, ಅವಳ ಸಲುವಾಗಿ ಪರಿತಪಿಸಿ ಕನಸಿನ ಮಕ್ಕಳನ್ನು ಕಂಡ ಲ್ಯಾಂಬ್ ಸತ್ತೂ ಬದುಕಿದ್ದಾನೆ. ಇಂದು ಎಲಿಸ್‌ಳ ಹೆಸರು ಇಂಗ್ಲಿಷ ಸಾಹಿತ್ಯದಲ್ಲಿ ಲಕ್ಷ್ಯಕ್ಕೆ ಬರುವುದು ಪುಸ್ತಕ ವ್ಯಾಪಾರಿ ಬರ್‌ಟ್ರಮ್‌ನಿಂದ ಅಲ್ಲ, ಅವಳಿಗಾಗಿ ಹಲುಬಿ ಹಾತೊರೆದ ಲ್ಯಾಂಬನಿಂದ. ಅವನಿಂದ

ಆ ಮೃತ್ತಿಕೆ ಜೀವಕಳೆ ಪಡೆದಿದೆ. Gods and men we are all deluded thus!....

"We are neither of Alice nor of thee; nor are we children at all. Children of Alice call Bertram father. We are nothing, - less than nothing."

ಇದೂ ಒಂದು ನಿಬಂಧ. ನಾನು ಆಗಲೇ ಹೇಳಿದೆನಲ್ಲ, ನಿಬಂಧಕ್ಕೆ ಬರಿಯ ಊಹೆ, ವಿನೋದ, ಅನುಭಾವ ಮಾತ್ರ ಬೇಕೆಂದಲ್ಲ, ಅದು ಕವಿಯ ಜೀವನದ ಕೂಗೂ ಆಗಬಹುದು. ಈ ರೀತಿ "ಕನಸಿನ ಮಕ್ಕಳು" ಒಂದು ಆದರ್ಶ ನಿಬಂಧ ವಾಗಿದೆ, ಗದ್ಯ ಭಾವಗೀತವಾಗಿದೆ, ಪ್ರತಪ್ತ ಹೃದಯದ ಕೂಗಾಗಿದೆ.

ಹೀಗಾಗಿ ನಿಬಂಧಕಾರನಿಗೆ ವಸ್ತು ಮುಖ್ಯವಲ್ಲ; ನಿರ್ವಹಣ. ಸಂಗತಿ ಮಹತ್ವವಲ್ಲ; ವ್ಯಕ್ತಿತ್ವ. ಲ್ಯಾಂಬನನ್ನು ಆದರಿಸದವರಾರು? ಅವನ ನಿಬಂಧಗಳೆಲ್ಲ ಇಂಥ ಸುಂದರ ಮಾತುಗಳೇ ಆಗಿವೆ. ಅಂತಲೇ ತನ್ನ ನಿಬಂಧಗಳ ಬಗ್ಗೆ ಅವನು ಹೇಳುತ್ತಾನೆ :-

The essays want no preface : they are all preface. The preface is nothing but a talk with the reader, and they do nothing else.

ಕನ್ನಡದಲ್ಲಿಯೂ ಕೂಡ ಈ ಪರಂಪರೆ ಎಷ್ಟೋ ಬೆಳೆದುಬಂದಿದೆ. ಬೇಂದ್ರೆ, ರಂಗಣ್ಣ ಅವರ ವಿಮರ್ಶಾತ್ಮಕ ಪ್ರಬಂಧಗಳು, ಆನಂದರ ಅನುಭಾವ, ಕಾರಂತರ "ದಸ್ತು ಬೀನದ" ಊಹೆ, ವಿನೋದ; ಹರಟೆಮಲ್ಲರ ವ್ಯಕ್ತಿಚಿತ್ರಗಳು, ಎನ್ಕೆ ಅವರ ಕಲ್ಪನಾಚಾತುರ್ಯ, ನಿರ್ಜೀವ ಊರುಗಳಿಗೂ ಜೀವಕಳೆ ಕೊಡುವ ಗೋಕಾಕರ "ಇಂದಿನ ಕರ್ನಾಟಕದ" ರೇಖಾಚಿತ್ರಗಳು ಇವೆಲ್ಲ ಇಂದಿನ ಕನ್ನಡ ನಿಬಂಧಪ್ರಪಂಚದ ವಿಸ್ತಾರ ಮತ್ತು ವೈವಿಧ್ಯಗಳನ್ನು ತೋರಿಸುತ್ತವೆ. ಆದರೆ ಅನೇಕ ಪ್ರಬಂಧಗಳಲ್ಲಿ ಇಂಗ್ಲಿಷ್ essay ನಿಬಂಧವನ್ನು ಕನ್ನಡ "ಹರಟೆಗೆ" ಮಾತ್ರ ತಿರುಗಿಸಿಕೊಂಡು ಹೆಚ್ಚಾಗಿ ವಿನೋದಕ್ಕೆ ಲಕ್ಷ್ಯಪೂರೈಸಿದ್ದು ಕಂಡುಬರುತ್ತದೆ. ನಾವು ನಿಬಂಧದ ಇತರ ಭಾವಗಳನ್ನೂ ಗ್ರಹಿಸಿ, ಅದನ್ನು ಉಳಿದ ಸಾಹಿತ್ಯರೂಪಗಳ ಸರಿಸಮಾನ ಸ್ಥಿತಿಗೆ ನಿಲ್ಲಿಸು ವಂತಾಗಬೇಕು. "ಹರಟೆ" ಈ ವರೆಗೆ ಪಡೆದ ಮರ್ಯಾದೆಗಿಂತ ಇದಕ್ಕೂ ಹೆಚ್ಚಿನ ಉಜ್ವಲ ಭವಿತವ್ಯವನ್ನು ಕಾಣಬೇಕು.

ಮಹನೀಯರೆ, ನಾನು ಈ ವರೆಗೆ ಆಡಿದ ಮಾತುಗಳಲ್ಲಿ ಏನಾದರೂ ತಥ್ಯ ಕಂಡಿದ್ದರೆ ಇದೊಂದು ಹರಟೆಯ ಬಗ್ಗೆ ಭಾಷಣವೆಂದು ಗ್ರಹಿಸಬೇಕು. ಹಾಗಿಲ್ಲದೆ ನಾಲ್ಕು ಸೂತ್ರಗಳಿಗೆ ಹೇಳಿದ ನಾಲ್ಕು ಲಕ್ಷಣಗಳು ಮಾತ್ರ ರುಚಿಸಿದರೆ "ಹರಟೆ"ಯ ಬಗ್ಗೆ ಒಂದು ಹರಟೆ ಎಂದು ಗ್ರಹಿಸಬೇಕು. ಏನಾದರೂ ವೇಳೆ ಬೇಸರಬಾರದೆ ಆರಾಮಾಗಿ ಹೋಗಿದ್ದರೆ ನಾನು ಈ ವರೆಗೆ ಆಡಿದ ಮಾತಿನ ಸಾರ್ಥಕ್ಯ. ಅದುವೇ ಒಳ್ಳೆಯ ಹರಟೆಯ ರೀತಿ!

# ನನ್ನ ಅಹಂಕಾರ

"ಲೇ ಬಿಟ್ಟು ಬಿಡೋ! ನಿನ್ನ ಸೊಕ್ಕು! ನನಗೆ ಗೊತ್ತಿಲ್ಲೇನು? ಯಾರ ಮುಂದ ಹಚ್ಚಿ! ಹೋಗೋ ಗೋಮಾಜಿ! ಜಂಬಾ ಬಡೀಲಿಕ್ಕೆ ಬಂದಾನ ಜಂಬಾ! ನಿನ್ನ ಸೊಕ್ಕು ಮಣ್ಣು ಮುಕ್ಕಿಸಿಬಿಟ್ಟೇನು!" ಎಂದು ನನಗೆ ನೋಟೀಸ್ ಕೊಟ್ಟವರು ನೂರು ಮಂದಿ. ಇನ್ನೂ ನಾನು ಮಣ್ಣು ಮುಕ್ಕುವ ಕಾಲ ಬಂದಿರದಿದ್ದರೂ ನನ್ನ ಈ ಅಹಂಕಾರದ ಬಗ್ಗೆ ಎತ್ತಿ ಆಡಿದವರು ನೂರಾರು ಜನ. ನನ್ನ ಅಹಂಕಾರ ನನ್ನ ಕೂಡ ಇದ್ದರೆ ಇವರಿಗೇನಾಗುತ್ತದೋ ನಾನರಿಯೆ. ಅವರೂ ತಮ್ಮ ಕಿಸೆಯಲ್ಲಿ ಕೈವಸ್ತ್ರ – ಅಡಿಕೆ ಹೋಳು – ಇತ್ಯಾದಿ ಇತ್ಯಾದಿ ಇಟ್ಟುಕೊಂಡು ಹಾಗೆ ನಾನೂ ನನ್ನ ತಲೆಯಲ್ಲಿ ತಲೆಯ ಮೇಲೆ ಹೊರುವಷ್ಟು ಮರ್ಯಾದೆ ಕೊಟ್ಟು ನನ್ನ ಅಹಂಕಾರವನ್ನು ಜತನವಾಗಿ ಇಟ್ಟುಕೊಂಡಿದ್ದೇನೆ. ಅದಕ್ಕಾಗಿ ಇವರಿಗೇಕೆ ಇಷ್ಟು ಸಂತಾಪವೋ ನನಗೆ ತಿಳಿಯದು. ಈ ನನ್ನ ಅಹಂಕಾರವೇ ನನ್ನ ಬೆನ್ನ ಹುರಿಗಟ್ಟಿ ಮಾಡಿದುದು; ಈ ಅಹಂಕಾರವೇ ನನ್ನ ಮೂಗನ್ನು ಒಂಟೆಯ ಮೂಗಿನಷ್ಟು ಎತ್ತರಕ್ಕೆ ಒಯ್ದದ್ದು. ಈ ನನ್ನ ಅಹಂಕಾರವೇ ನನ್ನ

ಕತ್ತನ್ನು ಎರಡು ಇಂಚು ಎತ್ತರ ಬೆಳೆಸಿದ್ದು, ಈ ನನ್ನ ಅಹಂಕಾರವೇ ನನ್ನ ಮಾತು ಮುತ್ತು ಉದುರುವ ಹಾಗೆ ಕೇವಲ ಹಲ್ಲಿನಿಂದ ಮಾತ್ರ ಕಟಗರಿಸಿಕೊಂಡು ಬರುವ ಹಾಗೆ ಮಾಡಿದುದು. ಈ ನನ್ನ....ಯಾಕೆ ಸುಮ್ಮನೆ ಮಾತು ಬೆಳೆಸುವದು; ಆಗಲೇ ಹೇಳಿಬಿಟ್ಟಿದ್ದೇನೆ ನನ್ನ ಅಹಂಕಾರ, ನನ್ನ ಆಹಂಕಾರ. ಅದು ನನ್ನ ಲೋಲಕು. ದಿನನಿತ್ಯ ಅದನ್ನು ತಿರುವಿದಂತೆ ಅದರಲ್ಲಿ ಹೊಸ ಬಗೆಯ ಬಣ್ಣ ಬೆಳಕುಗಳನ್ನು ನಾನು ಕಾಣುತ್ತಿದ್ದೇನೆ.

ಓಂ ನಮಃ ಅಹಂಕಾರಾಯ! ಹೌದು ಇದರ ಮೂಲಕವಾಗಿಯೇ ನಾನು ಯಾವಾಗಲೂ ಸಭೆ ಸಮಾರಂಭಗಳಿಗೆ ಹೋದಾಗ ಮೊದಲನೆ ನಂಬರ್ ಖುರ್ಚಿಯಲ್ಲಿಯೇ ಕುಳಿತಿದ್ದೇನೆ. ಇದರ ಮೂಲಕವಾಗಿಯೇ ನಾನು ಮಾತಾಡದಿದ್ದ ಸಭೆಗಳಿಗೆ ನಾನು ಹೋಗಿಯೇ ಇಲ್ಲ. ಇದರ ಮೂಲಕವಾಗಿಯೇ ನನ್ನ ಕಥೆ ಕವಿತೆಗಳು ಮೊದಲನೇ ಪುಟದಲ್ಲಿ ಬರದಿದ್ದಾಗ ನಾನು ವ್ಯಥೆಪಟ್ಟುಕೊಂಡಿದ್ದೇನೆ; ಹೂಂ ಇದರ ಮೂಲಕವಾಗಿಯೇ ನಾನು ನನಕಿಂತ ಜಾಣರು ಅನಿಸಿಕೊಂಡವರ ಹತ್ತಿರ ಮಾತು ಸಹ ಆಡಲು ಹೋಗಿಲ್ಲ. ರೇಶಿಮೆ ಗಾದಿಯಲ್ಲಿ ಮಲಗಿದ ನನ್ನ ಆಹಂಕಾರವನ್ನು ಯಾಕೆ ನಾನು ಎಬ್ಬಿಸಬೇಕು? ಅಂದಹಾಗೆ ಆಹಂಕಾರದ ವಿರುದ್ಧ ಅನಾದಿ ಕಾಲದಿಂದಲೂ ಫಿತೂರಿ ಏಕೆ ನಡೆದಿದೆಯೋ? ನನಗೆ ತಿಳಿಯದಾಗಿದೆ. ಆದಕ್ಕೇನೋ ಯಾವ ಪಂಚಾಯತಿಯ ಟಿಕೇಟೂ ಸಿಗಬೇಕಾಗಿಲ್ಲ. ಅಂದಮೇಲೆ ಏಕೆ ಈ 'ದಧ್ಮಾ ಪೃಥಕ್ ಪೃಥಕ್'. ಎಲ್ಲಿ ಹೋದಲ್ಲಿ ಒಂದೇ ಭೋಂಗಾ - "ನಿಮ್ಮ ಗರ್ವ ಹತ್ತಿಕ್ಕಿರಿ; ನಿಮ್ಮ ಆಹಂಕಾರ ಮರೆಯಿರಿ." ಗುಡಿಯ ಪೌಳಿಯ ಪುರಾಣಿಕರು, ವ್ಯಾಸಪೀಠದ ಮೇಲಿನ ಗೌರವಯುತ ಭಾಷಣಕಾರರು, ತತ್ವಜ್ಞಾನಿಗಳು ಎಲ್ಲರೂ ಹೇಳುವುದೂ ಅದೇ ಅದೇ. ಯಾಕೆಂದು ನನಗಿನ್ನೂ ಅರ್ಥವಾಗಿಲ್ಲ. ನನ್ನ ಆಹಂಕಾರ ಈ ವಿಚಾರಕ್ಕೆ ನನ್ನ ತಲೆ ತಗ್ಗಿಸುವಂತೆ ಇನ್ನೂ ಮಾಡಿಯೂ ಇಲ್ಲ.

ಮನುಷ್ಯ ತನ್ನ ನೆಳಲನ್ನು ತುಳಿದಷ್ಟು ಮತ್ತಾರನ್ನೂ ತುಳಿದಿರಲಾರ; ಹಾಗೆಯೇ ತನ್ನ ಆಹಂಕಾರವನ್ನು ದೂಷಿಸಿಕೊಂಡಷ್ಟು ಮತ್ತಾರನ್ನೂ ದೂಷಿಸಿರಲಾರ. ಬಯ್ಯಲಿಕ್ಕೆ ಮತ್ತಾರೂ ಎದುರಿಗೆ ಸಿಗದೆ ಇದ್ದಾಗ ಗಂಡ ಹೆಂಡತಿಯನ್ನೇ ಆರಿಸಿಕೊಂಡು ಬಯ್ಯುವ ಹಾಗೆ ಅಥವಾ vice versa ಹೆಂಡತಿ ಗಂಡನನ್ನೇ ಗುರಿ ಇಡುವ ಹಾಗೆ ಮತ್ತಾರನ್ನೂ ಬಯ್ಯಲು ಸಿಗದಿದ್ದಾಗ ನಮ್ಮ ತತ್ವಜ್ಞಾನಿಗಳಿಗೆಲ್ಲಾ ತಮ್ಮ ಪಾಪ ಆಹಂಕಾರವೇ ಬಲಿಯಾಗಿ ಸಿಕ್ಕಹಾಗೆ ಕಾಣುತ್ತದೆ. ಯಾಕೆ ಈ ಪರಿ ಕೊಚ್ಚುವುದು - ಈ ಪರಿ ಕೊಯ್ಯುವುದು - ಈ ಅಹಂಕಾರವೆಂಬ ಪ್ರಾಣಿಯನ್ನು?

"ನಾನು ಹೋದರೆ ನಾರಾಯಣ ಬರುತ್ತಾನೆ" ನಾರಾಯಣ ಬರಲಿ by all means! ಆದರೆ ಅದಕ್ಕಾಗಿ ನಾನು ಏಕೆ ಹೋಗಬೇಕು? ನಾನೇ ಹೋದ ಮೇಲೆ ಬಂದ ನಾರಾಯಣನ ಸುಖವೇನು? ದುಃಖವೇನು? ಈ ತತ್ವಜ್ಞಾನಿಗಳ ಮಾತಿನ ಅರ್ಥ ನನಗಾಗದು. ನಾರಾಯಣ ಬರಬೇಕಾದುದು ನನಗಾಗಿಯೇ ಅಲ್ಲವೇ? ಅಂದಮೇಲೆ ನಾನೇಕೆ ಹೋಗಬೇಕು. ಹೀಗೆ ಮಾತಿನ ಚಮತ್ಕಾರ ಮಾಡಿ ವಿರೋಧ ವಿರೋಧವಾಗಿ ಹೇಳುವುದೇ ಬುದ್ಧಿವಂತರ ಲಕ್ಷಣವೆಂದು ಕಾಣಿಸುತ್ತದೆ.

ಯಾವನೋ ಋಷಿ ಯಾವನೋ ತನ್ನ ಮಗನನ್ನು ವಿದ್ಯಾಭ್ಯಾಸಕ್ಕಾಗಿ ಕಳಿಸಿದ್ದನಂತೆ. ಪಾಪ ಮಗ; ತಂದೆಯ ವಿಶ್ವಾಸದ ಹಾನಿಯಾಗದ ಹಾಗೆ ಗುರು ಹೇಳಿದ್ದನ್ನೆಲ್ಲ – ಹೋಲ್ಡಾಲಿನಲ್ಲಿ ತುಂಬುವ ಹಾಗೆ, ತನ್ನ ತಲೆಯಲ್ಲೆಲ್ಲ ತುಂಬಿಕೊಂಡು ತಂದೆಯ ಕಡೆಗೆ ಬಂದನಂತೆ. ಪಾಪ ಅಂಥ ಮಗನಿಗೆ ತಂದೆ ಕೇಳಿದ್ದೇನು ಗೊತ್ತೇ? ಏನು ಕಲಿತಿದ್ದೀ ನೀನೆಲ್ಲ ಎಂದು.

ಮಗು ವಿನಮ್ರವಾಗಿ ಹೇಳಿದ : ಕಲಿಯಬೇಕಾದ್ದನ್ನೆಲ್ಲಾ ಕಲಿತಿದ್ದೇನೆ. ಹೊ! ಸುರುವಾಯಿತು ಮಗನ cross examination ಉ. "ಇದನ್ನು ಕಲಿತಿದ್ದೀಯಾ? ಇದನ್ನು ಕಲಿತಿದ್ದೀಯಾ?" ಕೊನೆಯ ಮಗ ಬೇಸರ ಬಂದು ಹೇಳಿದನಂತೆ "ಇಲ್ಲ ನಾನು ಏನೂ ಕಲಿತಿಲ್ಲ" ಆಗ ತಂದೆಗೆ ಸಮಾಧಾನ – "ಹೂಂ–ಈಗ ನೀನೆಲ್ಲವನ್ನೂ ಕಲಿತಿದ್ದೀ" ಎಲಾ; ಏನಿದು ಅರ್ಥ? ಕಲಿತೀನಿ ಅಂದಾಗ ಇಲ್ಲ ಅಂದ ತಂದೆ, ಕಲಿತಿಲ್ಲ ಅಂದಾಗ "ಹೂಂ ಕಲಿತಿದ್ದಿ" ಅಂತಾನೆ. ಬುದ್ಧಿವಂತರ ರೀತಿ ಹೀಗೆಯೇ ಅಂತ ಕಾಣಿಸುತ್ತದೆ. ಪಾಪ ವೃಥಾ ಆ ಮಗನ ಅಹಂಕಾರವನ್ನು ಈ ರೀತಿ ತುಳಿಯುವುದರಲ್ಲಿ ತಂದೆಗೆ ಬಂದ ಪುಣ್ಯವೇನೋ ತಿಳಿಯದಾಗಿದೆ.

ಈ ರೀತಿ ಅಹಂಕಾರದ ಹೆಸರಿನಲ್ಲಿ ಪರೀಕ್ಷೆ ತೆಗೆದುಕೊಳ್ಳುವ ಮಾಸ್ತರಿಕಿ ರೋಗ ದೇವರಿಗೂ ಬಿಟ್ಟಿಲ್ಲ ಅಂತ ಕಾಣಿಸುತ್ತದೆ. ಪಾಪ ರಾವಣ ಆತ್ಮಲಿಂಗ ಪ್ರಾಪ್ತಿಗಾಗಿ ಎಷ್ಟು ತೊಂದರೆಪಟ್ಟ? ಅದು ಅವನಿಗೆ ಅಹಂಕಾರ ಬರಬಾರದೆಂದು ಪಾತಾಳಕ್ಕಿಳಿಯಬೇಕೆ? ರಾವಣನಿಗೆ ಅಹಂಕಾರ ಬಂದಿದ್ದರೆ ಕೊಟ್ಟವರ ಹೆಚ್ಚಿನ ಗಂಟೇನು ಹೋಗುತ್ತಿತ್ತು? ಅಹಂಕಾರ ಎಂದರೇನು ಪ್ಲೇಗೆ? ಮಾರಕಾವೇ? ಮೈಲಿ ಬೇನೆಯೇ? ಯಾಕೆ ಆದಕ್ಕಾಗಿ ಇಷ್ಟು ಅಸಹ್ಯಪಟ್ಟುಕೊಳ್ಳುವುದು? ಅದರಲ್ಲಿಯೂ ದಿನ ರಾತ್ರಿ ನಿಮ್ಮ ಸೇವೆ ಮಾಡಿದವರಿಗಂತೂ ಕೊನೆಗೆ ಈ ವಾರ್ಷಿಕ ಪರೀಕ್ಷೆ ಇದ್ದದ್ದೆಂದೇ ಕಾಣಿಸುತ್ತದೆ. ಅರ್ಜುನ ಧನುರ್ವಿದ್ಯೆಯಲ್ಲಿ ಎಷ್ಟು weekly, terminal ಪಾಸಾಗಲಿಲ್ಲ? ಆದರೂ

ಅವನಿಗೂ ಈ "ಅಹಂಕಾರ sterilisation"ದ ವಾರ್ಷಿಕ ಪರೀಕ್ಷೆಯೇನೂ ತಪ್ಪಲಿಲ್ಲ. ಅಥವಾ ಭೀಮಸೇನ, ತನ್ನ ಅಣ್ಣ-ತಮ್ಮಂದಿರ ಸಲುವಾಗಿ ಅವನು ಪಟ್ಟ ವ್ಯಥೆಯೆಷ್ಟು? ತನ್ನೆದುರಿಗೆ ಸ್ವತಃ ತನ್ನ ಹೆಂಡತಿಗೆ ಅಪಮಾನವಾದರೂ ಅಣ್ಣನ ಸಲುವಾಗಿ ಸುಮ್ಮನಿದ್ದ. ಇಷ್ಟೆಲ್ಲ ಮಾಡಿದವನ ಇದ್ದುಬಿದ್ದ ಒಂದೆರಡು ಔಂಸು ಅಹಂಕಾರ ಸುಟ್ಟು ಬಿಡಲಿ - ಎಂದು ಹನುಮಂತ ತನ್ನ ಬಾಲವನ್ನು ಅರಣ್ಯದಲ್ಲಿ ಅಡ್ಡ ಕೆಡವಬೇಕೆ? ನನ್ನನ್ನು ಕೇಳಿದ್ದರೆ ಭೀಮಸೇನ ತನ್ನ ಒಂದೆರಡು ಔಂಸಿನ ಅಹಂಕಾರದಿಂದ ಆ ಬಾಲಕ್ಕೇ ಉರಿ ಹಚ್ಚಬೇಕಾಗಿತ್ತು. ಆರಿಸಲಿಕ್ಕೆ ಸಮೀಪದಲ್ಲಿ ಆಗ ಸಮುದ್ರವೂ ಇರಲಿಲ್ಲ.

ಅದಕ್ಕಾಗಿ, ತಮ್ಮ ಅಹಂಕಾರ ಮಾರುವವರಿದ್ದರೆ ಮಾರಲಿ ನಡು ಬಾಜಾರದಲ್ಲಿ. ಅದನ್ನು ಬೇಕಾದರೆ ಲಿಲಾವಿಗೆ ಹಚ್ಚಲಿ! ಆದರೆ ಉಳಿದವರ ಅಹಂಕಾರವನ್ನಾದರೂ "ತುಹಂ"ಕಾರ ಎಂದು ಬಿಟ್ಟುಬಿಡಲಿ. ಯಾಕೆ ಅದರ ವಿರುದ್ಧ ಈ ಖಡ್ಗ ಹಿರಿಯುವುದು.

"Pride goes before fall" ವಾರ್ನಿಂಗ್. "ಅಹಂ ಇತಿ ವೃಥಾಭಿಮಾನಃ" ಉಪದೇಶ! ಆಹಾ! ಏನು ಮುಕ್ತಾಫಲ!! ಭೂತಗಳ ಧ್ವನಿ ಕೇಳಿದ ಹಾಗೆ ಅನಾದಿ ಕಾಲದಿಂದ ಈ ಕೊಲೆಗಡಕ ಮಾತು ಕೇಳಿ ಬರುತ್ತವೆ. ಉದ್ದೇಶ? ಪಾಪ ಅಹಂಕಾರ ಕೊಲ್ಲುವುದು.

ಇಂಥ ಬೆನ್ನು ಬಗ್ಗಿದವರನ್ನು ಕಂಡರೆ ನನಗೆ ಎಂದೂ ಆಗದು. ಹೊಟ್ಟೆ ಹೊಸೆಯುವ ನಾಗರಹಾವೂ ಹೆಡೆಯನ್ನು 'ಶ್ಯೂ' ಎಂದರೆ ಮೇಲಕ್ಕೆತ್ತುತ್ತಿರುವಾಗ ಬೆನ್ನೆಲುಬಿದ್ದ ಮನುಷ್ಯ-ನರಪುಂಗವ-ಬಾಗಿ ನಡೆಯಬೇಕೇ? ಹಾಗಿದ್ದರೆ ಮನುಷ್ಯ ಮಂಗನಕಿಂತ ಒಂದು ಹೆಜ್ಜೆ ಮುಂದುಹೋದ ಪ್ರಯೋಜನವೇನು? ನೀವು ಮಾತಾಡುವ ಮೊದಲೇ ಹಿ.ಹಿ. ಹಲ್ಲು ಕಿರಿದು ಗೋಣು ಅಲುಗಾಡಿಸುವ ಮಾನವ ಪ್ರಾಣಿಗಳು ಅಹಂಕಾರ ವಿದ್ರೋಹಿಗಳು - ಅವರನ್ನು ತೋರದಿರಾ ತಂದೆ.

ಬೀಸುವ ಗಾಳಿಗೆ ಬಗ್ಗುವ ಹುಲ್ಲಾಗುವದಕ್ಕಿಂತ, ಮುರಿಯುವ ಗಳವಾಗಬೇಕು ಮನುಷ್ಯ. ಇಕ್ಕಳ ಕೈ ಮುಗಿದ ಹಾಗೆ ಯಾಚನಾಹಸ್ತಗಳನ್ನು ತಿಕ್ಕುವ ಮನುಷ್ಯನು ಮನುಷ್ಯನೇ? ಗಂಟೆಯ ಮೇಲಿನ ಮುಖ್ಯ ಪ್ರಾಣನ ಹಾಗೆ ಕೊಂಡವರೆದುರು ಕೈಮುಗಿದುಕೊಂಡು ಕುಳಿತರೆ ಆಗುವದೇನು? ಸ್ವತಃ ತಾನೇ ಸ್ವಲ್ಪ ಅಹಂಕಾರ ಹೀನನಾಗಿದ್ದರೂ ಆ ಮಹಾಕವಿ ಏನು ಹೇಳಿದ್ದಾನೆ?

"ಯಂ ಯಂ ಪಶ್ಯಸಿ ತಸ್ಯ ತಸ್ಯ ಪುರತಃ ಮಾಬ್ರೂಹಿ ದೀನಂ ವಚಃ" "ನಿನ್ನ ದೈನ್ಯ ನಿನ್ನ ಕಿಸೆಯಲ್ಲಿರಲಿ! ನಿನ್ನ ಅಹಂಕಾರ ಕಣ್ಣಲ್ಲಿ, ನಾಲಿಗೆಯಲ್ಲಿ ತುಳುಕಲಿ!" "ಕ್ಲೈಬ್ಯಂ ಮಾಸ್ಮಗಮಃ ಪಾರ್ಥನೈತತ್ತ್ವಯ್ಯುಪಪದ್ಯತೇ ಅನಾರ್ಯಜುಷ್ಟಂ ಅಸ್ವರ್ಗ್ಯಂ ಅಕೀರ್ತಿಕರಮರ್ಜುನ" ಕ್ಲೈಬ್ಯವಾದಿಗನು-ದೈನ್ಯವಾದಿಗನು-ಅಕೀರ್ತಿಕರನು. ಅದಕ್ಕಾಗಿ ನಿಮ್ಮ ಮನಸ್ಸಿನಲ್ಲಿ ಅಹಂಕಾರದ ಕುತುಬಮೀನಾರವನ್ನು ಏರಿಸಿರಿ. ಅದರ ಸಿಂಹಗರ್ಜನೆ ನಿಮ್ಮಲ್ಲಿ ಮೊಳಗಲಿ. ಹೊಳೆಯ ನೀರು ಹರಿದುಬರುವಾಗ ಮೆತ್ತಗಾಗಿ ಬಗ್ಗಿ ಹೋದ ದಂಡೆಯ ಮಣ್ಣಿನ ಅವಸ್ಥೆ ಏನಾಯಿತು? ನೀರಲ್ಲಿ ಕೂಡಿ ತಾನೂ ಸತ್ತು, ನೀರನ್ನು ಕದಡುಮಾಡಿ ಕೊನೆಗೆ ಸಮುದ್ರದಲ್ಲಿ ಆತ್ಮಹತ್ಯೆ ಮಾಡಿಕೊಂಡು ಉಪ್ಪುಂಡಿತು. ಅದೇ ಕಠೋರವಾಗಿ, ದೃಢವಾಗಿ, ಉನ್ನತವಾಗಿ, ಅಹಂಕಾರ ಸತ್ವಶೀಲವಾಗಿ ನಿಂತ ಬಂಡೆಗಲ್ಲೇನಾಯಿತು? ಹರಿಯುವ ನದಿಯ ಪ್ರವಾಹವನ್ನೇ ಸೀಳಿತು. ತಾನು ಕರಗಲಿ-ಸ್ವಲ್ಪೂ ಪರವಾ ಇಲ್ಲ. ಆದರೆ ಈವರೆಗೆ ಏರಿಬಂದ ಹಿಟ್ಲರನಿಗೆ ರಶಿಯಾವಾಯಿತು ಆ ಕಲ್ಲು. ಯಾರು ಮರೆತಾರು ಈ ಸಾಹಸ!

ಹೆಚ್ಚಿನಿಂದೇನು? ಅಹಂಕಾರ "ಏಕಃ ಸಮಲಂಕರೋತಿ ಪುರುಷಂ". ಅಹಂಕಾರ ಸಿಂಹ, ವಿನಯ ಬೆಂವ್ ಬೆಂವ್ ಕುರಿ. ಅಹಂಕಾರ ಆಕಾಶ; ವಿನಯ ಪಾತಾಳ. ಅಹಮಹಮಿಕೆ ಎಂಬ ಅಹಂಕಾರದಿಂದಲೇ ಹಿಮಾಲಯ ಗೌರೀಶಂಕರದಷ್ಟು ಎತ್ತರ ಬೆಳೆದದ್ದು. ವಿನಯ, ಸಹನೆ, ಸೋಲು, ಸಾವು ಇವು ಅಧಮರ ಭಾಷೆ. ಅಹಮಹಮಿಕೆ, ಸೆಟೆತ, ಬಾಳು, ಔನ್ನತ್ಯ, ಇವು ಅಹಂಕಾರದ ಭಾಷೆ.

ಅಷ್ಟೇ ಏಕೆ? ಅಹಂಕಾರವಿದ್ದ ವೀರರಂತೂ ವೀರರೇ; ಅದನ್ನು ಎರವು ತೆಗೆದುಕೊಂಡ ಹೇಡಿಯೂ ಸಹಿತ ಅನೇಕ ಸಲ ವೀರನ ಹಾಗೆ ಕಾಣುತ್ತಾನೆ. ಅಹಂಕಾರ ನಿಮ್ಮ ಅಳುಬುರುಕತನ ಮುಚ್ಚುತ್ತದೆ. ಉಳಿದವರಕಿಂತ ನೀವು ಜಾಣರೆಂಬ ಪಂಡಿತಪೀಠಕ್ಕೆ ನಿಮ್ಮನ್ನು ಕರೆದೊಯ್ಯುತ್ತದೆ; ಯಾವ ಮೈ-ಕೈ-ಗಾಯವಿಲ್ಲದೆ ನಿಮಗೆ ಶತ್ರು ಕೋಟಿಗಳನ್ನು ಗೆದ್ದು ಕೊಡುತ್ತದೆ; ಸೋಲು ಕಣ್ಣೆದುರಿಗೆ ಕಾಣಹತ್ತಿದಾಗ ಸಾಕಷ್ಟು ಧೂಳವನ್ನೆಬ್ಬಿಸಿ ನೀವು ಸೋತಿದ್ದರೂ ಗೆಲುವಿನ ಸಮೀಪವಿದ್ದೀರಿ ಎಂಬ ಗೊಂದಲ ಎಬ್ಬಿಸುತ್ತದೆ. ಇಂಥ ಅಹಂಕಾರ ನಾವು ಯಾಕೆ ಬಿಡಬೇಕು? ನಿಜ ಹೇಳಿರಿ; ಎಷ್ಟು ಸಲ ನೀವು ಈ ನಡುಗುವ ವೀರವಾಣಿ ಕೇಳಿಲ್ಲ?

"ನಾ ಸುಮ್ಮನೇ ಹೋಗ್ತಿದ್ನೆ, ಬಂದವನs ಅವ ಕಾಲ ಕೆದರಿs ಝಗಳಾ ತಗದ. ಹತ್ತೆಪಾ ಕೈಗೆ ಕೈ. ಅವ ಒಂದು ಹೊಡದ್ನs ನಾ ಅರೇ ಬಿಟ್ಟೇನೇನು? ನಾ

ಅಂದರ ಏನು ತಿಳಕೊಂಡಿದ್ದ ಅವ. ನಾನೂ ಅವಗ -" ತಾ ಏನು ಮಾಡಿದ ಅನ್ನುವುದನ್ನು ಹೇಳುವುದಿಲ್ಲ ಈ ವೀರ. "ನಾನೂ ಅವಗ-" ಅನ್ನುವ ವೀರನ ನಾಲಿಗೆಯಲ್ಲಿ ಅಹಂಕಾರದ ವೀರಶ್ರೀ ಕುಣಿಯುತ್ತಿದ್ದರೂ ಅವನ ಕಣ್ಣಲ್ಲಿ ಕಾಣುವ ಆ ಗಂಗಾ-ಯಮುನೆ, ಅವನ ಆ ಹರಿದ ಅಂಗಿ, ಅವನ ಮ್ಲಾನಮುಖ ಇವೆಲ್ಲ ಅವ ಎಂಥ ಯುದ್ಧವನ್ನು ಮಾಡಿದನೆಂಬುದನ್ನು ಹೇಳಿಯೇ ಹೇಳುತ್ತವೆ. ಇಂಥ ಮಾತು ನಾವು ನೂರಕ್ಕೆ ನೂರು ಒರೆಗೆ ಹಚ್ಚಲೇಬಾರದು. ಘಟನೆ ಗೊತ್ತೇ ಆದೆ. ಅಲ್ಲಿ ಹೊಡೆತ ತಿಂದು ಓಡಿಬಂದ ಈ ಅಳುಬುರುಕ ತನ್ನ ಅಹಂಕಾರದ ಅರಮನೆಯಲ್ಲಿ ಕುಳಿತು ತನ್ನ ಮನಸ್ಸಿಗಾದ ಗಾಯಕ್ಕೆಲ್ಲ ಪಟ್ಟಿ ಕಟ್ಟುತ್ತಿದ್ದಾನೆಂದು.

ಅಥವಾ ಇನ್ನೊಂದು Sampleಉ.

"ಎಲಾ ಪರೀಕ್ಷಾದಾಗ ಹೀಂಗ ಬರೆದೇನು"

"ಹೌದೋ ತಪ್ಪಿತು!"

"ಛೆ! ಛೆ! ಹೀಂಗ ಬರಿಬಾರದಾಗಿತ್ತಪಾ! ನಾ ಆಗಿದ್ದರ ಹೀಂಗ ಬರೀತಿದ್ದೆ ೧೦೦ಕ್ಕೆ ೮೦ ಮಾರ್ಕ್ಸ್ ಬೀಳತಿದ್ದು" ಈ ಪರೀಕ್ಷಾ ಪಶ್ಚಾತ್ ಪಂಡಿತ ಸ್ವತಃ ಕೂತಿದ್ದರೆ ನೂರಕ್ಕೆ ಎಂಟು ತೆಗೆದುಕೊಳ್ಳುವವನೇ. ಅದರಿಂದ ಹತ್ತು ಮೈಲು ದೂರ ನಿಂತಾಗ ಅವನ ಮೆದುಳಿಗೆ ಯಾವ ಝಳವೂ ತಾಕಿಲ್ಲ. ಅಂತೆಯೇ ತನ್ನ ಬುದ್ಧಿಯ ಅಹಂಕಾರದ ಕುತುಬಮೀನಾರದಲ್ಲಿ ಕುಳಿತು ಕೆಳಗೆ ಓಡಾಡುವ ನರಪ್ರಾಣಿಗಳನ್ನು ತೃಪ್ತಿಯಿಂದ ನೋಡುತ್ತಿದ್ದಾನೆ ಈ ಬುದ್ಧಿ ವೀರ. ಅಹಂಕಾರ ಅವನಿಗೆ ಅನಾಯಾಸ ವಾಗಿ ಪಾಂಡಿತ್ಯ ಶೌರ್ಯ ದೊರಕಿಸಿಕೊಟ್ಟಿದೆ.

ಅಥವಾ ನಾವು ದಿನಾಲು ನೋಡುವ ದೃಶ್ಯ ಇದು -

ಇಬ್ಬರು ಬಡಿದಾಡುತ್ತಿರುತ್ತಾರೆ. ಒಬ್ಬ ಇನ್ನೊಬ್ಬನ ಕುತ್ತಿಗೆ ಹಿಡಿದು ಅವಕುತ್ತಿರುತ್ತಾನೆ. ಮತ್ತೊಬ್ಬನಿಗೆ ಅವನ ಶರ್ಟಿನ ಚುಂಗೂ ಸಿಕ್ಕಿರುವುದಿಲ್ಲ. ಅವನ ಒದರಾಟ, ಚೀರಾಟ ನೋಡಿ ಅದನ್ನು ಬಿಡಿಸಲು ನೀವು ನಡುವೆ ಹೋಗುತ್ತೀರಿ. ಆಗ ಬಾಯಿ ಆಗುತ್ತದೆ.

"ಬಿಡ್ರ್ಯವನ್ನ ನೋಡೇ ಬಿಡ್ತೀನಿ ಒಂದು ಕೈ! ನಾ ಅಂದರ ಏನೋ ಅಂತ ತಿಳಿದಾನ! ಆಗೇರಃ ಹೋಗಲಿ ಒಂದು ಸರೆ! ನಾ ಯಾರಂತ ತಿಳಿದಾನ ಅವ! ನಾ ಯಾರಂತ-ಬಿಡ್ರಿ ಬಿಡ್ರಿ ಅಂತೀನಿ. ಬಿಡ್ರಿ-ನೋಡ್ತೀನಿ ಅವನ್ನ" ಈ ಮಾತಿನಮಲ್ಲ

ಯಾರು ಗೊತ್ತೇ? ಕುತ್ತಿಗೆಗೆ ಕೈ ಹಾಕಿದವ ಅಲ್ಲ; ಶರ್ಟಿನ ಚುಂಗೂ ಸಹಿತ ಸಿಗದವ. ಒಂದು ಕೈ ನೋಡ್ತೀನಿ ಅಂತಿರತಾನೆ. ಎರಡೂ ಕೈ ತನ್ನ ಸ್ವಾಧೀನದಲ್ಲಿದ್ದಾಗ ನೆಲಾ ನೋಡುತ್ತಿದ್ದ ಈ ವೀರ ಈಗ ಒಂದು ಕೈ ಅಪೇಕ್ಷಿಸುತ್ತಾನೆ. ನೀವು ನಡುವೆ ಹೋದಾಗ, ಅವನ ವೀರಾವೇಶ ಹೆಚ್ಚಿತು. ನೀವು ಹೋಗುವುದೇ ತಡ, ಕಾಲು ಹಿಂದೆಹಿಂದೆ ಸರಿಸುತ್ತ ಧಡ ಧಡ ತನ್ನ ಅಹಂಕಾರದ ಅಟ್ಟವನ್ನೇರಿ ತನ್ನ ಪ್ರತಿಸ್ಪರ್ಧಿ ಅಲ್ಲಿ ಬಂದಿರ ಬಾರದೆಂದು ಬಾಗಿಲು ಕಿಟಕಿ ಬೀಗ ಎಲ್ಲ ಭದ್ರವಾಗಿ ಹಾಕಿಕೊಂಡು ಕೂಗುತ್ತಿರುತ್ತಾನೆ ಈ ವೀರ! "ಬಿಡ್ರವನ್ನ! ನೋಡಿ ಬಿಡ್ತಿನಿ!!" ಎಂದು. ಗೆದ್ದರೆ ಗೆಲುವು ಅವನದೇ. ಸೋತರೂ ಗೆಲುವು ಅವನದೇ. ಇಂಥ ಅಳುಬುರುಕರಿಗೇ ಅಹಂಕಾರ ಕೀರ್ತಿ ತರುತ್ತಿರುವಾಗ ನನ್ನಂಥ ಪಂಡಿತ ಮತ್ತು ಶೂರನಿಗೆ ಅದು ಎಷ್ಟು ಮರ್ಯಾದೆ ತರಲಿಕ್ಕಿಲ್ಲ.

ಅಂತಲೇ ನಾನು ನನ್ನ ಅಹಂಕಾರವನ್ನು ಗಾಜಿನ ಗ್ಲೋಬು ಜೋಪಾನ ಮಾಡಿದ ಹಾಗೆ ಜೋಪಾನ ಮಾಡುತ್ತ ಬಂದಿದ್ದೇನೆ. ಅದಕ್ಕೆ ವ್ಯಥೆಯಾದಾಗಲೆಲ್ಲ ಅಂಗೈ ಹುಣ್ಣಿನಾರೈಕೆ ಕೊಟ್ಟಿದ್ದೇನೆ. ೩೯ ವರುಷದ ನನ್ನ ಸುದೀರ್ಘ ಬಾಳುವೆಯಲ್ಲಿ ಅದಕ್ಕೆ ಗೊಬ್ಬರ ಹಾಕಿ ನೀರುಣ್ಣಿಸಿ ಕಸ ತೆಗೆದು ಅದನ್ನು ಪ್ರಫುಲ್ಲವಾಗಿ ಬೆಳೆಸಿದ್ದೇನೆ. ಅದರ ತಂಪಾದ ನೆಳಲಿನ ಕೆಳಗೆ ನಾನು – ಹೌದು; ಮೊದಲನೆ ನಂಬರು ನಾನೇ, ನಾನು–ಶಾ ನೆಪೋಲಿಯನ್, ಅಲೆಕ್ಝಾಂಡರ್, ಹಿಟ್ಲರ್, ಉತ್ಪತ್ಸ್ಯತೇಽಸ್ತಿ ಮಮ ಕೋಽಪಿ ಸಮಾನ ಧರ್ಮಾ ಎಂದ ಆ ಭವಭೂತಿ–ಆರಾತೀಯ ಕವೀಶ್ವರರ್ ಆರುಂ ಮುನ್ನಾರ್ತರಿಲ್ಲ ಎಂದ ಆ ರನ್ನ – while it pursues things unattempted yet in prose or rhyme ಎಂದ ಆ ಮಿಲ್ಟನ್–ನಿತ್ಯವೂ ಸುಖಾಭಿರಾಮವಾಗಿ ಹರಟೆ ಕೊಚ್ಚುತ್ತಿರುತ್ತೇವೆ. ನಮ್ಮ ಹರಟೆಯನ್ನು ಯಾರೂ ಕೇಳಬೇಕೆಂಬ ನಿರ್ಬಂಧವಿಲ್ಲ ನಮ್ಮಲ್ಲಿ. ಅದು ನಮ್ಮ ಅಹಂಕಾರಕ್ಕೆ ಊನವಾದೀತು. ಎಲ್ಲರೂ ಮಾತನ್ನಂತೂ ಆಡುತ್ತೇ ಇರುತ್ತೇವೆ. ಪ್ರಸಂಗ ಬಂದರೆ ಮನುಷ್ಯ ಪ್ರಾಣ ಬಿಡಬಹುದು ಆದರೆ ಅಹಂಕಾರ ಹೇಗೆ ಬಿಡುವದು? ನಾನಂತೂ ನನ್ನ ಅಹಂಕಾರ ಬಿಡಲಾರೆ. **ಅದು ನನ್ನ ಅಹಂಕಾರ!!**

# ರೈಲು ಪ್ರವಾಸ

"ನಾನೂ ನೀನೂ ಜೋಡಿ ಜೀವನ ಎತ್ತಿನ ಗಾಡಿ"- ಎಂದು ಬಡಪಾಯಿ ಕವಿ ಎತ್ತಿನ ಗಾಡಿಗೇ ಯಾಕೆ ಡೊಗ್ಗಾಲು ಊರಿದನೋ ನನಗೆ ತಿಳಿಯದು. ಅಂತಲೇ ಇಡೀ ಪ್ರಪಂಚದಲ್ಲೇ ನಮ್ಮ ದೇಶ ಹಿಂದುಳಿದದ್ದು ದೇಶದಲ್ಲಿಯೇ ನಮ್ಮ ರಾಜ್ಯ ಹಿಂದುಳಿದದ್ದು ಎಂದು ಜನರು ಹೇಳುವುದು. ಇಂದಿನ ಜೆಟ್ ಯುಗದಲ್ಲಿ ಜೀವನ ವಿಮಾನವಾಗುವುದು ಹೋಗಲಿ, ಕೊನೆಗೆ ರೈಲುಗಾಡಿಯಾದರೂ ಆಗಬಾರದೇ? ನೈಜವಾಗಿ ಅಲ್ಲದಿದ್ದರೂ, ಕಲ್ಪನಾರಾಜ್ಯದಲ್ಲಿಯಾದರೂ ಈ ಕನ್ನಡ ಕವಿಗಳು ನಾಲ್ಕು ಹೆಜ್ಜೆ ಮುಂದು ಹೋಗಲಾರರು.

ಹೌದು. ರೈಲು ಅಂದಾಕ್ಷಣಕ್ಕೆ ನನ್ನ ಮೈಯೆಲ್ಲ ನವಿರೇಳುತ್ತದೆ. "ಮೈಯಲಿ ಮಿಂಚಿನ ಹೊಳೆ ತುಳುಕಾಡುವುದು." ಅದರ ಗಾನವೇ ಗಾನ ಅದರ ರಾಗವೇ ರಾಗ. ಉ ಊ, ಭುಕ್ ಭುಕ್, ಭುಕ್ ಭುಕ್ ದಗಲ್ ಬಗಲ್ ಜಾಲಿಕಾಯಿ-ಬಚ್ಚಲ ತುಂಬ ಬಾರಿಕಾಯಿ-ಉ ಊ-ಭುಕ್ ಭುಕ್ ಭುಕ್-ಶ್ಯೂ ಊ ಊ ಉ..... ಪಾಣಿ-ನೀರು

ಚಾ ಗರಂ, ಗರಂ ಚಾ–ವಡೆ,–ಉದ್ದಿನ ವಡೆ, ಉಪ್ಪಿಟ್ಟು ಪಾನಮಸಾಲಾ–ಬೀಡಿ ಕಾಡಿ ಪಾನಪಟ್ಟಿ ಸಿಗರೇಟ್–ಸಂಯುಕ್ತಾ ವಿಶ್ವವಾಣಿ ಪ್ರಪಂಚ ಕರ್ಮವೀರ–ಠುರ್–ಝ್ವೀ–ಢಣ್ ಢಣ್–ಹೋಗಿಬರ್‍ರಿ ಹೋಗಿಬರ್‍ರಿ–ಪತ್ರಾ ಬರೀರಿ–ಸಂಬಾಳಿಸಿಕೊಳ್ಳಿರಿ.... ಏನು ರಂಗುರಂಗಾದ ಜಗತ್ತದು ರೈಲಿನದು! ಧ್ವನಿಗಳ ರಾಜ್ಯ ರೇಲ್ವೆ ಸ್ಟೇಶನ್ನು, ಇಷ್ಟು ಧ್ವನಿ–ಇಷ್ಟು ಸಂಕ್ಷಿಪ್ತ ಬ್ರಹ್ಮಾಂಡ–ಎಲ್ಲಿ ಸಿಕ್ಕೀತು ನಮಗೆ ಪ್ರಂಪಚದಲ್ಲಿ!

ನಾನಂತೂ ಎಂದೋ ಪ್ರತಿಜ್ಞೆ ಮಾಡಿಬಿಟ್ಟಿದ್ದೇನೆ ಜೆಟ್ ಹೋಗಲಿ ಜೆಟ್‌ನ ಅಪ್ಪ ಜೆಟ್ಟೆಪ್ಪ ಬಂದು ಕರೆದರೂ ನಾನು ರೈಲನ್ನು ಬಿಟ್ಟು ಪ್ರವಾಸ ಮಾಡುವದಿಲ್ಲ. ಸಪ್ಪೆ ಬಾಳುವೆಯ ನೂರು ವರುಷದಕಿಂತ ನಾಲ್ಕು ತಾಸಿನ ರೈಲುಪ್ರವಾಸ ಕೊಡುವಷ್ಟು ಪ್ರಪಂಚದ ಅನುಭವವನ್ನು ಯಾವ ವಾಹನ ಎಂದು ಕೊಟ್ಟೀತು, ಹೇಗೆ ಕೊಟ್ಟೀತು!

ನೋಡಬೇಕು ಹನಿ ಉದುರುವ ಮುನ್ನಿನ ಮುಗಿಲಿನ ಸೆಕೆಯನ್ನು – ಸಿಗ್ನಲ್‌ದ ಆಚೆ ಗಾಡಿ ಕಾಣಹತ್ತುವ ರೇಲ್ವೆ ದೃಶ್ಯವನ್ನು, ಗಾಡಿ ಬರ್‍ತದೆ ಬರ್‍ತದೆ ಅನ್ನುವ ಉತ್ಕಂಠೆಯಲ್ಲಿ ಇಡೀ ವಿಶ್ವವೇ ನಿಬ್ಬೆರಗಾಗಿ ನೋಡುತ್ತಿರುತ್ತದೆ ರೈಲುಕಂಬಿಗಳನ್ನು, ಎಲ್ಲ ಕಣ್ಣುಗಳೂ ಕಂಬಿಗಳ ಮೇಲೆಯೇ. ಎಲ್ಲರ ದೃಷ್ಟಿಯೂ ಗಾಡಿಬರುವ ದಿಗಂತ ದಾಚೆಯೇ. ಅಷ್ಟರಲ್ಲಿಯೇ ಬರುತ್ತದೆ ಶೇಷಾವತಾರ. ಭುಕ್ ಭುಕ್ ಭುಕ್ ಭುಕ್ ಝುಗ್‌ಝುಗ್–ಝೂ–ಸೂ–HALT. ಏನು ಕೋಲಾಹಲ ನಿಲ್ದಾಣದಲ್ಲಿ! ಕಡೆದಬ್ಧಿಯೆ ಘೂರ್ಮಿಸುವಂತಾಯಿತು! ಮಲಗಿದ್ದ ವಿಶ್ವ ಹೊಡೆಮುರಿದು ಎದ್ದಿತು. ತಲೆಯಮೇಲೆ ಟ್ರಂಕು, ಕೈಯಲ್ಲಿ ಹಾಸಿಗೆ ಸುರುಳಿ, ಚಾಪಿ, ಎಡಗೈಯಲ್ಲಿ ಛತ್ತರಿಗೆ, ಮಗು, ಜನ ಓಡಿದ್ದೇ ಓಡಿದ್ದು, ತಡಕಾಡಿದ್ದೇ ತಡಕಾಡಿದ್ದು....

ಹೂಂ : ಷುರು ನಾಟಕ.

"ಸರಿರಿ ಮಿಸ್ಟರ–ಸ್ವಲ್ಪ ಬಾಗಲಾ ತಗೀರಿ."

"ಇಲ್ಲ–ಜಾಗಾ ಇಲ್ಲ" ನಾಜೂಕು ಧ್ವನಿ.

"ಸ್ವಲ್ಪ ಸರಿರಿ ಅಷ್ಟರೊಳಗೆ please ಕೈಯಲ್ಲಿ ಹುಡುಗ." ದೈನ್ಯ.

"**ಇಲ್ಲರೀ–ಜಾಗಾ ಇಲ್ಲ–ಹಿಂದಿನ ಡಬ್ಬಿ ನೋಡಿರಿ**" ಏನು ಜನಾ ನಮ್ಮ ಭಾರತದ ಜನ ಎಲ್ಲಾರು ಒಂದೇ ಡಬ್ಬಿಯೊಳಗೇ ನುಗ್ಗೂ ಅವರೇ. ಸ್ವಲ್ಪರೇ ನೋಡಬೇಕು. ಹಿಂದಿನ ಡಬ್ಬಿ ಎಲ್ಲಾ ಖಾಲಿ ಅವ. ಎಲ್ಲಾರೂ ಕುರಿ ತುಂಬಿಧಾಂಗ ಒಂದೇ ಡಬ್ಬಿಗೇ ಧಾವಿಸೋದು. ಯಾಕ ಬಂತೋ ಸ್ವಾತಂತ್ರ್ಯ ಅಂತೀನಿ. ಸ್ವಾತಂತ್ರ್ಯ

ಬಂದರೂ ಯಾರಿಗೂ ತಿಳಿವಳಿಕೆ ಬರಲಿಲ್ಲ. ಅಂತೇ ಭಗವದ್ಗೀತಾದಾಗ "ಧರ್ಮಕ್ಷೇತ್ರೇ ಕುರುಕ್ಷೇತ್ರೇ ಅಂತ ಹೇಳಿದರು."

ಸುರು ಒಳಗಿನವರ ಭಾಷಣ. ಎಲ್ಲಿ ನೋಡಲಿಕ್ಕೆ ಸಿಗ್ತದ-ಅನುಭವಿಸಲಿಕ್ಕೆ ಸಿಗ್ತದ ಹೇಳ್ರಿ ಈ ದೃಶ್ಯ. ಒಳಗಿನವರ "ಧರ್ಮಕ್ಷೇತ್ರ". ಹೊರಗಿನವರ "ಕುರುಕ್ಷೇತ್ರ". ಇಷ್ಟಕ್ಕೇ ಬಲ ಬರುತ್ತದೆ ಬಲಗೈಯಲ್ಲಿ ಹಾಸಿಗೆ ಹಿಡಿದ ಮಹನೀಯರಿಗೆ-ಸರಿರೀ-ಸರಿತೀರೆ-ಇಲ್ಲೊ. ತಗೀರಿ ಬಾಗಲಾ "**ಇಲ್ಲಾ ಅಂದ್ರ ಒದ್ದು ತಗೀಬೇಕಾದೀತು. ತಗೀರಿ ಸುಮ್ಮನ ಬಾಗಲಾ ನೀವೇ ಏನು ರೊಕ್ಕಾ ಕೊಟ್ಟವರು ನಾವೇನು ಹುಣಶೀಪಕ್ಕಾ ಕೊಟ್ಟೇವೇನು ತಗೀರಿ ಬಾಗ್ಲಾ**" Plus ಶಬ್ದವಿಲ್ಲದೆ ೧೦-೨೦ ಸಲ ಪಟಪಟ ಬಾಗಿಲ ಬಡಿಯುವದು. ಅಷ್ಟರಲ್ಲೇ ಹಿನ್ನೆಲೆಯಲ್ಲಿ ಸುರು "ತಗೀರಿ ತಗೀರೀ" ಧರ್ಮಕ್ಷೇತ್ರದ ಡಬ್ಬಿ ಗಟ್ಟಿಮುಟ್ಟಿ ಉತ್ತರ ಕೊಡುತ್ತದೆ. - "**ತಗ್ಯೂದಿಲ್ಲಾ ಏನ್ ಮಾಡ್ತೀರಿ ಮಾಡ್ರಿ ಹೋಗ್ರಿ**" ಇದಕ್ಕೆ ಹಿಮ್ಮೇಳ ಬರುತ್ತದೆ ಡಬ್ಬಿ ನಗೆ. "ತಗ್ಯೂದಿಲ್ಲ? ತಗದೇಬಿಡ್ತೀವಿ. ನೋಡಿ ಬಿಡ್ತೀವಿ ಹ್ಯಾಂಗ ತಗ್ಯೂದಿಲ್ಲ ಅಂಬೂದನ್ನ" ಆಧುನಿಕ ಅಭಿಮನ್ಯು ವಾಣಿ. "**ತಗ್ಯೂದುಲ್ಲ, ತಗ್ಯೂದುಲ್ಲ-ಏನಾದ್ರೂ ತಗ್ಯೂದುಲ್ಲ**" ಒಳಗಿನ ಚಕ್ರವ್ಯೂಹದಲ್ಲಿದ್ದ ದುಶ್ಶಾಸನ ವಾಣಿ. "ತಗ್ಯೂದುಲ್ಲ? ಗಾರ್ಡ್-ಮಿಸ್ಟರ್ ಗಾರ್ಡ್-ಗಾರ್ಡರಽಽ-ಗಾರ್ಡಸಾಹೇಬರಽ-ಇಲ್ಲಿ ನೋಡ್ರಿ ಬಾಗ್ಲಾ-" ಅಷ್ಟರಲ್ಲೇ ಶುಭ್ರ ವಸ್ತ್ರಧಾರಿ-ರಕ್ತನೀಲ ಪಟಧಾರಿ-ಗಾರ್ಡ್ ಹತ್ತು ಡಿಗ್ರಿ angle ಮೇಲೆ ಕಣ್ಣು ಹಾಕಿ ಗಾಳಿಯಲ್ಲಿ ಲೀನವಾಗಿಯೇ ಬಿಡುತ್ತಾನೆ. ಹಸರು-ಕೆಂಪು ನಿಶಾನಿ ತೋರಿಸಿ, ಸಣ್ಣ ಹುಡುಗರ ಹಾಗೆ ಫುರ್ ಎಂದು ಸೀಟಿ ಊದಬೇಕಾದ ಆ ಶಕಟ ಸಾರಥಿಗೆ ಎಲ್ಲಿಯ ಗೊಡವೆ ಈ "ಕುರಿಕ್ಷೇತ್ರ" ಪ್ರಕರಣದ್ದು. ಅಷ್ಟರಲ್ಲಿಯೇ ಹೊರಗಿನ ಕುರಿಕ್ಷೇತ್ರ ದಲ್ಲಿ ವಿಚಾರ ಮಂಥನವಾಗಿ change ಆಗುತ್ತದೆ technique. ರೇಲ್ವೆ ಭಾರತದ ಗದಾಸೌಪ್ತಿಕ ಪರ್ವ ಮುಗಿದು ಶಾಂತಿಪರ್ವ ಪ್ರಾರಂಭವಾಗುತ್ತದೆ. ಧರ್ಮಕ್ಷೇತ್ರದಲ್ಲಿ ಒಳಗೆ ಕುಳಿತ ಯಾವನೋ ಮಹಾನುಭಾವ ಭೀಷ್ಮನೋ-ಧರ್ಮರಾಜನೋ-ಹೊರಗಿದ್ದ ಈ ಭೀಮಾರ್ಜುನ ನಕುಲ ಸಹದೇವರನ್ನು ಬರಮಾಡಿಕೊಳ್ಳುತ್ತಾನೆ. ಒಂದೊಂದೆ ಒಳಗೆ ಜಿಗಿಯುತ್ತವೆ ಬಕರಾಗಳು. ಹುಡುಗರು ಹೆಂಗಸರು ತಂಬಿಗೆ plus ಚಿಳ್ಳಿ ಪಿಳ್ಳಿ, ಮಾನವ, ಮಹಾ ಮಾನವ, ಛತ್ತರಿಗೆ, ಟ್ರಂಕ, ಹಾಸಿಗೆಸುರುಳಿ, ಬುಟ್ಟಿ ಗಂಟು, ಗದಡಿ etc, etc. ಸಾಲು ಸಾಲಾಗಿ ಸಿನೇಮಾದ ರೀಲ್ ಹೊರಟಹಾಗೆ. ಬಕರಿ ಒಮ್ಮೆ ಒಳಹೊಕ್ಕರೋ ಮುಗಿಯಿತು ಸಂಗ್ರಾಮ ಕಥೆ. ಸುರು ಸುಖ ಸಂಕಥಾ ವಿನೋದ.

"ನೋಡ್ರಿ ಆಗೂದೇ-ಹಿಂಗ-ಯಾರೇನು ಕಡೆತನಕಾ ಕೂಡೂ ಅವರ ಇದ್ದಾರs? ನಾಲ್ಕು ಇಲ್ಲ ಐದನೇ ಸ್ಟೇಶನ್ನಿಗೆ ಇಳಿಯೂ ಅವರs. ಸುಮ್ಮನೇ ಬಡದಾಟ ಇಷ್ಟೆ ಅಷ್ಟು ಸಂಭಾಳಿಸಿಕೊಂಡು ಹೋದರಾತ್ರೆಪಾ, ಯಾರೇನು ಜಾಗಾ ಕಟ್ಟಿಕೊಂಡು ಹೋಗುವದದನs? ಇಷ್ಟು ಗದ್ದಲ ಆಗ್ತದ ಅಂತ ಗೊತ್ತಿದ್ರೂ ಈ ರೇಲ್ವೆದವರು ನೋಡ್ರಿ ಬೊಡ್ಡಿ ಮಕ್ಕಳು ನಾಲ್ಕು ಡಬ್ಬಿ ಹೆಚ್ಚು ಹಚ್ಚೂದಿಲ್ಲ." "ಅವರಿಗೆಲ್ಲರೀ ಪುರಸತ್ತು ದಿನಾಬೆಳಗೂ ಲಂಚಾ ಹೊಡ್ಯೂದರಾಗs ವ್ಯಾಳ್ಯಾ ಹೋಗ್ತದ. ಹಿಂದುಸ್ತಾನಕ್ಕೆ ಸ್ವಾತಂತ್ರ್ಯ ಬಂದು ಭಲೋ ಏನೂ ಆಗಲಿಲ್ಲ ನೋಡ್ರಿ. ಅದೇರಿ-ನಾವು ಅದರ ಸಲುವಾಗಿ ದುಡಿದೇ ಇಲ್ಲ, ರಕ್ತಾನೆ ಸುರಿಸಿಲ್ಲ - ಅಂದಮ್ಯಾಲs ಹ್ಯಾಂಗ ಗೊತ್ತಾಗಬೇಕು ಅದರ ಸುಖದುಃಖ? ನೆಹರೂ ಏನ್ರಿ-ಏನ್ ನೆಹರೂ? ಇಂಗ್ಲಂಡದಾಗ-"

ರೇಲ್ವೆ ತಾಪತ್ರಯ ನಾಲ್ಕು ಜನರ ಹೆಗಲಮೇಲೆ, ಸರಕಾರದ ತಲೆಯ ಮೇಲೆ ಹಾಕಿಬಿಟ್ಟರಾಯಿತು, ನಮ್ಮ ಆತ್ಮ ನಿದ್ರೆ ಹೊಡೆಯಲಿಕ್ಕೆ ಅಡ್ಡಿಯಿಲ್ಲ. ಬಕರಿಗಳಿಗೆ ಮರತೇಬಿಟ್ಟಿತು ನಮ್ಮ ರೇಲ್ವೆ ಮಹಾಭಾರತ ಪ್ರಕರಣ. ಮುಂದಿನ ಸ್ಟೇಶನ್ ಬರುವುದರಲ್ಲಿಯೇ ಧರ್ಮಕ್ಷೇತ್ರದವರು ಜಮಖಾನಿ ಹಾಸಿರತಾರೆ; ಕುರಿಕ್ಷೇತ್ರದವರು ಹುರಿಗಾಳನ್ನೋ ಅಡಕೆಯನ್ನೋ-ತಾಂಬೂಲವನ್ನೋ, ಧರ್ಮಕ್ಷೇತ್ರದವರಿಗೆ ಕೊಟ್ಟಿರುತ್ತಾರೆ. Coexistence, Absolute coexistence. ಅಮೇರಿಕಾ ರಶಿಯಾ ಕಲಿಯ ಬೇಕು ಇವರಿಂದ ಸಹಜೀವನ ಪಾಠ. ಯಾರ ಕೂಡ ಬಡದಾಡಿದ್ದೇವೆಂಬ ನೆನಪು ಸಹ ಇರದಷ್ಟು ವಿಸ್ಮೃತಿ ತನ್ನ ಪರದೆ ಎಳೆದಿರುತ್ತದೆ. ಎಲ್ಲಾ ಸುಖ, ಆನಂದ, ಹರಟೆ, ಹೊಂದಾಣಿಕೆ, ರಾಜಕಾರಣ ಆದರೆ ಎಲ್ಲಿಯವರೆಗೆ? ಪುನಃ ಮುಂದಿನ ಸ್ಟೇಶನ್ನಿನಲ್ಲಿ ಗಾಡಿ ಭುಕ್-ಭುಕ್-ಝುಗ್-ಝುಗ್-ಝೀ-ಅನ್ನುವವರೆಗೆ. ಒಂದು ಸಲ ಮುಂದಿನ ಸ್ಟೇಶನ್ನದಲ್ಲಿ ಗಾಡಿ ನಿಂತಿತೋ, ಒಳಗಿನ Ex ಧರ್ಮಕ್ಷೇತ್ರದವರು ಈಗ ಹೊಸದಾಗಿ ಸೇರಿದ ಪಾಂಡವರು ಎಲ್ಲರೂ ಒಂದಾಗುತ್ತಾರೆ. ಹೊಸದಾಗಿ ಬಂದ ಕುರಿಕ್ಷೇತ್ರದ ಕೌರವರು ಯುದ್ಧಕ್ಕಾಗಿ ಮಸಗುತ್ತಾರೆ. ಎಲ್ಲಿ ಕಾಣುತ್ತೀರಿ ಹೇಳಿರಿ ಇಂಥ ನಾಟಕವನ್ನು? ದೇವರಾಣೆ ಮಾಡಿ ಹೇಳಿರಿ ಬಸ್ಸಿನಲ್ಲಿ ಸಾಧ್ಯವೇ? ವಿಮಾನದಲ್ಲಿ ಸಾಧ್ಯವೇ? ಬಡಪಾಯಿ "ಜೀವನ ಎತ್ತಿನ ಗಾಡಿಯಲ್ಲಿ" ಸಾಧ್ಯವೆ? ಮಾಡಬೇಕು ಪ್ರವಾಸ ರೈಲಿನಲ್ಲಿಯೇ! ರೇಲ್ವೆ ಪ್ರವಾಸವೆಂದರೆ ನಿಮಿಷ ನಿಮಿಷಕ್ಕೆ ಮಹಾಭಾರತ, ನಿಮಿಷ ನಿಮಿಷಕ್ಕೆ ನಾಗಾಸಾಕಿ ಹಿರೋಶಿಮಾ. ನಿಲ್ದಾಣ ನಿಲ್ದಾಣಕ್ಕೆ ಶಾಂತಿ ಪಾಠ. ಅರಸುಗಳ ವೀರ (ಹೊಡೆದಾಡುವ ಶಕ್ತಿ ಇದ್ದವರಿಗೆ); ದ್ವಿಜರಿಗೆ ಪರಮವೇದದ ಸಾರ

(ಉಪದೇಶ ಮಾಡಬೇಕೆಂಬ ಚಾಪಲ್ಯ ಇದ್ದವರಿಗೆ); ಯೋಗೀಶ್ವರರ ತತ್ತ್ವವಿಚಾರ (ಬಾಯಿ ಸತ್ತವರಿಗೆ); ಮಂತ್ರಿ ಗಣಕ್ಕೆ ಬುದ್ಧಿ ಗುಣ (ಸ್ಥಳ ಸಾಧಿಸುವ ಬಕಪಕ್ಷಿಗಳಿಗೆ) ಹಾಗೂ ವಿರಹಿಗಳ ಶೃಂಗಾರ (ಮನೆಯ ಹೆಣ್ಣುಮಕ್ಕಳನ್ನು ಬಿಟ್ಟು ಬಂದವರಿಗೆ). ಅಷ್ಟೇ ಅಲ್ಲ ರೈಲಿನಲ್ಲೂ ಕೂಡ ಈ ಸಾಹಿತ್ಯ ಎಲ್ಲರಿಗೂ ಇಲ್ಲ. ಇದರ ಮಕ್ತೆ ಪ್ರಜಾಪ್ರಭುತ್ವದ ತೃತೀಯ ವರ್ಗದ ಪ್ರಯಾಣಿಕರಿಗೆ ಮಾತ್ರ. ಈ ಸುಖ ೧ನೆಯ ವರ್ಗದವರಿಗೆಲ್ಲಿ ಬರಬೇಕು? ಎರಡನೆಯ ವರ್ಗದ ತ್ರಿಶಂಕುಗಳಿಗೆ ಎಲ್ಲಿ ಸಿಗಬೇಕು? ಅವರು ಇತ್ತ ದರಿ–ಅತ್ತ ಪುಲಿ ಲೋಕದವರು.

ಮಾಡಿದರೆ ಪ್ರವಾಸ ಮಾಡಬೇಕು ಥರ್ಡ್ ಕ್ಲಾಸಿನಲ್ಲಿಯೇ. ಅದಾ ಕರ್ತಾರನ ಕಮ್ಮಟ; ಜನತಾ ನಾಟಕ ಶಾಲೆ; ಪ್ರಾಪಂಚಿಕ ವಿದ್ಯಾಶಾಲೆ. ಸ್ವರ್ಗದವರಿಗೇನು ಗೊತ್ತು ಈ ಬದುಕಿನ ಸುಖ. First Classನವರೇನೋ ಧಡಧಡ ಬರುತ್ತಾರೆ. ಗಾಡಿ ಬಿಡುವ ಎರಡು ನಿಮಿಷ ಮೊದಲು ಪೋರ್ಟರ ಸಾಮಾನು ಇಡುತ್ತಾನೆ. ಇಡಿಸಿ ಒಳಗೆ ಒಮ್ಮೆ ಪ್ರತಿಷ್ಠಾಪನೆ ಹೊಂದಿದರೋ ಒಳಗಿದ್ದ ಇತರ ಸಹ ಪ್ರವಾಸಿಕರಾರೋ ಇವರಾರೋ! ತಾರುಕಂಬ ಹೋಗುತ್ತವೆ ಬರುತ್ತವೆ. ನದಿ ಹಿಮ್ಮೆಟ್ಟುತ್ತವೆ ಜಾರುತ್ತವೆ. ಎದುರಿಗಿನವರ ಮುಖ ಕೂಡ ಇವರು ನೋಡುವುದಿಲ್ಲ–ಇವರ ಮುಖ ಅವರು ನೋಡುವುದಿಲ್ಲ, ನಡುವೆ ಅಯರ್ನ ಕರ್ಟನ್ನೋ ಬಾಂಬೂ ಕರ್ಟನ್ನೋ ಇದ್ದಹಾಗೆ Paper curtain ಅರ್ಥಾತ್ Times of India ಇಲ್ಲವೆ ಹಿಂಡೂ (ಹಿಂದೂ ಅಲ್ಲ) ಹಿಡಿದಿದ್ದ ಇವರಿಗೆ ಅವರ ಹೆಸರು ಗೊತ್ತಿಲ್ಲ; ಅವರಿಗೆ ಇವರ ಹೆಸರು ಗೊತ್ತಿಲ್ಲ, ಆಪ್ಪಿತಪ್ಪಿ ಮನೆಯ ಹೆಂಡತಿಯೂ ಗೊತ್ತಾಗದೆ First Class ಪ್ರವಾಸ ಮಾಡಿದ್ದರೆ, ಆವಾಗಲಾದರೂ ಈ ಜನ ಅವಳ ಮುಖವನ್ನಾದರೂ ನೋಡುತ್ತಿದ್ದರೋ ಇಲ್ಲವೋ! ಆಯುಷ್ಯದಲ್ಲಿ ಎಷ್ಟು ಕಳೆದುಕೊಳ್ಳುತ್ತಾರೋ ಈ ಜನ First Class ಪ್ರವಾಸ ಮಾಡಿ.

First Class ಪ್ರಭುಗಳ ಮಾತು ಹೀಗಾದರೆ, Second Class ಬಡಪಾಯಿ ಗಳ ವೇದನೆ ಹೇಳತೀರದು. ಸೆಕೆಂಡ್‌ಕ್ಲಾಸ್ ಜನರನ್ನು ಕಂಡರೆ ನನಗೆ ಕನಿಕರವೆನಿಸುತ್ತದೆ. ತೆರಣಿಯ ಹುಳು ತನ್ನ ಸ್ನೇಹದಲ್ಲಿಯೇ ಸುತ್ತುವಂತೆ ಸುತ್ತುವ ಜನ ಇದು. ಇವರು First Classಗೆ ಏರಲಿಲ್ಲ, Third Classಗೆ ಇಳಿಯಲಿಲ್ಲ, ಸತ್ತು ಸ್ವರ್ಗ ಕಾಣಲಿಲ್ಲ, ಇದ್ದು ಜೀವನ ನೋಡಲಿಲ್ಲ, ಇವರ ಸಂಭಾಷಣೆಯೋ ಬಾಲಭಾಷೆ. ತಮ್ಮ Promotionಓ Incrementಓ ರಾಜ್ಯದ ರಾಜಕಾರಣವೋ ನೆಹರೂ ಅವರ

ತೆಗಳಿಕೆಯೋ ತಮ್ಮ ಹೀಯಾಳಿಕೆಯೋ ಈ ಜನರ ಚರ್ಚಾವಿಷಯ. ಈ ಜನ ಡಬ್ಬಿಯಲ್ಲಿ ಬರುವಾಗ ತಮ್ಮ ಜೀವನದ ದುಃಖವನ್ನು ಹೊತ್ತುಕೊಂಡು ಬಂದರು. ರೈಲಿನಲ್ಲಿಯೂ ಅದನ್ನೇ ಪ್ರಸಾದವಾಗಿ ಹಂಚಿದರು. ಇಳಿಯುವಾಗಲೂ ಅದನ್ನೇ ಗಂಟು ಕಟ್ಟಿ ಹೊತ್ತುಕೊಂಡು ಇಳಿದರು. ತಮ್ಮ ಸಂಸಾರದ ತಾಪತ್ರಯ ಚಕ್ರವನ್ನು ದಾಟಿ ಹೊರಬಾರದ ಅಧಮ ಪ್ರಾಣಗಳು ಈ second Class ಇನವರು. First Class ಇನ ನಿಗ್ರಹವಿಲ್ಲ; third Class ಇನ ಸುಖವಿಲ್ಲ! ಜೀವನ್ಮೃತರು. ಪಾಪಿಷ್ಠರು. ಬಡಪಾಯಿಗಳು.

ಆದ್ದರಿಂದ, ಮಾಡಬೇಕು ಪ್ರವಾಸ ಥರ್ಡಕ್ಲಾಸಿನಲ್ಲಿಯೇ! ಏನು ಭೂಪರು ನಮ್ಮ ಥರ್ಡಕ್ಲಾಸ್ ಜನ! ವಸ್ತಾದರು! ಗಾಮಾ ಗುಂಗಾ–ಪೈಲ್ವಾನ್ ಕಿಂಗಕಾಂಗ ದಾರಾಸಿಂಗರು. ಸಂಸಾರ ತಾಪತ್ರಯಗಳೇನೇ ಇರಲಿ–ಉರದುದ್ದವಿರಲಿ ಶಿರದುದ್ದ ವಿರಲಿ– ಎಷ್ಟೇ ಇರಲಿ ಅವನ್ನೆಲ್ಲ ರೈಲಿನ ಹೊರಗೇ ಬಿಸಾಕಿ ಎಷ್ಟು ಆನಂದದಲ್ಲಿ ಕುಳಿತಿದ್ದಾರೆ – ಈ ಭೂಪರು! ಜಮಖಾನೆ ಹಾಸಿದ್ದಾರೆ. ಹಾಸಿಗೆಗಂಟಿನ ತಲೆಗಿಂಬು ಇಟ್ಟಿದ್ದಾರೆ. ಒಬ್ಬ ಯಜಮಾನನನ್ನು ನಿರ್ಮಾಣ ಮಾಡಿದ್ದಾರೆ. ಹೊಡೀತಿದ್ದಾರೆ ಹರಟೇ. ಹೊಸೀತಿದ್ದಾರೆ ಹರಟೆ. ರೈಲ್ವೆ ಪಂಚಾಯತಿ ಕಚೇರಿಯಲ್ಲಿ ಊರಿನ ಮಳೆ, ಬೆಳೆ, ಕಾರಹುಣ್ಣಿಮೆಯ ಕರಿ, ಎತ್ತು ಒಜ್ಜೆ ಎಳೆದದ್ದು, ಊರಿಗೆ ಹೊಸದಾಗಿ ರಸ್ತೆಯಾದದ್ದು, ಪಂಚಾಯತಿ ರಾಜಕಾರಣ, ಊರಿಗೆ ನೀರಿನ ಪಂಪು ಕೊಟ್ಟದ್ದು ಅಂಕು ಡೊಂಕು ಒಡ್ಡು ರಾಷ್ಟ್ರ ರಕ್ಷಣಾ ನಿಧಿ ಕೂಡಿಸಿದ್ದು ಒಂದೇ ಎರಡೇ ಆಕಾಶದಲ್ಲಿ ಗಾಳಿಪಟ ಹಾರಾಡುವ ಹಾಗೆ ಇವರ ಸಂಭಾಷಣಾವಿಷಯ ಹಾಗೆ ಹೀಗೆ ಹೆಡೆಯಾಡುತ್ತ ಇರುತ್ತದೆ. ಏನು ಸುಖ ಇವರ ಮಾತಿನಲ್ಲಿ! ಬಂಧವಿರದೆ ಬಂಧುರ – ಸ್ವಚ್ಛಂದ ಸುಂದರ! ಪ್ರವಾಸ ಪ್ರಾರಂಭ ಮಾಡಿದ ಎಷ್ಟು ಸ್ವಲ್ಪ ಕಾಲದಲ್ಲಿಯೇ ಒಂದುಗೂಡಿದ್ದಾರೆ ಈ ಜನ. ಒಬ್ಬೊಬ್ಬರೇ ಪ್ರವಾಸ ಮುಗಿಸಿ ಇಳಿಯುವಾಗ ಅವರ ರಾಮರಾಮವೇನು ಶರಣು ಶರಣೇನು! Good bye ಕೂಡ ಹೇಳಲಾರದ First Class ಇನವರಿಗೇನು ಗೊತ್ತು ಈ ಸುಖ. ಅಲಮ್ ಅತಿ ವಿಸ್ತರೇಣ. ದೃಷ್ಟಿಯಾದೀತು III Class ಈ ಸುಖ ಸಂಸಾರಕ್ಕೆ. ಡಂಗುರ ಸಾರುತ್ತೇನೆ. ಮಾಡಬೇಕು ಪ್ರವಾಸ ಥರ್ಡ ಕ್ಲಾಸಿನಲ್ಲಿಯೇ. ಒಂದು ಥರ್ಡ ಕ್ಲಾಸ್ ಡಬ್ಬಿಯೆಂದರೆ "ವಿದ್ಯಾನಟೀ ನಾಟ್ಯವೇದೀ ಕಲ್ಪ" ಮೊಫತ್ ನಾಟಕಶಾಲೆ. ನಾಲ್ಕಂಕಿನ ನಾಟಕ. ನಮ್ಮ ಭೂಪರು ಚೌಕಾಗಿ ಹರಟೆ ಹೊಡೆಯುತ್ತಿರುವಾಗಲೇ ಬರುತ್ತಾನೆ ಪ್ರಥಮ ಅಂಕದ ಸೂತ್ರಧಾರ ಹುರಿಗಾಳು ಚುರಮರಿ ಮಾರುವ ರಾಜಾಕೋಮತಿ– "ಫಷ್ಟ್‌ಕ್ಲಾಸ್ ಮಸಾಲಾ–

ಚುರಮರೀ-ಶೇಂಗಾ-ಕಾಕಡಿ-ಹುರಕಡ್ಲೀ-ಗರಮ್ ಮಸಾಲಾ ಚುರಮರೀ" ಅಪ್ಪಿ ತಪ್ಪಿಯಾದರೂ ಹೋದಾನೇ ಈ ಭೂಪ ಫರ್ಸ್ಟ್ ಕ್ಲಾಸಿಗೆ! ಥರ್ಡ ಕ್ಲಾಸಿನಲ್ಲೇ ಇವನ ಜೀವನ ಮುಕ್ತಿ - ಇವರೆಲ್ಲಾ ಹಾಯುವುದು ಜನತಾಜನಾರ್ದನನ ಸೇವೆಗಾಗಿ. ತೆಗೆದುಕೊಳ್ಳುವವರು ತೆಗೆದುಕೊಳ್ಳಬಹುದು. ಬಿಡುವವರು ಬಿಡಬಹುದು. ಹೊಂಟಾ ರಾಜಾ-ಈ ಡಬ್ಬಿಯಿಲ್ಲಾ-ಮುಂದಿನ ಡಬ್ಬಿಗೆ. ಒಂದು ಕ್ಯಾರೇಜಿನಿಂದ ಮತ್ತೊಂದು ಕ್ಯಾರೇಜಿಗೆ ಜಿಗೀತಾನೆ ವಾಯುಪುತ್ರ-ಗಾಳೀಮಗ, ಬಜರಂಗ ಬಲೀ ಬಹಾದ್ದರ - ಗರಮ್ ಮಸಾಲಾ.

ಗರಮ್ ಚುರಮರಿ ಕಾಕಡಿ ಕ್ಷುಧಾ ಪ್ರಕರಣ ಮುಗಿಯುವುದರಲ್ಲಿಯೇ, ಅವನ ಹಿಂದಿನಿಂದಲೇ ಬರುತ್ತಾನೆ ಧರ್ಮರಾಯನ ಆಕಳು. ಹೆಗಲಲ್ಲಿ ಇದ್ದಲು ಮೊಮ್ಮಗ. ೭-೮ ವರ್ಷದ ಕಲಿಪೋರ. ಕೆದರಿದ ಕೂದಲು, ಇದ್ದಲು ಮೈ, ಹರಕು ಬಟ್ಟೆ ಷುರು ಮಾಡುತ್ತಾನೆ ರೆಕಾರ್ಡ್- "ಅಪ್ಪಾ ದೈವುಳ್ಳವರೇ, ಧರ್ಮ ಮಾಡ್ರಿ ಎಪ್ಪಾ, ಕಣ್ಣಿದ್ದವರೇ, ಬಡವ ಎಪ್ಪಾ, ಅನಾದಿ ಶಿವಾ, ಎಪ್ಪಾ ಧರ್ಮಾ ಮಾಡ್ರಿ ಎಪ್ಪಾ ನಿಮ್ಮ ಮಕ್ಕಳಿಗೆ ಮರಿಗೆ ಕಲ್ಯಾಣವಾಗಲಿ ಎಪ್ಪಾ" ಅವನ ಪುಸ್ತಕದ ಈ ಉಪೋದ್ಘಾತ ಕೇಳುವವರು ಕೇಳುತ್ತಾರೆ, ಬಿಟ್ಟವರು ಬಿಡುತ್ತಾರೆ. ಗದ್ಯ ಸೋತಿತೆಂದು ಕಂಡಿತೋ, ಪ್ರಾರಂಭ ಮಾಡುತ್ತಾನೆ ಮರಿ ಸಂಗೀತ. ಅವನ ದೇಹವೇ ವಾದ್ಯ, ಹೊಟ್ಟೆಯೇ ತಬಲ; ಹಲ್ಲೇ ತಾಳ; ಮೂಗೇ ವೀಣೆ. ಚೌಡಯ್ಯನವರು ಲಗಾ ಹಾಕಬೇಕು ಈ ಬ್ರಹ್ಮಸ್ಪತಿಯ ಮುಂದೆ. ಥಪ್ ಥಪ್ ಹೊಟ್ಟೆ ಬಡೆದುಕೊಂಡು, ಮೂಗಿನ ಏಕತಾರಿ ಯಲ್ಲಿ ಬಾರಿಸುತ್ತಾನೆ. "ಚಲ್ ಚಲ್‌ರೆ ನೌಜವಾನ". ಬಹದೂರ! - ಥರ್ಡಕ್ಲಾಸ್ ಬಾಂಧವರಿಂದ ಉದುರುತ್ತವೆ ೪-೫ ಬಿಡಿ ನಯಿ ಪೈಸೆ - ಮಳೆ ಹನಿ ಉದುರಿದ ಹಾಗೆ.

ಈ ಕ್ಷುಧಾಶಾಂತಿ ವಾದ್ಯಸೇವೆ ಮುಗಿಯುವುದರಲ್ಲಿಯೇ ಕಕ್ಕಸದ ಮೂಲೆಯಿಂದ ಬರುತ್ತದೆ ಅಪ್ಸರ ಸಂಗೀತ - "ತೇರೆ ದಾರ ಖಡಾ ಭಗವಾನ್-ತೇರೆ ಭಗತಮೇ-ತೇರೇ ದಾರ ಖಡಾ." ಈ ಭಗವಂತನ ಧ್ವನಿ ನಾರದನಿಂದ ಕದ್ದದ್ದೇ ಇರಬೇಕು. ಪರವಾ ಇಲ್ಲ, ಚೆನ್ನಾಗಿ ಹಾಡುತ್ತಾನೆ ಹನ್ನೆರಡು ವರುಷದ ಕುಮಾರ ಗಂಧರ್ವ. ಈ ಭಗವಂತ ತನ್ನ ಅವತಾರವನ್ನು ಸಾರಿ ಹೇಳುತ್ತಾನೆ- "ದೂರ ದೇಶಕಾ ರಹನೇವಾಲಾ ಆಯಾ-ದೇಶ ಪರಾಯೇ." ಜನ ಸಂಗೀತ ಕೇಳುತ್ತಾರೆಯೇ ವಿನಾ ಕೈಚಾಚುವದಿಲ್ಲ, ಕುಮಾರ ಗಂಧರ್ವ ಪ್ರಾರಂಭ ಮಾಡುತ್ತಾನೆ - "ಯಾರಿಗೂ

ಯಾರಿಲ್ಲ ಎರವಿನ ಸಂಸಾರ ನೀರ ಮೇಲಣ ಗುಳ್ಳಿ ಮಾನವಾ" – ಆತು ಉದುರುತ್ತವೆ ೩ನಯೆ ಪೈಸೆ – ಎರಡು ಸವಕಳಿ ನಾಣ್ಯ.

ಇವನ ಹಾಡನ್ನು ಕೇಳಿ, ಸ್ಫೂರ್ತಿಗೊಂಡ ಭಿಕ್ಷುಕನೊಬ್ಬ ನಮ್ಮ ticketless ಸಹ ಪ್ರವಾಸಿಕ-ತಾನೂ ಒಂದು ಛಾನ್ಸ ತೆಗೆದುಕೊಳ್ಳುತ್ತಾನೆ ಇದೇ ಸಂದರ್ಭದಲ್ಲಿ, "ಯಪ್ಪಾ ಧರ್ಮಾ ಯಪ್ಪಾ ಭಿಕಾರಿ ಯಪ್ಪಾ." ಹೊಲದಲ್ಲಿ ಹೊಕ್ಕ ದನ ಬಡೆದ ಹಾಗೆ ಎಲ್ಲರೂ ಅವನನ್ನು ಛೀ ಥೂ ಹಾಕಿ ಅಲ್ಲಿಯೇ ಕೂಡ್ರಿಸುತ್ತಾರೆ. ಅವನದಾದರೂ ಏನು ಗಂಟು ಹೋಯಿತು? ಹಿಡಿದ ಕಾಲಿನ ಜೋಮಾದರು ಬಿಟ್ಟಿತು ಎಂದು ಪುನಃ ಕುಳಿತುಕೊಳ್ಳುತ್ತಾನೆ ಈ ವಿದೂಷಕ. ಹರಟೆ ಪುನಃ ಪ್ರಾರಂಭವಾಗುತ್ತದೆ.

ಕ್ಷುಧಾಶಾಂತಿ, ವಾದ್ಯಸೇವೆ, ಸಂಗೀತ ಸಮಾರಾಧನೆ, ವಿನೋದ ಮುಗಿದ ಮೇಲೆ ಬರಲೇಬೇಕು – ಕೊನೆಯ ನಾಲ್ಕನೆಯ ಅಂಕಿನ ಪ್ರಮಿಳಾ ಪ್ರಕರಣ. ಈ ಚಲತ್ ನಾಟಕದ ಕೊನೆಯ ಅಂಕು ಪ್ರಮೀಳಾ ಪ್ರಕರಣ. The best is yet to come the last of life for which the first was made. ಈ ಚಲತ್ ನಾಟಕದ ಕೊನೆಯ ಅಂಕು ಪ್ರಮೀಳಾ ಪ್ರಕರಣ.

ಐವತ್ತು ವರುಷದ ಒಬ್ಬ ಧೃತರಾಷ್ಟ್ರನ ಕೈಹಿಡಿದು ಬರುತ್ತಾಳೆ ಆವನ ಪತಿವ್ರತಾ ಶಿರೋಮಣಿ ಇಪ್ಪತ್ತು ವರುಷದ ಗಾಂಧಾರಿ. ಮೂವತ್ತು ವರುಷದ ಅಂತರವಿದ್ದರೇನಂತೆ. ಅವನು ಪತಿ ಸುಳ್ಳೇ, ಅವನ ಕೈಹಿಡಿದ ಇವಳು 'ಕೈ ಹಿಡಿದಾಕೆ' ಸುಳ್ಳೇ (ಯಾರಿಗೆ ಯಾರೇ ಇರಲಿ ಎರವಿನ ಸಂಸಾರ.) ತುಂಬು ಮುಖ, ಪುಷ್ಟವಾದ ಭುಜ, ಕೆದರಿದ್ದರೂ ವಿಶಾಲವಾದ ಕೇಶರಾಶಿ, ತಾಂಬೂಲದಿಂದ ಕೆಂಪಾದ ದಂತ ಪಂಕ್ತಿ, ಹಳೆಯದಾಗಿ, ಪ್ಯಾಚ್ ಹಚ್ಚಿದ್ದರೂ ಉಟ್ಟಿದ್ದ ಹರಕಲು ನೈಲಾನ್. ಕಂಪಾರ್ಟಮೆಂಟಿನ ಮದ್ದಾನೆ ಬಂದಹಾಗೆ ಬರುತ್ತಾಳೆ ಈ ಆಧುನಿಕ ಕ್ಲಿಯೋಪಾತ್ರ! ಎಲ್ಲಿಂದ ಅವತರಿಸಿದರೋ ಈ ಗಾಂಧಾರಿ ಧೃತರಾಷ್ಟ್ರರು. ಮೇನಕೆ ಇಳಿದ ಹಾಗೆ, ಅಪ್ಸರೆ ಅವತರಿಸಿದ ಹಾಗೆ ಇಳಿದ ಈ ಪತಿವ್ರತಾ ಶಿರೋಮಣಿಗೆ ಕಂಪಾರ್ಟಮೆಂಟಿನಲ್ಲಿರುವ ಯಾರ ಕಡೆಗೂ ಲಕ್ಷ್ಯವೇ ಇಲ್ಲ, ಇವಳನ್ನು ನೋಡಿಯೇ ಹೇಳಿರಬೇಕು ಕವಿ "ಇಯಂಸುಸ್ತನೀ ಮಸ್ತ್ ಕನ್ಯಾ" ಎಂದು. ಮತ್ತಚಕೋರ ನೇತ್ರೆಯಾದ ಈ ಇಂದು ಮತಿಯ ಕಣ್ಣಲ್ಲಿ ಯಾವ ಕಸ ಬಿದ್ದಿದೆಯೋ ಏನೋ ಆ ಎಡಗಣ್ಣನ್ನೇ ತಿಕ್ಕುತ್ತಿರುತ್ತಾಳೆ. ಹಣವಿಲ್ಲದೆ ಭಿಕ್ಷೆ ಬೇಡುವಾಗಲೂ, ಇಷ್ಟು ಪರಿಪುಷ್ಟವಾದ ದೇಹವನ್ನಿಟ್ಟುಕೊಂಡ ಈ ಗಾಂಧಾರಿಯನ್ನು ನೋಡಿದಾಗ ನಮ್ಮ ಭಾರತದ ಆಧ್ಯಾತ್ಮಿಕ ಶಕ್ತಿಯ ಬಗ್ಗೆ ಅಭಿಮಾನ

ಪಡಬೇಕೆನಿಸುತ್ತದೆ. ಗಾಂಧಾರಿ ಇನ್ನೂ ಕಣ್ಣು ಉಜ್ಜಿಕೊಳ್ಳುತಿರುವಾಗಲೇ, ಧೃತರಾಷ್ಟ್ರನೇ ಪ್ರಾರಂಭ ಮಾಡುತ್ತಾನೆ – "ಎಪ್ಪಾ ಧರ್ಮಾರಿ ಎಪ್ಪಾ ಅನಾದಿ ಎಪ್ಪಾ" ಈ ಗದ್ಯದ ಪೂರ್ಣವಿರಾಮ ಬೀಳುತ್ತಲೇ, ಗಾಂಧಾರಿಯನ್ನು ಚುಚ್ಚಿ ಅವನು ಸನ್ನೆ ಮಾಡುತ್ತಾನೆ ಪ್ರಾರಂಭವಾಗುತ್ತದೆ ಅಪ್ಸರ ಸಂಗೀತ.

*"ತಲ್ಲಣಿಸದಿರು ತಾಳು ಕಂಡ್ಯಾ ಮನವೇ –*
*ಕಲ್ಲೊಳಗೆ ಪುಟ್ಟಿ ಕೂಗುವ ಕಪ್ಪೆಗಳಿಗೆಲ್ಲ*
*ಅಲ್ಲಲ್ಲಿಗಾಹಾರವಿತ್ತವರು ಯಾರೋ-*
*ಬಲ್ಲಿದನು ಕಾಗಿ ಕೇಶವರಾಯ-"*

ನೆಲೆ ತಪ್ಪಿದ ಮೇಲೆ ಕೇಶವರಾಯ ಕಾಗಿಕೇಶವರಾಯನೇ ಅಲ್ಲವೇ? ಏನೇ ಆಗಲಿ ಮಾನವ ಬದುಕಲೆಂದು ಕನಕದಾಸರು ಎಂಥ ಅಮೋಘ ಸಂದೇಶವನ್ನಿತ್ತರು. ಹಿರಿಯರ ವಾಣಿ ಹುಸಿ ಹೋಗುವದಿಲ್ಲ, ಇಲ್ಲವಾದರೆ ಈ ರಾಣಿ ಇಂಥ ಬಡತನದಲ್ಲಿ ಕೂಡ ಇಂಥ ಸುಪುಷ್ಟ ದೇಹ ಹೇಗೆ ಇಟ್ಟುಕೊಂಡಿರುತ್ತಿದ್ದಳು. ಪರಮಾತ್ಮ ಅಲ್ಲಲ್ಲಿ ಆಹಾರ ಇತ್ತಿದ್ದಾನೆ ಸ್ವಾಮೀ ಸಕಲ ಪ್ರಾಣಿಗಳಿಗೂ ಇತ್ತಿದ್ದಾನೆ. ಯಾರಿಗೆ ಗೊತ್ತು ಎಲ್ಲೆಲ್ಲಿ ಯಾವ ಯಾವ ಹುಲ್ಲುಗಾವಲದಲ್ಲಿ ಹೂವಿದೆ ಹಾವಿದೆ ಎಂದು. ಅನೇಕ ಹಸ್ತದಿಂದ ಆಹಾರ ಇಟ್ಟಿದ್ದಾನೆ ಪರಮಾತ್ಮ ದಯಾನಿಧಿ. ಈಗ ಈ ಗಾಂಧಾರಿ ಧ್ವನಿಗೂಡಿಸುತ್ತಾಳೆ ಭಿಕ್ಷಾಟನೆಗೆ-ಧರ್ಮಾ ಎಪ್ಪಾ-

ಹೆಚ್ಚಿಲ್ಲ, ಹೌದು ಅವರ ಧರ್ಮದ ಜವಾಬ್ದಾರಿ ಇವಳೇಕೆ ಹೊರಬೇಕು? ಧರ್ಮದ ನೆನಪು ಮಾಡಿಕೊಟ್ಟರೆ ಸಾಕು-ಗೃಹೀತ ಇವ-ಕೇಶೇಷು ಮನುಷ್ಯ ಧರ್ಮಾಚರಣೆ ಮಾಡಲೇಬೇಕು. ಕನಕದಾಸರ ಮೂರು ಸಾಲು ಕಂಪಾರ್ಟಮೆಂಟಿನಲ್ಲಿ ಇನ್ನೂ ನಿನದಿಸುತ್ತಿರುವಾಗಲೇ ಪ್ರಾರಂಭವಾಗುತ್ತದೆ ಹಿಂದೀ ಚೀಜ್. ಈ ಸಲ ಕಪ್ಪೆ ಹಾವುಗಳ ಮಾತಿಲ್ಲ "ಏ ಚಾಂದ್ ಛುಪನಾ ಜಾನಾ ಜಬತಕ ಮೈ ಗೀತ ಗಾವೂ-ಏ ಸಾಂಜ್ ಝಿಂದಗೀಕಾ ಮೈ ಉಮರ ಭರ ಸುನಾವು." "ತೇರೀ ಪ್ಯಾರೀ ಪ್ಯಾರೀ ಸೂರತಕೊ ಕಿಸೀಸೆ ಡರ್ನಾಲಗೇ ಚಷ್ಮೇ ಬದ್ದೂ" "ಮೇರೇ ಮನಕೀ ಗಂಗಾ ಔರ ತೇರೀ ಮನಕೀ ಜಮುನಾ ಬೋಲ ರಾಧಾ ಬೋಲ ಸಂಗಮ ಹೋಗಾಕಿ ನಹಿ"- ಶರಾವತಿ ಧುಮ್ಮಿಕ್ಕಿದ ಹಾಗೆ ಫಟ ಫಟ ಬೀಳುತ್ತವೆ ನಾಣ್ಯರಾಶಿ. ಆಯುಕೊಳ್ಳುವವರು ಆಯ್ದುಕೊಳ್ಳಬೇಕು ತಮ್ಮ ದೈವ.

ನೋಡಬೇಕು ಈ ರಂಗರಂಗೀತ ನಾಟಕಾ ಥರ್ಡಕ್ಲಾಸಿನಲ್ಲಿಯೇ. ಈಗಲಾದರೂ

ಮನವರಿಕೆಯಾಯಿತೇ ನಾನು ಹೇಳಿದ ಮಾತು? ಈ ಶೃಂಗಾರ-ಈ ವೈರಾಗ್ಯದ ಗಂಗಾಯಮುನೆ ಬಸ್ ಪ್ರವಾಸದಲ್ಲಿ ನಿಮಗೆ ಸಿಗುತ್ತದೆಯೇ ಹೇಳಿ? ಎತ್ತಿನ ಗಾಡಿಯಲ್ಲಿ ಸಿಗುತ್ತದೆಯೇ ಹೇಳಿ? ನಾಲ್ಕು ತಿಂಗಳಿಗೊಂದು ಸಲ ಮಗ್ಗಲು ಮಡಚಿ ಕೊಂಡು ಬೀಳುವ ಜಟಾಯು ಅಲ್ವಾಯು ಜೆಟ್ ವಿಮಾನದಲ್ಲಿ ಸಿಗುತ್ತದೆಯೇ ಹೇಳಿ. ಮಾಡಬೇಕು ಪ್ರವಾಸವನ್ನು ರೈಲಿನಲ್ಲಿಯೇ. ಅದೂ ಥರ್ಡಕ್ಲಾಸಿನಲ್ಲಿಯೇ.

ಅಷ್ಟೇ ಅಲ್ಲ; ಎಂಥ ಸಾಹಿತ್ಯ ನಮ್ಮ ರೇಲ್ವೆ ಕಂಪಾರ್ಟಮೆಂಟುಗಳಲ್ಲಿಯದು! ನಾನು ಚಿಕ್ಕಂದಿನಿಂದಲೂ ಬೆರಗುಗಣ್ಣುಗಳಿಂದ ಈ ಚಿತ್ರ ಲಿಪಿ ನೋಡುತ್ತಲೇ ಬಂದಿದ್ದೇನೆ. ಈ ಭಾಷೆಯನ್ನೂ ಈ ಲಿಪಿಯನ್ನೂ ಅರ್ಥ ಮಾಡಿಕೊಳ್ಳಲು ಯತ್ನಿಸುತ್ತಲೇ ಇದ್ದೇನೆ. ಆದರೂ, ನನ್ನ ವಿದ್ಯಾರ್ಥಿ ಜೀವನ ಇನ್ನೂ ಮುಗಿದಿಲ್ಲ. ಹಿರಿಯರು ಹೇಳಲಿಲ್ಲವೇ ಮನುಷ್ಯನು ಆಯುಷ್ಯದಲ್ಲಿ ಕಲಿಯುವುದು ಬಹಳವಿದೆ : ಕೊನೆಯವರೆಗೂ ಕಲಿಯುವುದಿದೆ ಎಂದು. ಸರಿಯಾದ ಮಾತು - ಈ ಬ್ರಾಹ್ಮೀ ಲಿಪಿಯನ್ನು ಓದುವ ಪರಿಶ್ರಮವನ್ನು ನಾನು ಇನ್ನೂ ಮಾಡುತ್ತಲೇ ಇದ್ದೇನೆ. ೨೪ ಜನರು ಕೂಡ್ರುವುದು. "೨೪ ಜನರು ಕೂರ್ಚುಂಡುದಿ". ಪ್ರಾಯೋಗಿಕ ಭಾಷಾಂತರ ಪಾಠಗಳು. ಚಿಕ್ಕವನಿದ್ದಾಗ, ನನ್ನ ಉಗುರಿಗೆ ಗಾಯವಾದಾಗ ೪-೬ ದಿವಸ ನಾನು ಉಗುಳೇ ಇಲ್ಲ. ಅದರ ಕಾರಣ ಈ ರೇಲ್ವೆ ಕಂಪಾರ್ಟುಮೆಂಟುಗಳ ವೈದಿಕ ಉಪದೇಶವೇ. "ಉಗಳಬಾರದು. ಉಂಗುಮಾಯವಧು" ಈ ಎರಡೂ ವಾಕ್ಯ ನನ್ನ ಮೆದುಳಿನಲ್ಲಿ ಹೊಂದಿರಲಿಲ್ಲ, ಉಗುಳದಿದ್ದರೆ ಉಗುರು ಮಾಯವಾಗುವುದೆಂದೇ ನಾನು ಭಾವಿಸಿದ್ದೆ. ಆದರರ್ಥ ಹಾಗಲ್ಲವೆಂಬ ಸದರ್ಥಜ್ಞಾನ ನನಗಾದದ್ದೂ ಇತ್ತೀಚೆಗೇ. Travel light; Make travel a pleasure. ಕನ್ನಡದಲ್ಲಿ ಇದರ ಸರಿಯಾದ ತರ್ಜುಮೆ ರೈಲಿನವರಿಗೆ ಇನ್ನೂ ಸಿಕ್ಕಿಲ್ಲ. ಯಾಕೆ ಸ್ವಾಮೀ, ಹೋಗಲಿ ಬಿಡಿ; ನಾವು ಇದ್ದ ಹಾಗೆಯೇ ಎಷ್ಟು ಆರಾಮಾಗಿ ಪ್ರವಾಸ ಮಾಡುತ್ತಿದ್ದೇವಲ್ಲಾ ನಿಮಗೇಕೆ ಇಲ್ಲದ ತಾಪತ್ರಯ. ಆಗಲಿ, ನಿಮ್ಮ ಉಪದೇಶಕ್ಕಾಗಿ ಧನ್ಯವಾದಗಳು.

ರೈಲ್ವೆ ಕಂಪಾರ್ಟಮೆಂಟು ಸಾಹಿತ್ಯ ಗ್ರಂಥವಾಗಿದೆಯಷ್ಟೇ ಅಲ್ಲ; ಸಾಹಿತ್ಯ ಸ್ಫೂರ್ತಿಯ ನೆಲೆಮನೆಯೂ ಆಗಿದೆ. ಅಲ್ಲಲ್ಲಿ ಸಮಯಸ್ಫೂರ್ತ ಲೇಖಕರು ಚಾಕಿನಿಂದಲೋ ಪೆನ್ಸಿಲ್ಲಿನಿಂದಲೋ ಬರೆಯುವ ಟೀಕೆಟಿಪ್ಪಣಿಗಳಂತೂ ಹೋಗಲಿ. ಅವಕ್ಕೂ ಬೆಲೆಯಿದೆ ನಿಜ. ಆದಲ್ಲದೆ ಎಷ್ಟು ಕವಿಗಳು ಈ ಅಮಲ ಗಂಗೋದಕದಲ್ಲಿ ಮಿಂದು ಪುನೀತರಾಗಿಲ್ಲ! ಎಷ್ಟು ಕವಿಗಳು ಈ ಸಾಹಿತ್ಯ ಗಂಗಾವತರಣದಿಂದ ಸ್ಫೂರ್ತಿ ಹೊಂದಿಲ್ಲ!

## ದೊಂಗಲುನ್ನಾರು ಜಾಗ್ರತ!
## ಕಳ್ಳರಿದ್ದಾರೆ ಎಚ್ಚರಿಕೆ !!

ಅಬ್ಬಾ: ಇದನ್ನೋದಿದ ಕೂಡಲೇ, ಎಷ್ಟು ಸಲ ನೀವು ನಿಮ್ಮೊಬ್ಬರ ಮುಖವನ್ನು ಬಿಟ್ಟು ಇತರರ ಮುಖವನ್ನು ಸಂಶಯ ದೃಷ್ಟಿಯಿಂದ ನೋಡಿಲ್ಲ? ಯಾರಿಗೆ ಗೊತ್ತು ಯಾವ ಮುಖದ ಹಿಂದೆ ಯಾವ 'ದೊಂಗಲು' ಅಡಗಿದ್ದಾರೆಂದು. ಯಾವ ಹೂವಿನ ಕೆಳಗೆ ಯಾವ ಹಾವಿದೆಯೆಂದು! ಅದೂ ಹೋಗಲಿ, ಆಧುನಿಕ ಕನ್ನಡ ಕಾವ್ಯ ಪಿತಾಮಹ ಅಂಬಿಕಾತನಯದತ್ತರೇ ಈ ಅಮೋಘ ವಾಕ್ಯದಿಂದ ಸ್ಫೂರ್ತಿ ಹೊಂದಿದ್ದಾರೆಂದ ಮೇಲೆ ಮತ್ತೇನು ಬೇಕು!

*ದೊಂಗಲುನ್ನಾರೂऽರೇ-ಜಾಗ್ರತऽ*
*ಎಚ್ಚರಿರು ಇದೊಂದೇ ಆಗಲಿ ವ್ರತಾ  // ಪಲ್ಲ //*

*ಇನ್ನಾರು ನಿಮ್ಗಽಽ / ಎಚ್ರಾ ಕೊಡಾವ್ರಣ್ಣಾ*
*ಹಾದಿ ಐತಿ ಬಲೂ ಬಲೂ ದೂರಾ*
*ಗಂಟಽ ಬೀಳ್ತಾನ ಅಲ್ಲಿನೆ ಚೋರಾ*
*ನಿದ್ದೀ ಬ್ಯಾಡ್ರೆಪ್ಪಾ, ಬಂದೀತು ಘೋರಾ // ದೊಂಗಲು....*

*ಕಳ್ಳಾ ಅಂಬಾವ / ಬ್ಯಾರೆ ಯಾರೂ ಇಲ್ಲಾ*
*ಅಂವಾ ನಮ್ಹಾಂಗ ನಿಮ್ಹಾಂಗಽ ಎಲ್ಲಾ*
*ಆದ್ರ ಧಂದೇನ ಮಾಡಿಕೊಂಡಾನ ಖುಲ್ಲಾ // ದೊಂಗಲು....*

*ಅಂದಾನು ಹೆದರ್ಬ್ಯಾಡೋ, ಹೆದರ್ಬ್ಯಾಡೋ ತಮ್ಮಾ*
*ಐತಿ, ರಾಜ್ಯಾನ ಇದು ನಮ್ಮ ನಿಮ್ಮಾ*
*ಬ್ಯಾರೆ ಬರ್ತಾರು ಯಾರು? ಮಕ್ಕೊ ಸುಮ್ಮಾ // ದೊಂಗಲು...*

*ಇದ್ದವ್ರ ಹರಕೊಳ್ಳಾಕ ಇಲ್ದವ್ರು ಬರ್ತಾರ*
*ಇದ್ದದ್ದು ಇಲ್ಲದ್ಹಾಂವ್ಗೊ ಯಣ್ಣಾ*
*ಮನುಸ್ಯಾರಽ ಹೂಲಿ ಎಬಿಸಿ*
*ಮನುಸ್ಯಾರ್ನ ತಿಂತಾರ*
*ದೇವ್ರಽ ತೆರಿಬೇಕೋ ಕಣ್ಣಾ*
*ಮುಚ್ಚಿಕೊಂಡೈತಿ / ಅಂತಃಕರ್ಣಾ*

*ಕರ್ಣನ ಕಿಸೇಕsನ ಹಾಕಾವ್ರ ಕನ್ನಾ*
*ಬಂದು ಎದ್ದೈತಿ ಆಲ್ಲಿಲ್ಲಿ ಹಾಹಾಕಾರ*
*ಸ್ವಾಹಾಕಾರಾನ ಬಲು । ದೊಡ್ಡ ಮಂತ್ರ ಆಗ್ಯೆತಿ*
*ಬಂದೈತ್ಯೋ ಗೆಣೆಯಾ ಭಾಳ ಘೋರಾ*
*ಇಲ್ಲಿ ಪಾರಾದವ್ನs ಖರೇ ಶೂರಾ ॥ ದೊಂಗಲು....*

*ಅಂಬಿಕಾತನಯನಿಗು ಇತಿಮಿತಿ ಬಿದ್ದೈತಿ*
*ನೆಂಬಿಕ್ಯಾರೆ ಯಾರ್ದಪಾ ಇಲ್ಲಿ*
*ಪೂಜಾರೀನs ಕೂತು । ದೇವರ್ನ ಕದ್ದರ*
*ಇನ್ನ ಫಜೀತಿ, ಬ್ಯಾರೆ ಯಾವ್ದೈತಿ?*
*ಸೋದsರ ಭಾವಾ ಹೇಳೂವ*
*ಚೋರ್ಧರು ಚೋದರು ಮಾದರು ಕೂಡ್ಯಾರು*
*ಗ್ಯಾಂಗ, ಗ್ಯಾಂಗೀsಗೆ ಬ್ಯಾರೆ ಹೆಸರೈತಿ*
*ಯಾಲೀ ಧೂಲಾ ಆಂತ, ಹೈದೋಸ ನಡಿಸ್ಯಾರ*
*ಮನಸ್ಯಾರ್ಕಿ ಒಳಗs ಕಸರೈತಿ*
*ಸಾಲಾs, ಸಾಲೀs ಆಂತ । ನೆಂಟಸ್ಕಿ ಬೆಳಸ್ತಾರು*
*ಸೋದೇರು ಭಾನಚೋದ ಮಂದಿ । ಭಾಳ ಬೆರ್ಕಿ*
*ಆಲ್ಲಿ ತುರ್ಕಿ, ಇಲ್ಲಿ ತುರ್ಕಿ, ಹೊಡದಾರು ನಡವs ಗಿರ್ಕಿ*
*ತೂಕಡಿಸಬ್ಯಾಡೋ ಜೋಲಿ ತಪ್ಪಿ ॥ ದೊಂಗಲು....*

*ಮನಸ್ಯಾರ್ಹಾಂಗ ಕಾಣ್ತಾರಂತ*
*ಮನಸ್ಯಾರs ಆಂತ ತಿಳ್ದು*
*ನಿದ್ದೀ ಮಾಡಾಕ ಒಪ್ಪಿಗಿಪ್ಪಿ*
*ಹುಷಾರ್, ಹುಷಾರ್ । ಗೆಣೆಯಾ, ತಮ್ಮಾ, ಅಣ್ಣಾ*
*ಜಂಪು ಹತ್ತೀತು ತಪ್ಪೀಸಿ ಕಣ್ಣಾ ॥ ದೊಂಗಲು....*

ಏನು ಸಾಹಿತ್ಯ ಇದು!

ಥರ್ಡಕ್ಲಾಸ್ ರೇಲ್ವೆ ಕಂಪಾರ್ಟಮೆಂಟಿನಲ್ಲಿ ಶ್ರೀಮಾನ್ ಬೇಂದ್ರೆ ಅವರು ಪ್ರವಾಸ ಮಾಡಿರದಿದ್ದರೆ, ಈ ಕಾವ್ಯ ಸ್ಫುರಿಸುತ್ತಿತ್ತೇ? "ದೊಂಗಲುನ್ನಾರು" ಹುಟ್ಟಿಕೊಳ್ಳುತ್ತಿತ್ತೇ? ಕನ್ನಡ ಸಾಹಿತ್ಯ ಒಂದು ಕಾವ್ಯದಿಂದ ಬಡವಾಗುತ್ತಿತ್ತು. ಕನ್ನಡ ಸಾಹಿತ್ಯ ಚರಿತ್ರೆ ಒಂದು ಪುಟದಿಂದ ಕಡಿಮೆಯಾಗುತ್ತಿತ್ತು. "ಕನ್ನಡ ಸಾಹಿತ್ಯಕ್ಕೆ ರೈಲ್ವೆಗಳ

ಕಾಣಿಕೆ" ಎಂಬ ವಿಷಯವಾಗಿ ಯಾರಾದರೂ ಹೊಸಬರು ಒಂದು Ph.D. ಪ್ರಬಂಧವನ್ನು ಯಾಕೆ ಬರೆಯಬಾರದು ಎಂದು ನನಗೆನಿಸುತ್ತದೆ. ರೈಲ್ವೆ ಭಾಷೆಯೇ ಬೇರೆ; ರೀತಿಯೇ ಬೇರೆ. ಬೇಕಲ್ಲ ನಮ್ಮ ತರುಣರಲ್ಲಿ ಪರಿಶ್ರಮ ದೃಷ್ಟಿ

ಪರಿಶ್ರಮ ಎಂದಾಕ್ಷಣಕ್ಕೆ ನೆನಪಾಯಿತು. ವೇಷ ಕಟ್ಟಬೇಕು ರೈಲ್ವೆ ಪ್ರವಾಸ ದಲ್ಲಿಯೇ. ಈ ಚಾನ್ಸ್ ಬಸ್ಸಿನಲ್ಲಿ ನಿಮಗೆ ಸಿಗುವದಿಲ್ಲ. ವಿಮಾನದಲ್ಲಿಯಂತೂ ನೀವು ಒಬ್ಬೊಬ್ಬರ ಕೂಡ ಮಾತಾಡುವುದಿಲ್ಲ. ಅಂದಮೇಲೆ ಹೇಗೆ ಸಿಕ್ಕೀತು?

ವೇಷ ಕಟ್ಟಬೇಕು ರೈಲ್ವೆ ಪ್ರವಾಸದಲ್ಲಿಯೇ. ನೀವು ನಿಮ್ಮ ಕಾಮನೆಗಳನ್ನು ಭಗ್ನ ಮನೋರಥಗಳನ್ನು ಎಲ್ಲಾ ಇಲ್ಲೇ ಈಡೇರಿಸಿಕೊಳ್ಳಬಹುದು. ನೀವು ಆಯುಷ್ಯದಲ್ಲಿ ಏನಾಗಬೇಕೆಂದು ಮಾಡಿದ್ದಿರೋ, ಅದೆಲ್ಲಾ ಇಲ್ಲಿ ಆಗಬಹುದು. ಧಾರವಾಡ ಬಿಟ್ಟು ಹುಬ್ಬಳ್ಳಿ ಮುಟ್ಟುವದರಲ್ಲಿ ರಾಜಕಾರಣಿ, ಕುಂದಗೋಳದಲ್ಲಿ M.L.A.; ಸಂಶಿಯಲ್ಲಿ Deputy Minister; ಗುಡಿಗೇರಿಯಲ್ಲಿ Full Minister; ಎಲವಿಗಿಯಲ್ಲಿ Chance ಸಿಕ್ಕರೆ ರಾಜ್ಯದ ಮುಖ್ಯಮಂತ್ರಿ; ಬೆಂಗಳೂರಲ್ಲಿ ಜವಾಹರಲಾಲ ನೆಹರೂ ಆಗದಿದ್ದರೂ, ನಿಮಗೆ ಹಿಂದಿ ಬರುತ್ತಿದ್ದರೆ, ನೆಹರೂನ ಬೀಗನಾದರೂ ಆಗಬಹುದು. ನಿಜವಾಗಿ ಯಾವ ಹೆಂಗಸು ತನ್ನ ಸರಿಯಾದ ವಯಸ್ಸು ಹೇಳುತ್ತಾಳೆ? ಯಾವ ನೌಕರದಾರ ತನ್ನ ಪಗಾರ ಸರಿಯಾಗಿ ಹೇಳುತ್ತಾನೆ? ಇವೆಲ್ಲಾ ಹೇಳಿದಾಗ, ೨೫ ಪರ್‌ಸೆಂಟ್ ವಜಾಮಾಡಿಯೇ ಸತ್ಯವನ್ನು ತೆಗೆದಿರಬೇಕು. ಅಂತಲೇ Platform ಮೇಲೆ Sub-Inspector ಆಗಿದ್ದ ವ್ಯಕ್ತಿ ರೈಲ್ವೆ ಕಂಪಾರ್ಟಮೆಂಟ ಹೊಕ್ಕ ಕೂಡಲೆ ಒಂದು Jump ಹೊಡೆದು ಇನಸ್ಪೆಕ್ಟರ್ ಆಗುತ್ತಾನೆ. ಇನ್ಸಪೆಕ್ಟರ್ S.P. ಯಾಗಬಹುದು. S.P. ಯು D.I.G. ಯೋ I.G. ಯೋ ಆಗಿರುತ್ತಾನೆ. ಇದು ಎಲ್ಲರಿಗೂ ಅನ್ವಯಿಸುವ ಮಾತೇ. ನನ್ನ ಸಹಮನಸ್ಕರಾದ ಜಾನ್ಸನ್ ಈ ಬುರುಡೇ ಮಾಲಿಕರ ಸುಂದರ ಚಿತ್ರವನ್ನು ತಮ್ಮ "Stage Coach" ದಲ್ಲಿ ಕೊಟ್ಟಿದ್ದಾರೆ.

ಬೆಳಗಿನ ನಸಕು ಮಬ್ಬಿನಲ್ಲಿ ಐದು ಜನ Stage Coach ದಲ್ಲಿ ಪ್ರವಾಸ ಹೊರಟಿದ್ದಾರೆ. ಎಲ್ಲರಿಗೂ ಎಲ್ಲೂ ಇಲ್ಲದ ಆಢ್ಯತೆ. ಯಾರೂ ಒಬ್ಬರ ಕೂಡ ಮಾತಾಡುವುದಿಲ್ಲ. Stage Coach ಹೊರಡಲು ಸಿದ್ಧವಾಗುತ್ತದೆ. ಹತ್ತಿರ ಕುಳಿತರೂ ಸಹ ಒಬ್ಬರು ಇನ್ನೊಬ್ಬರ ಕೂಡ ಮಾತಾಡುವುದಿಲ್ಲ. ಪ್ರತಿಯೊಬ್ಬರೂ ಇನ್ನೊಬ್ಬನ ಮೇಲೆ ಛಾಪು ಹೊಡೆಯಲು ಯತ್ನಿಸುತ್ತಲೇ ಇರುತ್ತಾನೆ. ತಾಸು ಕಳೆಯುತ್ತದೆ, ಎರಡು ತಾಸು ಕಳೆಯುತ್ತದೆ. ಯಾರೂ ಮಾತನಾಡುವುದಿಲ್ಲ. ಎಲ್ಲರೂ ಒಬ್ಬರಕಿಂತ ಒಬ್ಬರು

ಹೆಚ್ಚೆಂಬ ಅಹಮಹಮಿಕೆಯಲ್ಲಿ ಇರುವವರು. ಸ್ಮಶಾನ ಮೌನವನ್ನು ತಡೆಯಲಾರದೆ, ಕೊನೆಗೆ ಒಬ್ಬ ಲಠ್ಠ ಮನುಷ್ಯ ಸೂತೋವಾಚ ಮಾಡುತ್ತಾನೆ. ತನ್ನ ಕಿಸೆಯಲ್ಲಿಯ ಗಡಿಯಾರವನ್ನು ತೆಗೆದು –

"ಈಗ ೫ ಹೊಡೆದುಹೋಗಿದೆ. ಇನ್ನು ಎರಡು ಸೆಕೆಂಡಿನಲ್ಲಿ ಮುಂದಿನ ನಿಲ್ದಾಣದಲ್ಲಿರುತ್ತೇವೆ" ಹೀಗೆಂದು ಹೇಳಿ ಎಲ್ಲರಿಗೂ ಕಾಣುವಂತೆ ತನ್ನ ಗಡಿಯಾರ ವನ್ನು ಜೋತುಬಿಡುತ್ತಾನೆ. ಇದರರ್ಥ ಈಗಾದರೂ ಯಾರಾದರೂ ವೇಳೆಯನ್ನು ಕೇಳಿ ಮಾತು ಪ್ರಾರಂಭಿಸಲಿ ಎಂದು. ಆದರೆ, ಯಾರೂ ಮಾತನಾಡುವುದಿಲ್ಲ. ಕೊನೆಗೆ ಆ ಲಠ್ಠ ಮನುಷ್ಯನೇ ಸುರುಮಾಡುತ್ತಾನೆ :

"ನೋಡಿರಿ ಸಭ್ಯಗೃಹಸ್ಥರೇ, ಈ ರೀತಿ ಸ್ಮಶಾನ ಮೌನದಲ್ಲಿ ನಾನೆಂದೂ ಪ್ರವಾಸ ಮಾಡಿಲ್ಲ. ಹೀಗೆ ಬಿಗಿಯಾಗಿ ಕೂಡುವುದೆಂದರೇನು. ಪ್ರವಾಸದಲ್ಲಿ ಮಾತಾಡಬೇಕು. ಹರಟೆ ಬೇಕು, ನಗೆ ಬೇಕು."

ಎಲ್ಲರೂ ಸ್ವಲ್ಪ ಲಕ್ಷ್ಯ ಕೊಡುತ್ತಾರೆ, ಸಾಕು; ಲಠ್ಠ ಮನುಷ್ಯನ ಬಾಣ ಗುರಿ ಗೆದ್ದಿತು. ಎಳೆ ಸಿಕ್ಕರೆ, ಹಚ್ಚಡವನ್ನೇ ನುಂಗುತ್ತಾನೆ ಮಹಾ ಮಾನವ.

"ನೋಡಿರಿ ಈಗ ೨ ತಿಂಗಳ ಹಿಂದೆ ಟೆಂಟರ್ ಡೆನ್ ಡ್ಯೂಕರ ಕೂಡ ಮತ್ತು Lord Mumble ಅವರ ಕೂಡ ಪ್ರವಾಸ ಮಾಡುವಾಗ ಹೀಗೇ ಆಯಿತು, (ಸಾಧಾರಣ ನಮ್ಮ friend ಜವಾಹರಲಾಲ ನೆಹರು ಅವರ ಕೂಡ, ದೋಸ್ತ ರಾಧಾಕೃಷ್ಣನ್ ಕೂಡ ಪ್ರವಾಸ ಮಾಡುವಾಗ ಎಂದ ಹಾಗೆ) ಯಾರೂ ನಮ್ಮನ್ನು ಗುರುತಿಸಲಿಲ್ಲ. ಕೊನೆಗೆ ಯಾವುದೋ ಪ್ರಮಾದದಿಂದ ಗುರುತು ಸಿಕ್ಕಿತು." ಬಿಟ್ಟ ಲಠ್ಠ ಮನುಷ್ಯ ತನ್ನ ಬಾಣಾ. Chance ಸಿಕ್ಕಿತ್ತು. Lord Mumble ತನ್ನ ದೋಸ್ತ. ತನ್ನ importance ಪ್ರಸ್ಥಾಪಿತವಾಗಲಿ ಎಂದು ಸೇರಿಸಿಯೇ ಬಿಟ್ಟ ಒಂದು ಕಥೆ.... ಆದರೆ ಈ ಕಥೆ ಯಾರ ಮೇಲೂ ಪರಿಣಾಮ ಮಾಡಲಿಲ್ಲ.

ಇದೇ ಚಾನ್ಸ ಎಂದು ತಿಳಿದ ಪ್ರವಾಸಿ ಹೆಣ್ಣುಮಗಳೊಬ್ಬಳು ತನ್ನ ಬಂಡಲ್ ಬಿಚ್ಚಿದಳು.

"ಹೌದು ಪ್ರವಾಸದಲ್ಲಿ ನಾವು ತೀರ ಸಾದಾ ಮನುಷ್ಯರ ಹಾಗೆ ಪ್ರವಾಸ ಮಾಡಬೇಕು. ನಮ್ಮ ಮನೆಯಲ್ಲಿ ಕಾಲಿಗೊಬ್ಬ ಕೈಗೊಬ್ಬ ಸಿಪಾಯಿ ಇದ್ದಾರೆ. ಆ ಅನುಕೂಲತೆ ಪ್ರವಾಸದಲ್ಲಿ ಬಾ ಎಂದರೆ ಹೇಗೆ?" ಏರಿತು ಆ ಅಪ್ಸರೆಯ ನೀಲೀ

ಬಲೂನ್ - ಆ ಲಠ್ಠ ಮನುಷ್ಯನ ಕೆಂಪು ಬಲೂನಿನ ಜೊತೆಗೆ.

ಈಗ ಮಹತ್ವ ಪ್ರತಿಷ್ಠಾಪನೆಯ ಪಂದ್ಯಾಟವೇ ಪ್ರಾರಂಭವಾಯಿತು. ಈ ಹೆಣ್ಣುಮಗಳು ಮಾತು ನಿಲ್ಲಿಸುವದೇ ತಡ-ಇನ್ನೊಬ್ಬ ಪ್ರವಾಸಿಕ ಪ್ರಾರಂಭಿಸಿದ. "ಏನು ಇಂದಿನ ಪೇಪರು! ಈ Shares ವಿಷಯ ಹೇಳಲೇ ಬರುವದಿಲ್ಲ, ಮೊನ್ನೆ ೧೦೦ ಇದ್ದದ್ದು ೧೨೦ ಆದವು. ನಾನು ಲಂಡನ್ ಮುಟ್ಟಿದ ಕ್ಷಣ ೩೦,೦೦೦ ಪೌಂಡ್ ಷೇರ್ (ಅಂದರೆ ಭಾರತದ ೪,೫೦,೦೦೦ ರೂ. ಅಬ್ಬ ಏನು ಶ್ರೀಮಂತ ಈ ಮರಿ!) ಕೊಳ್ಳಬೇಕು....." ಎಂದ. ಏರಿತು ಇವನ ಹಳದಿ ಬಲೂನ್ ಆಕಾಶದಲ್ಲಿ.

ಮತ್ತೊಬ್ಬ ಬಿಟ್ಟಾನೇ, ಅವನೂ ಪ್ರಾರಂಭಿಸಿದ "ಹೌದು ನೋಡಿರಿ. ಈ ಸ್ಟಾಕ್ ವಿಷಯ ಹೇಳಲೇ ಬರುವದಿಲ್ಲ. ಅಂತಲೇ ನನ್ನ ಮಿತ್ರ Chief Justice ಇವರು, ನನ್ನ ಮಿತ್ರ Justice ಇವರು.... ನನಗೆ ಹೇಳಿಬಿಟ್ಟಿದ್ದಾರೆ. ಹಣ ತೊಡಗಿಸಬೇಕಾದರೆ ಭೂಮಿಯನ್ನೇ ಕೊಳ್ಳಬೇಕೆಂದು. ಈ ಸಲ ನಾನು ಊರು ಮುಟ್ಟಿದ ಕೂಡಲೇ ದೊಡ್ಡ ಆಸ್ತಿ ಖರೀದಿ ಮಾಡಿಬಿಡುತ್ತೇನೆ"- ಎಂದು. ಲಠ್ಠ ಮನುಷ್ಯನ ಕೆಂಪು ಬಲೂನ್ ಹೆಣ್ಣು ಮಗಳ ನೀಲೀ ಬಲೂನ್, ಪೇಪರ ಮನುಷ್ಯನ ಹಳದೀ ಬಲೂನ್ ಜೊತೆಗೆ ಇವನ ಹಸಿರು ಬಲೂನ್! ಏನು ದೊಡ್ಡ ಜನ ಇವರು. Duke of Tenterden ಮತ್ತು Lord Mumbleನ Friend ಒಬ್ಬನಾಗಿದ್ದರೆ, ಇನ್ನೊಬ್ಬಳಿಗೆ ಕೈಗೊಬ್ಬ ಕಾಲಿಗೊಬ್ಬ ಸಿಪಾಯಿ, ಮತ್ತೊಬ್ಬ ಷೇರ್ ಮಾರ್ಕೆಟ್ಟಿನ ಕೋಟ್ಯಾಧೀಶ. ಇನ್ನೊಬ್ಬ ಭೂಮಿ ಕೊಳ್ಳುವ ನ್ಯಾಯಾಧೀಶರ Friend!

ದೊಡ್ಡಸ್ತಿಕೆಯ ಕುತುಬಮೀನಾರದ ಎತ್ತರದಲ್ಲಿಯೇ ಇದ್ದಾರೆ ಈ ಮಹಾಂತರು. ಕೊನೆಗಂತೂ ಪ್ರವಾಸ ಮುಗಿಯುತ್ತದೆ. ಒಬ್ಬರನ್ನೊಬ್ಬರು ಅಗಲ ಬೇಕಾಗುತ್ತದೆ. ಆವಾಗ ಕಂಡದ್ದೇನು? ಸುವರ್ಣ ಪುತ್ಥಳಿಗಳ ಮಣ್ಣಿನ ಕಾಲು.

Duke ಮತ್ತು Lord ರ friend ಬರೀ ಒಬ್ಬ ಬಟ್ಲರ್! ಕೈಗೊಬ್ಬ ಕಾಲಿಗೊಬ್ಬ ಸಿಪಾಯಿ ಇದ್ದ ಹೆಣ್ಣು ಮಗಳು ಹಾಟೆಲ್ ಇಟ್ಟ ಹೆಣ್ಣು ಮಗಳು! Stocks ಮನುಷ್ಯ ಒಬ್ಬ ಬಡ ದಲ್ಲಾಳಿ ಕಾರಕೂನ! ಜಡ್ಜುಗಳ friend ಹಣಕ್ಕಾಗಿ ದುಡಿಯುವ ಬಡಪಾಯಿ ವೃತ್ತಿಗಾರ! ಆದರೆ ಅವರು ಕಟ್ಟಿದ ವೇಷ ಎಂತಹದು! ಹಾಕಿದ ಕಿರೀಟ, ಸಿರಪೇಚು ಎಂಥವು! ಪ್ರವಾಸದ ೪-೮ ತಾಸಾದರೂ ತಮ್ಮ ಕಲ್ಪನಾಸಾಮ್ರಾಜ್ಯದ ಚಕ್ರವರ್ತಿಗಳಾಗಿದ್ದರು ಈ ಜನ. ಇವರನ್ನು ಕಂಡರೆ ನಿಮಗೆ ನಗು ಬರುತ್ತದೆಯೇ? ಆದರೆ, ನಗುವುದು ಯುಕ್ತವಲ್ಲ, ನಾನು ಕೂಡ ಜಾನ್ಸನ್ ಅಂದಹಾಗೇ ಹೇಳುತ್ತೇನೆ:

ನಗಬೇಡಿ, ವಾಚಕ ಮಹಾಶಯ ನಗಬೇಡಿ. ನಮ್ಮ ದೋಸ್ತ ಲಠ್ಠ ಮನುಷ್ಯ, ಆ ಹಾಟೆಲ್ ಹೆಣ್ಣುಮಗಳು, ಆ ಕಾರಕೂನ, ಆ ವೃತ್ತಿಗಾರನನ್ನು ಕಂಡು ದಯವಿಟ್ಟು ನಗಬೇಡಿ. ನಗಬೇಡಿ, ದಯವಿಟ್ಟು ನಗಬೇಡಿ. ಪ್ರವಾಸದ ಉದ್ದಕ್ಕೂ ಎಲ್ಲರೂ ತಮ್ಮದೇ ಆದ ಮಂದಿರವನ್ನು ಕಲ್ಪಿಸಿ ಅಲ್ಲಿ ರಾಜಾ-ರಾಣಿ ಆಗಿದ್ದರು. ಯಾಕೆ ನಗಬೇಕು ಅವರನ್ನು ಕಂಡು? ಪ್ರವಾಸಕ್ಕೆ ಅನ್ವಯಿಸುವ ಈ ಮಾತೇ ನಮ್ಮ ಜೀವನ - ಪ್ರವಾಸಕ್ಕೂ ಅನ್ವಯಿಸುತ್ತದೆ." ಜೀವನ ಎನ್ನುವ ಮಾರ್ಗದಲ್ಲಿ, ವಿಶ್ವ ಎನ್ನುವ ರೈಲಿನಲ್ಲಿ ಕುಳಿತು, ನಾವೆಲ್ಲರೂ ಪ್ರವಾಸ ಹೊರಟಿದ್ದೇವೆ. ನಮನಮಗೆ ಸರಿಕಂಡ ಇಷ್ಟವಿದ್ದ ವೇಷವನ್ನು ಆಯುಷ್ಯದಲ್ಲಿ ಹಾಕುತ್ತೇವೆ. ಪ್ರವಾಸದುದ್ದಕ್ಕೂ ಆ ಆ ಆಕಾರಕ್ಕೆ ತಕ್ಕ ಹಾಗೆ ಹರಟುತ್ತಲೇ ಇರುತ್ತೇವೆ. ನಮ್ಮ ಕೈಯಲ್ಲಿದ್ದ ಟೊಪ್ಪಿಗೆಯನ್ನು ಮತ್ತೊಬ್ಬರ ತಲೆಯ ಮೇಲೆ ಹಾಕಲೂ ಪ್ರಯತ್ನಿಸುತ್ತಲೇ ಇರುತ್ತೇವೆ. ಆದರೆ ಅವನ ಕೈಯಲ್ಲಿಯೂ ನಮಗಾಗಿ ಒಂದು ಟೊಪ್ಪಿಗೆಯಿದೆಯೆಂಬುದನ್ನು ಕಂಡುಕೊಂಡೂ ನಮ್ಮ ವ್ಯಾಪಾರ ನಡೆಸಿರುತ್ತೇವೆ. ಅವನನ್ನು ಮೋಸಗೊಳಿಸುವ ಭರದಲ್ಲಿ ಅವನು ನಮ್ಮನ್ನು ಮೋಸ ಗೊಳಿಸಲು ಆರ್ಧಹಾದಿ ಬಂದೇಬಿಟ್ಟಿದ್ದಾನೆ ಎಂಬುದನ್ನು ಗಮನಕ್ಕೆ ತಾರದಾಗಿದ್ದೇವೆ. ಹೀಗೆ ನಡೆದಿದೆ ಆಯುಷ್ಯದ ಈ ರೈಲಿನ ಪ್ರವಾಸ. ಇಳಿಯುವ ಸ್ಥಾನ ಬಂದಕೂಡಲೆ ಆಯಿತು; ನಮ್ಮ ನಮ್ಮ ಗಂಟು ಕಟ್ಟಿಕೊಂಡು ಕೆಳಗಿಳಿಯಬೇಕು. ಕಟ್ಟಿದ್ದ ವೇಷ, ಧರಿಸಿದ್ದ ಬಣ್ಣ, ಹಾಕಿಕೊಂಡಿದ್ದ ಭುಜ ಕೀರ್ತಿ, ಕಿರೀಟ, ಎಲ್ಲವನ್ನೂ ತೆಗೆಯಲೇಬೇಕು. ಪ್ರವಾಸದಲ್ಲಿ ಧರಿಸಿದ್ದ ಬಣ್ಣ ಅಳಿಸಿಕೊಂಡಾಗ, ನಾವು ಕಾಣುವುದು ಹೇಗೆ? ನಾವು ಇದ್ದ ಹಾಗೆ. ನಿಜಲಿಂಗ. ಭವಭಂಗ....

ಈ ಸುಖ, ಈ ಆನಂದ, ಈ ಸಮಾಜಜೀವನದ ಈ ಅನುಭವ, ಈ ಕಾವ್ಯ, ಈ ಲೋಕಾನುಬೋಧೆ ರೈಲಿನಲ್ಲಲ್ಲದೆ ನಿಮಗೆಲ್ಲಿ ಸಿಗಬೇಕು? ಆಯುಷ್ಯದಲ್ಲಿ ಸುಳ್ಳು ಬಣ್ಣವನ್ನು ಹಚ್ಚಿಕೊಳ್ಳಬಾರದೆಂದು ಇದ್ದವರಾದರೂ ಅವಶ್ಯ ರೈಲು ಪ್ರವಾಸ ಕೈಕೊಳ್ಳಿ, ರೈಲು ನಿಮಗೆ ಪಾಠ ಕಲಿಸುತ್ತದೆ.

---

# ನಾನು ಭಾಷಣಕ್ಕೆ ಹೋಗಿದ್ದೆ

*"ಪರಿಹಾಸ ವಿಜಲ್ಪಿತಂ ಸಖೇ -*
*ಪರಮಾರ್ಥೇನ ನ ಗೃಹ್ಯತಾಂ ವಚಃ"*

ನಾನು ಭಾಷಣಕ್ಕೆ ಹೋಗಿದ್ದೆ. ಹೌದು : ನಾನಲ್ಲದೆ ಬೇರೆ ಯಾರು ಹೋಗಬೇಕು? ನಾಡಹಬ್ಬ, ಉದ್ಘಾಟನೆ, ಶಾಲೆ-ಕಾಲೇಜುಗಳ ಪ್ರಾರಂಭ, ಮುಕ್ತಾಯ, ಉದಯ, ಅಸ್ತ, ಸ್ನೇಹಸಮ್ಮೇಲನ - ಯಾವ ಸಂದರ್ಭ ಬಂದರೂ ನಾನು ಸದಾ ಸಿದ್ಧ ever-ready-battery ಇದ್ದ ಹಾಗೆ. ಅಷ್ಟೇ ಅಲ್ಲ; ಉಳಿದವರ ಹಾಗೆ "ಛೆ, ಛೆ, ಆಗುವದಿಲ್ಲ, ಈ ತಿಂಗಳು ಇಲ್ಲ, ಮುಂದಿನ ತಿಂಗಳು Conferenceಉ. ಆದರ ಮುಂದಿನ ತಿಂಗಳು subcommittee ಮೀಟಿಂಗು. ಮುಂದಿನ ವರ್ಷ ನೋಡೋಣ." ಎಂದು ಆಮಂತ್ರಕರನ್ನು ಕ್ಯಾಲೆಂಡರಿಂದ ಕ್ಯಾಲೆಂಡರಕ್ಕೆ ಓಡಿಸುವ ಮಹಾರಥನು ನಾನಲ್ಲ, ಕಾಸಿನ ಕೆಲಸವಿದ್ದರೂ ರಾಶಿರಾಶಿಯಾಗಿ ಕಾಣುವ ಹಾಗೆ ಮುಖ ಮಾಡುವ ಕೆಲವು ಮಹನೀಯರೂ

ಇರುವದುಂಟು. ಟನ್ನಗಟ್ಟಲೆ ಕೆಲಸವಿದ್ದರೂ, ದುರ್ದೈವದಿಂದ ಒಂದು ಗೆರೆ ಸಹಿತ ನನ್ನ ಮುಖದಮೇಲೆ ಮೂಡದಂಥ ಮುಖವನ್ನು ನನಗೆ ದಯಪಾಲಿಸಿದ್ದಾನೆ, ಆ ಪುಣ್ಯಾತ್ಮ ಪರಮಾತ್ಮ. ನನ್ನ ದೇಹ ದಾರ್ಢ್ಯವೂ ಅಷ್ಟೇ. 'ಇಂದು ಕೆಮ್ಮಿದೆ; ನಾಳೆ ನೆಗಡಿ ಬರಬಹುದು; ಅದು ನ್ಯೆಮೋನಿಯಾದ ಹಾದಿ' ಎಂದು ಆಮಂತ್ರಕರನ್ನು ಹೆದರಿಸುವ ದೇಹ ನನ್ನದಲ್ಲ. 'blood-pressure', 'diabetes' ಮೊದಲಾದ ಶ್ರೀಮಂತ ಬೇನೆಗಳನ್ನು ಹೇಳಿ, ನನ್ನನ್ನು ಆಮಂತ್ರಿಸುವದೆಂದರೆ ಸಂತೆಪೇಟೆಯಲ್ಲಿ ಕಾಜಿನ ಪಾತ್ರೆಯನ್ನು ಹೊತ್ತುಕೊಂಡು ಓಡಿದಷ್ಟು ಜವಾಬ್ದಾರಿಯ ಕೆಲಸವೆಂದು ಹೆದರಿಸಲೂ ನನಗೆ ಸಾಧ್ಯವಿಲ್ಲ. ಹೀಗಾಗಿ, ಯಾವ ಆಮಂತ್ರಕರ ಜಾಳಿಗೆಗೂ ಮೊದಲಿಗೇ ಸಿಗುವ ಮೀನೆಂದರೆ ನಾನು.

ಇಷ್ಟು ಕಾರ್ಪಣ್ಯವಾದರೂ ಏಕೆ? ನನ್ನ ಹಾಗೆ ಮಾತಾಡುವವರಾದರೂ ಯಾರಿದ್ದಾರೆ? "ವಾಣ್ಯೇಕಾ ಸಮಲಂಕರೋತಿ ಪುರುಷಂ ಯಾ ಸಂಸ್ಕೃತಾ ಧಾರ್ಯತೇ" ಎಂದು ಆ ಸಂಸ್ಕೃತ ಸುಭಾಷಿತಕಾರನು ಹೇಳಿದ್ದು ನನ್ನನ್ನು ಉದ್ದೇಶಿಸಿಯೇ ಇರಬೇಕು. ಆವನು ನಿಜವಾಗಿಯೂ ತ್ರಿಕಾಲ ಜ್ಞಾನಿ. ನನ್ನ ಅವತಾರ ವಾಗುತ್ತದೆಂದೇ ಆ ಸುಭಾಷಿತದ ಕುಂಚಿಕೆಯನ್ನು ನನಗಾಗಿ ಹೊಲಿಸಿಟ್ಟಿದ್ದಾನೆ. ಹೀಗಾಗಿ ನನಗೆ ಬರುವ ಪತ್ರಗಳಲ್ಲಿ appointments, promotionದಕಿಂತ, ಎಲ್ಲಿಯಾದರೂ ನಾಲ್ಕು ದುಡ್ಡು ಸಿಗುವ ಲಾಭಪ್ರಸಂಗಗಳಿಗಿಂತ, ನೂರಕ್ಕೆ ಸುಮಾರು ೯೫ರಷ್ಟು ಪತ್ರಗಳು ಭಾಷಣಕ್ಕೆ ಕರೆದ ಆಮಂತ್ರಣಪತ್ರಗಳೇ ಇರುತ್ತವೆ. ನಮ್ಮ ಮನೆಗೆ ಸಾಮಾನ್ಯವಾಗಿ ಬರುವದು ಎರಡೇ ವರ್ಗದ ಜನ. ಒಂದು ಭಾಷಣಕ್ಕಾಗಿ ಆಮಂತ್ರಿಸುವವರದು; ಇನ್ನೊಂದು, ನಾನು ಎಂದೂ ಭಿಕ್ಷೆ ಹಾಕಿರದಿದ್ದರೂ ನಮ್ಮ ಮನೆಯನ್ನೇ ಬಿಡದೆ ಮುತ್ತುವ ಪಾಂಡವ ಸಂತಾನದವರದು; ನಾನೇ ಅನೇಕ ಸಲ ವಿಚಾರ ಮಾಡಿದ್ದೇನೆ : ಭಾಷಣ ಮಾಡುವವರ ಈ ಪೇಟೆಯಲ್ಲಿ ನನ್ನ ಸರಕಿಗೆ ಇಷ್ಟೊಂದು ಬೇಡಿಕೆ ಇರುವದು ಏಕೆ ಎಂದು. ದೇವರು ಒಂದೊಂದು ಸಲ ಈ ಆತ್ಮಜ್ಞಾನವನ್ನೂ ನನಗೆ ದಯಪಾಲಿಸುತ್ತಾನೆ. ಜನ ನನ್ನನ್ನೇ ಇಷ್ಟು ಆದರದಿಂದ ಪ್ರೀತಿಯಿಂದ, ಅಭಿಮಾನದಿಂದ, ಗೌರವದಿಂದ, ವಿನಮ್ರತೆಯಿಂದ – (ಇವೆಲ್ಲ ಆಮಂತ್ರಕರು ಬರೆದ ಪತ್ರಗಳಿಂದಲೇ ಆಯ್ದುಕೊಂಡ ಭಾವನೆಗಳೆಂಬುದನ್ನು ತಾವು ಲಕ್ಷ್ಯದಲ್ಲಿಡಬೇಕು.)– ಭಾಷಣಕ್ಕೆ ಆಮಂತ್ರಿಸುವುದೇಕೆ? ನನಗೆ ಕಾರಣವೂ ಗೊತ್ತಾಗಿದೆ, ಯಾಕೆ ನನ್ನನ್ನೇ ಆಮಂತ್ರಿಸುತ್ತಾರೆಂದು. ಮಾವಿನ ಹಣ್ಣುಗಳಲ್ಲಿ ಹತ್ತಾರು ಬಗೆಗಳಿದ್ದ ಹಾಗೆ ಭಾಷಣಕಾರರಲ್ಲಿಯೂ ಹತ್ತಾರು ಬಗೆಗಳಿವೆ. ಕೆಲವರು ಜವಾರಿ

ಹಣ್ಣಿನಂತೆ ಕರಣಿ ಕರಣಿ ರಸವನ್ನು ಕೊಡದೆ ಜುಬ್ಬರದಲ್ಲಿಯೇ ಜನರ ಹಲ್ಲನ್ನು ಸಿಕ್ಕಿಸುತ್ತಿರುವವರು. ಇವರ ಕಥೆ-ಉಪಕಥೆಗಳ ಶಾಖೋಪಶಾಖೆಗಳನ್ನೆಲ್ಲಾ ಬಳಸಾಡಿ ಬಂದರೂ ಹೂ- ಹಣ್ಣು-ಕಾಯಿಗಳಾವುವೆಂಬುದನ್ನು ತೋರಿಸದ ಟಿಸಿಲು-ಬುದ್ಧಿಯವರು. ಇನ್ನು ಕೆಲವರು ತೋತಾಪುರಿ ಜಾತಿಯವರು, 'tasteless, odourless, colourless' ವರ್ಗದವರು. ಬಾಯಿ ತೆಗೆದರೆ ಆಯಿತು ರಗಳೆಯ ಪುರಾಣ. ನಿದ್ದೆಗೆ ಆಹ್ವಾನ. ಇವರು ಕೇವಲ 'fill in the gaps'. ಅಂದರೆ ಎಷ್ಟು ಹೊತ್ತು ಮಾತಾಡಬೇಕು ಎಂದು ಪ್ರಶ್ನೆ ಕೇಳಿ ಅಷ್ಟು ವೇಳೆ, ಒಂದು ಓಟವನ್ನೂ ತೆಗೆಯದೆ ಬರಿ ಬ್ಯಾಟ್ ಹಿಡಿದುಕೊಂಡು ನಿಲ್ಲುವ ಜನ ಇದು. ಇನ್ನು ಕೆಲವರು 'ಅಪೂಸ್' ವರ್ಗದ 'aristocratic' ಜಾತಿಗೆ ಸೇರಿದವರು. ಈ ಹಣ್ಣಿಗೆ ಸಿಹಿಯ ಜೊತೆಗೆ ಸುವಾಸನೆಯೂ ಉಂಟು. ಆದರೆ ಸಾಮಾನ್ಯವಾಗಿ ಈ ಹಣ್ಣುಗಳು ತುಟ್ಟಿಯಾಗಿರುವುದರಿಂದ ಹೊಟ್ಟೆತುಂಬ ಇವನ್ನು ತಿನ್ನಲಿಕ್ಕೆ ಆಗುವುದಿಲ್ಲ. ಹಾಗೆಂದೇ ಇಂಥ ಭಾಷಣಕಾರರು ಎಲ್ಲ ಕಾಲದಲ್ಲಿಯೂ ಸಿಗುವ ಸರಕುಗಳಲ್ಲ. ಮನೆಯಲ್ಲಿಯ ದೊಡ್ಡ ದೇವರ ಹಾಗೆ ವರುಷಕ್ಕೋ ಎರಡು ವರುಕ್ಕೋ ಹೊರಗಿನ ಬೆಳಕಿಗೆ ಬರುವವರು. ಅಂದರೆ ಇವರನ್ನು ಆಮಂತ್ರಿಸುವುದು ಕೇವಲ ದೊಡ್ಡ ದೊಡ್ಡ 'gathering' ಇಲ್ಲವೆ ಉದ್ಘಾಟನೆಗಳಿಗಾಗಿ. ಯಾಕೆ? ಇವರು ಯಾರೆಂದು ನಿಮಗೆ ತಿಳಿಯಿತಲ್ಲವೆ? ಈ ಭಾಷಣಕಾರರೆಂದರೆ ಯಾವಾಗಲೂ ಕೋಟ್-ಪ್ಯಾಂಟ್-ಟೈ ಧರಿಸಿ, ತಮ್ಮ ಭಾಷಣವನ್ನು ೨೦ ಅಂಶ ಕಾಗದದಲ್ಲಿ ನೀಟ ಆಗಿ ಟೈಪು ಮಾಡಿಕೊಂಡು, ನಡುವೆ ಒಂದೆರಡು ಗ್ಲಾಸು ನೀರು ಅಥವಾ ಕಲ್ಲುಸಕ್ಕರೆ ಹಾಲು ಕುಡಿದು, ಸರಿಯಾಗಿ ೧೮೦೦ ಸೆಕೆಂಡು ಮಾತ್ರ ಮಾತಾಡುವವರು. ಇಂಥವರು ಎಷ್ಟೋ ಸಲ ತಮ್ಮ ಬಗ್ಗೆ ಏನು ಹೇಳಬೇಕೆಂಬುದನ್ನು ಸಹ ಪರಿಚಯ ಮಾಡಿಕೊಡುವವರಿಗೆ ಟೈಪು ಹೊಡಿಸಿ ಕೊಟ್ಟಿರುತ್ತಾರೆ. ಒಂದು ರೀತಿಯಿಂದ ಇದು ಒಳ್ಳೆಯದೆ. ಯಾಕಂದರೆ ಪರಿಚಯ ಕಾರರು ಒಮ್ಮೊಮ್ಮೆ ಹೆಸರು ಹಿಂದೆ ಮುಂದೆ ಮಾಡಿ, ಡಿಗ್ರಿ ಮೇಲೆ ಕೆಳಗೆ ಮಾಡಿ, ಹುಟ್ಟಿದೂರು ಬದಲಿಸಿ, ಕಲಿತ ಕಾಲೇಜು ತಪ್ಪು ಹೇಳಿ, ಅಧ್ವಾನ ಮಾಡುವುದನ್ನು ನೋಡಿದಾಗ ನಮ್ಮ ಬಗ್ಗೆ ನಾವೇ ಬರೆದು ಕೊಡುವುದು ಏನೂ ತಪ್ಪು ಎನಿಸಲಾರದು. ಇನ್ನು ಕೆಲವರು ನಮ್ಮ ಧಾರವಾಡದ ಕಲಮಿ ಇದ್ದಹಾಗೆ. ಬಹಳ ಸಿಹಿ, ರುಚಿ; ಅಷ್ಟು ತುಟ್ಟಿಯೂ ಅಲ್ಲ. ಹೆಚ್ಚು ಕಡಿಮೆ ಹೊಟ್ಟೆತುಂಬುವಷ್ಟು ಸಮಾಧಾನವನ್ನು ಕೊಡುತ್ತಾರೆ. ಈ ಹಣ್ಣಿನ ವರ್ಗೀಕರಣದಲ್ಲಿ ನಾನು ಯಾವ ವರ್ಗಕ್ಕೆ ಸೇರುತ್ತೇನೋ ನನಗೆ ಗೊತ್ತಿಲ್ಲ. ಆದರೆ ನನ್ನ ಸರಕಿಗೆ ಇಷ್ಟು ಮಾರಾಟ ಇರುವುದು ಬಹುಶಃ ಒಂದು ಕಾರಣಕ್ಕಾಗಿ

ಎಂದು ಕಾಣಿಸುತ್ತದೆ. ಆದೆಂದರೆ, ನಾನು ನೂರಕ್ಕೆ ನೂರರಷ್ಟು ಅಹಿಂಸಾವಾದಿ. ''ಜೀವದಯೆ, ಜೈನಧರ್ಮ'' ಎಂಬುದನ್ನು ಸಂಪೂರ್ಣವಾಗಿ ನಂಬಿದವ. ''ಹಿಂಸೆಯಿಂದಮಪ್ಪುದು ಆಸ್ರವಮ್'' ಈ ಆಸ್ರವಕ್ಕೆ ನನ್ನಲ್ಲಿ ಆಸ್ಪದವೇ ಇಲ್ಲ. ದೇಹದಿಂದ ಹಿಂಸೆಯನ್ನು ಮಾಡುವುದಂತೂ ದೂರವಿರಲಿ, ಮಾತಿನಿಂದ, ಮನಸ್ಸಿನಿಂದ ಕೂಡ ನಾನು ಹಿಂಸೆ ಮಾಡಿ ಕೊತ್ತಿಲ್ಲ. ಹೀಗಾಗಿ, ಜನ ಕರೆಯುವುದೊಂದೇ ತಡ, ನಾನು ''ಹೂಂ'' ಎಂದಿದ್ದೇನೆ. ಪಾಪ ಯಾಕೆ ಅವರ ಮನಸ್ಸನ್ನು ನೋಯಿಸುವುದು? ಅಷ್ಟೇ ಅಲ್ಲ ಎಷ್ಟೋ ಸಲ ಇವರ ಮುಖದ ಭಾವದ ಮೇಲಿಂದಲೇ ಅವರು ನನ್ನನ್ನು ಭಾಷಣಕ್ಕೆ ಕರೆಯಲು ಬಂದಿರಲೇಬೇಕೆಂದು ಊಹಿಸಿ,- ಎಷ್ಟೋ ಸಲ ಬೇರೆ ಭಾಷಣಕಾರರ ವಿಷಯವಾಗಿ ಮಾಹಿತಿಯನ್ನು ಕೇಳಲು ಬಂದಾಗ್ಯೂ ಸಹ - ನನ್ನ ಕತ್ತನ್ನು ನೇಣಿಗೆ ನುಗ್ಗಿಸಿದ್ದೇನೆ. ಬರಿ 'ಹೂಂ' ಅನ್ನುವದಷ್ಟೇ ಅಲ್ಲ, ಊರಲ್ಲಿಯ ಸಭೆಗಳಿದ್ದರಂತೂ ಪಾಪ ಆಮಂತ್ರಕರ ಮೇಲೆ-ಟ್ಯಾಕ್ಸಿ ನನ್ನ ಬೇಡಿಕೆ ಯಾವಾಗಲೂ ತೀರ ಕೆಳದರ್ಜೆಯ ರೈಲಿನ ಪ್ರವಾಸ ಎಂದು ಮಾತ್ರ ಹೇಳಿದ್ದೇನೆ. ಇಂಥ ಸಂದರ್ಭದಲ್ಲಿ ಮುಂಗಡ ಕೇಳಿಯಂತೂ ನನಗೆ ಎಂದೂ ಗೊತ್ತಿಲ್ಲ. ಅಷ್ಟೇ ಅಲ್ಲ ಅವರೂರಿಗೆ ಭಾಷಣಕ್ಕೆ ಹೋದಾಗ, ಅವರ ಮಗು ಅಳುವ ರೀತಿಯನ್ನು ನೋಡಿಯೋ, ಅಥವಾ ಅವರ ಮನೆಯ ವ್ಯವಸ್ಥೆಯನ್ನು ನೋಡಿಯೋ, ಅಥವಾ ಅವರ ಮನೆಯ ಸೌಭಾಗ್ಯವತಿಯರ ಮುಖದ ಸ್ನಾಯುಗಳ ಉಗ್ರ-ಅಲ್ಲಲ್ಲ, ಉದ್ದ ಅಗಲಗಳನ್ನು ನೋಡಿಯೋ-''ಇಲ್ಲ ಇಂದು ಶನಿವಾರ ನಾನು ಊಟ ಮಾಡುವುದಿಲ್ಲ. ಗುರುವಾರ ಬರಿಯ ನೀರು ಕುಡಿದರೆ ಬಹಳ ಒಳಿತಾಗಿರುತ್ತದೆ. ಸೋಮವಾರ ಈಶ್ವರನ ವಾರ; ಬರೀ ವಾಯುಸೇವನೆಯಿಂದ ಇರಬೇಕು.'' ಎಂದು ಆ ಆ ದಿನಕ್ಕೆ ತಕ್ಕಂತೆ ಕಾರಣ ಹೇಳಿ, ಪಾಪ ಅವರ - ಅದಕ್ಕೂ ಹೆಚ್ಚು - ಅವರ ಮನೆಯವರ ತೊಂದರೆಯನ್ನು ಉಳಿಸಿದ್ದೇನೆ. ನನ್ನ ಭಾಷಣಗಳಲ್ಲಿಯೂ ಅಷ್ಟೇ - ನಾನು ಸಂಪೂರ್ಣ ಅಹಿಂಸಾವಾದಿ. ತಮ್ಮ ಕೈಕಾಲುಗಳ ಜಿಗುಟುತನವನ್ನು ಪ್ರದರ್ಶಿಸಲಿಕ್ಕೂ, ತಮ್ಮ ಗಂಟಲಿನ ಸಾಮರ್ಥ್ಯವನ್ನು ತೋರಿಸುವುದಕ್ಕೂ ತಾಸುಗಟ್ಟಳೆ ಭಾಷಣ ಮಾಡುವ ಮಹನೀಯರು ಇರುವುದುಂಟು. ನಾನು ಸುತರಾಂ ಆ ವರ್ಗಕ್ಕೆ ಸೇರಿದವನಲ್ಲ. ನಾನು ಎರಡು ತಾಸು ಕಳೆಯಲು ಸಾಧ್ಯವಿದ್ದರೆ ಪಾಪ ಉಳಿದವರೂ ನನ್ನ ಭಾಷಣವನ್ನು ಕೇಳುತ್ತ ಎರಡು ತಾಸು ಕಳೆಯಬೇಕೆಂಬ ಹಟವೇಕೆ ನನಗೆ? ಅಥವಾ ನನ್ನ ಸಣ್ಣ ಮೆದುಳಿನಲ್ಲಿರುವ ಸರಕನ್ನೆಲ್ಲ ಅದೇ ಊರಲ್ಲಿ ಅದೊಂದೇ ಸಭೆಯಲ್ಲಿಯೇ ಬರಿದು ಮಾಡಬೇಕೆಂಬ ಚಾಪಲ್ಯವಾದರೂ ಏಕೆ ನನಗೆ? ಪಾಪ

ಒಂದೇ ಸ್ಥಳದಲ್ಲಿಯೇ ಕುಳಿತು ಆಗುತ್ತಿರುವ ದೇಹ ಮತ್ತು ಮನಸ್ಸಿನ ಹಿಂಸೆ ಇಷ್ಟೇಕೆ ನನ್ನಿಂದ ಅವರಿಗಾಗಬೇಕು? ಅಂತಲೇ ೪೫ ನಿಮಿಷಗಳಕಿಂತ ಅಪ್ಪಿತಪ್ಪಿ ನಾನು ಹೆಚ್ಚಿಗೆ ಮಾತಾಡಲು ಹೋಗಿಲ್ಲ. ನನ್ನ ಗಂಟಲೂ ಅಷ್ಟಕ್ಕೇ ಹೊಂದಿಕೊಂಡ ಹಾಗೆ ಕಾಣುತ್ತದೆ. ೪೫ ನಿಮಿಷ ಮುಗಿಯುತ್ತಲೇ ಗಂಟಲದೊಳಗೆ ಕುಳಿತ ಯಾವ ಯಜಮಾನನೋ ಏನೋ ನಾನು ತೆರೆದ ಅಂಗಡಿಯನ್ನು 'automatic' ಮುಚ್ಚಲು ನನಗೆ ಅಜ್ಞಾಪಿಸುವಂತೆ ನನಗನಿಸುತ್ತದೆ. ನನ್ನ ಗಂಟಲಿಗೆ ಬ್ರೇಕ್ ಬಿದ್ದಂತಾಗುತ್ತದೆ. ಹೀಗಾಗಿ, ಯಾರಿಗಾದರೂ ನನ್ನ ಭಾಷಣದ ದಬ್ಬಾಳಿಕೆ ಏನಾದರೂ ಆಗುವದಿದ್ದರೆ ಅದು ಕೇವಲ ೪೫ ನಿಮಿಷಗಳವರೆಗೆ ಮಾತ್ರ. ಅನಂತರ ಸ್ವಾತಂತ್ರ್ಯವಿದೆ ಎಂಬ ಅಭಯದ ಪ್ರತೀತಿ ಈಗಾಗಲೇ ನನ್ನದು ಸಾಕಷ್ಟಾಗಿದೆ. ಆದರೆ ಅದಕ್ಕೂ ಹೆಚ್ಚು ಮಾನಸಿಕವಾಗಿಯಾದರೂ ಬೌದ್ಧಿಕವಾಗಿಯಾದರೂ ನಾನು ಯಾರ ಹಿಂಸೆಯನ್ನೂ ಮಾಡಿದವನಲ್ಲ. ಜಗತ್ತಿನಲ್ಲಿ ಹುಟ್ಟಿದ ಪ್ರತಿಯೊಂದು ಎರಡು ಕೈ, ಎರಡು ಕಾಲಿನ ಪ್ರಾಣಿ, ತಾನು ತುಂಬಾ ಬುದ್ಧಿವಂತನೆಂದೇ ನಂಬಿರುತ್ತದೆ. ಅವರ ಅಪ್ಪ ಅಮ್ಮ ಅಜ್ಜ ಎಲ್ಲರೂ ಎಳೆತನ ದಿಂದಲೂ ಈ ಭಾವನೆಯನ್ನು ಅವನ ತಲೆಯಲ್ಲಿ ತುಂಬಿಯೇ ತುಂಬಿರುತ್ತಾರೆ. ಅಂದಮೇಲೆ ಕೋಲೆಗಡಕನ ಹಾಗೆ ವೇದಿಕೆಯ ಮೇಲೆ ನಿಂತ ನಾನು "ಬನ್ನಿ ನೀವೆಲ್ಲರೂ ದಡ್ಡರಿದ್ದೀರಿ. ನಾನೊಬ್ಬನೇ ಜಾಣ. ನನಗೇ ಇಷ್ಟೆಲ್ಲ ಗೊತ್ತಿದೆ. ನಿಮಗೇನು ಗೊತ್ತಿದೆ. ನಿಮಗೇನು ಗೊತ್ತಿದೆ?" ಎಂದು ದಿಕ್ಕುದಿಕ್ಕಿಗೂ ಆಹ್ವಾನವನ್ನು ತೂರುತ್ತ ನನ್ನ ರಾಕ್ಷಸ ವೀಕ್ಷಣವನ್ನು ಏಕೆ ಪಸರಿಸಬೇಕು? ಹೌದು, ಅಂತಲೇ ನಾನು ಯಾವ ಭಾಷಣ ದಲ್ಲಿಯೂ ಜನರಿಗೆ ತಮಗೆ ತಿಳಿದಿದ್ದರಕಿಂತ ಅಥವಾ ಗೊತ್ತಿದ್ದರಕಿಂತ ಒಂದು ಗುಂಜಿ ತೂಕ ಸಹ ಹೆಚ್ಚಿಗೆ ಹೇಳಿಲ್ಲ; ಅವರ ಪಾಂಡಿತ್ಯದ ಭ್ರಮನಿರಸನವನ್ನು ಮಾಡಿಲ್ಲ. ಎಂದು ತಿಳಿದೇ ಭಾಷಣ ಮುಗಿದ ಕೂಡಲೇ ತಮಕಿಂತ ದಡ್ಡನೆಂಬ ಅದಮ್ಯವಾದ ಭ್ರಾತೃವಾತ್ಸಲ್ಯದಿಂದ ಶ್ರೋತೃವೃಂದವೆಲ್ಲ ನನಗೆ ಅರ್ಪಿಸುವ ರಾಶಿ ರಾಶಿ ಪ್ರೀತಿಯನ್ನು ನೀವೆಂದೂ ಕಂಡಿಲ್ಲ. ಈ ನಮ್ಮ ಪುಣ್ಯದ ಜಗತ್ತಿನಲ್ಲಿ ಜಾಣರಿಗೆ ಸ್ಥಾನವಿಲ್ಲ. ಅವರು ಹಿಂಸಾವಾದಿಗಳು, ಕಮ್ಯುನಿಷ್ಟರು. ಆದ್ದರಿಂದ ಇಂತಹ ಅಹಿಂಸಾವಾದಿಯಾದ ನಾನು ಜನಪ್ರಿಯನಾಗದೇ ಮತ್ತಾರು ಆಗಬೇಕು? ಎಂತಲೇ ಭಾಷಣಗಳ ಆಮಂತ್ರಣಗಳ ಮೊದಲನೆಯ ಲಿಸ್ಟಿನಲ್ಲಿ ನನ್ನ ಹೆಸರಿರದಿದ್ದರೂ ಎರಡನೆಯ ಲಿಸ್ಟಿನಲ್ಲಿ 'top number' ನನ್ನದೇ. ಅದು ನನ್ನ ಮಾಲಕಿ; ನನ್ನ ಹಕ್ಕು.

ನಾನು ಭಾಷಣಕಾರನೆಂಬ ಈ ನನ್ನ ಪ್ರತೀತಿ ಈಗಾಗಲೇ ದಿಕ್ಕು ದಿಕ್ಕಿನಲ್ಲಿ ಜೇವೊಡೆಗೈಯ್ಯುತ್ತಿದೆ. ನನ್ನ ಈ ಕೀರ್ತಿ ನೂರಾರು ದಿಗ್ವಿಜಯಗಳನ್ನು ಸಾಧಿಸಿ

ಸುಖವಾಗಿ ಬಂದು ಸುಪ್ಪೊತ್ತಿಗೆಯ ಮೇಲೆ ಮಲಗಿರುತ್ತದೆ. ಅಂತಲೇ ಆಟದ ಮೈದಾನಗಳೇ ಇರಲಿ, ಪಂಡಿತರ ಶಾಸ್ತ್ರ-ಸಭೆಗಳೇ ಇರಲಿ, ಭಾಷಾಶಾಸ್ತ್ರದ ಚರ್ಚೆಗಳೇ ಇರಲಿ, ಶಿಕ್ಷಣದ ಪುನರುದ್ಧಾರವೇ ಇರಲಿ, ಹರಿಜನರ ಸಮಸ್ಯೆಯೇ ಇರಲಿ, ಸನಾತನಿಗಳ ಸಂರಕ್ಷಣೆಯೇ ಇರಲಿ, ಅಣುಬಾಂಬು ತಯಾರಿಕೆಯೇ ಇರಲಿ, ನಿಶ್ಶಸ್ತ್ರೀಕರಣ ಪ್ರಚಾರವೇ ಇರಲಿ, ಗಿಡ ಹಚ್ಚುವುದಿರಲಿ, ಗಿಡ ಕೆಡಹುವುದಿರಲಿ ಎಲ್ಲಿಯಾದರೂ ಅಷ್ಟೇ; ನನಗೇ ಮನ್ನಣೆ.

ನಾನು ಹೊರಗೆ ಹೊರಟರೆ ಸಾಕು, ಭಾಷಣದ ಗಾಳಿ ಬೀಸಿದಂತಾಗುತ್ತದೆ. ನಾನೆಂದರೆ ನಡೆದಾಡುವ ಭಾಷಣ. ಚಲತ್‌ಶಿಲಾಶಾಸನ. ನಾನು ಬಾಜಾರದಲ್ಲಿ ಕಾಯಿಪಲ್ಲೆ ತರಲಿಕ್ಕೇ ಹೋಗಲಿ, ಸಿಂಪಿಗನ ಅಂಗಡಿಗೇ ಹೋಗಲಿ, ಎಲ್ಲಿ ಹೋದರೂ ನನ್ನ ಈ ಪ್ರತೀತಿ ನನ್ನ ಚೋಪ್‌ದಾರ್ ಹೊರಟ ಹಾಗೆ ಆಢ್ಯತೆಯಿಂದ ನನ್ನ ಮುಂದು ಮುಂದು ನಡೆದಿರುತ್ತದೆ. ಜನರ ಮನಸ್ಸಿನಲ್ಲಿ ನಾನೆಂದರೆ ಭಾಷಣ. ಭಾಷಣವೆಂದರೆ ನಾನು. ಒಂದು ಸಲ ಹೀಗೇ ಆಯಿತು. ನಾನು ಪ್ರತಿಸಲದ ನಮ್ಮ ನಾಪಿಕನಿಗೆ ಸರಿಯಾಗಿ ೯ ಗಂಟೆಗೆ ಮನೆಗೆ ಬರಲು ಹೇಳಿದ್ದೆ. ಅವನೂ ತನ್ನ ವೃತ್ತಿಯ ನಿಯಮಗಳಿಗನುಸಾರವಾಗಿ ಸರಿಯಾಗಿಯೇ ಗೋತಿ (ಕೈ) ಕೊಟ್ಟ. ನಾನಾದರೂ ಆ ಕೆಲಸವನ್ನು ಬಿಡುವಂತಿರಲಿಲ್ಲ. ಇನ್ನೇನು ಮಹಮ್ಮದ ಗುಡ್ಡಕ್ಕೆ ಬರದಿದ್ದರೆ, ಗುಡ್ಡವೇ ಮಹಮ್ಮದನ ಕಡೆಗೆ ಹೋಗಬೇಕು. ನಾನೇ ಹೊರಟೆ. ದಾರಿಯಲ್ಲಿ ಒಂದು ಟಾಂಗಾನೂ ಸೋವಿಯಲ್ಲಿ ಸಿಕ್ಕಿತು. "ಹೊಡೆ; ನಾಲ್ಕಾಣೆ; ಮಾಳಮಡ್ಡಿ" ಎಂದು ಸಲೂನ್ ಅರಿಸಿ ಹತ್ತಿದೆ. ಟಾಂಗಾ ನಾಲ್ಕು ಹೆಜ್ಜೆ ಮುಂದೆ ಹೋಗಿರಲಿಲ್ಲ; ನನ್ನ ಮಿತ್ರರೊಬ್ಬರು ಅಡ್ಡಾದರು ಅಪಶಕುನದ ಬೆಕ್ಕಿನ ಹಾಗೆ. "ಯಾಕೆ? ಊರಿಗೇನು?" ಎಂದು ಕೇಳಿಯೇಬಿಟ್ಟರು. "ಇಲ್... ಇಲ್ಲ...." ಎಂದು ನಾನು ಹೆದರು-ಹೆದರುತ್ತ ಅನ್ನುವ ಮೊದಲೇ ಬಂದುಬಿಟ್ಟಿತು ಅವರ ಎರಡನೆಯ ಬಾಣಪ್ರಹಾರ : "ಯಾಕೆ? ಭಾಷಣಕ್ಕೇನು? ಯಾವ ಊರಲ್ಲಿ? ಎಂದು ಬರುವುದು ತಿರುಗಿ?" ಎಂದು ನುಡಿದೇಬಿಟ್ಟರು. ಅಲ್ಲಿಯೇ ಆ ನಾಲ್ಕು ಹೆಜ್ಜೆಗೇ ನಾಲ್ಕಾಣೆ ಟಾಂಗಾದವನಿಗೆ ಒಕ್ಕೊಟ್ಟು ಕಾಲು-ಕುದುರೆಯನ್ನು ಹತ್ತಿ ನಡೆದೆ.

ಕ್ಷೌರಕರ್ಮಶಾಲೆಗೆ ಹೋದರಾದರೂ ಈ ತರ್ಲೆ ಮುಗಿದೀತೇನೋ ಎಂದುಕೊಂಡಿದ್ದೆ. ನಾನು ಒಳಗೆ ಹೋಗಿ ಕೂಡ್ರುವ ಒಂದು ಕ್ಷಣದಲ್ಲಿಯೇ ಸುರುವಾಯಿತು ಪಿಸುಪಿಸು ಮಾತು. "ಇವರೇ ಆ... ಇವರು ಇವರು... ಆ.... ಇವರು". ಯಾರವರು ಎಂದು ನಾನು ತಿರುಗಿ ನೋಡುವುದರಲ್ಲಿಯೇ ಒಬ್ಬ ಹಳ್ಳಿಯ ಬಾಂಧವನ ದೇಶಾವರಿ

ನಗೆ ನನ್ನನ್ನು ಸ್ವಾಗತಿಸಿತು. ಇದು ಏನೋ ಬಂತು ಎಂದು ಮುಖ ಹೊರಳಿಸಿದರೆ ಎದುರಿಗಿದ್ದ ನಿಲುವುಗನ್ನಡಿಯಲ್ಲಿ ನನ್ನ ಮುಖ ನನ್ನನ್ನೇ ಎದುರಿಸಿತು. ನೋಡಿ "ಎಲ್ಲಿಗೆ? ಭಾಷಣಕ್ಕೇನು?" ಎಂದು ಬೇರೆಯವರು ನನ್ನನ್ನು ಕೇಳುವಂತೆ ನಾನೇ ಅದಕ್ಕೆ ಹುಬ್ಬು ಕಣ್ಣು ಹಾರಿಸಿ ಸನ್ನೆ ಮಾಡಿದೆ. ಅದು ನಾನೇ ಎಂದು ಅರಿವಾದಾಗ ನಕ್ಕು ಕಣ್ಣುಮುಚ್ಚಿದೆ; ಇಲ್ಲ, ಮುಚ್ಚುವಷ್ಟರಲ್ಲಿಯೇ ಅವರು ಹೇಳಿಯೇಬಿಟ್ಟರು : "ಅದೇ, ತಮ್ಮಲ್ಲೇ ಬರಬೇಕಂತ ಮಾಡಿದ್ದವು. ತಾವೇ ಇಲ್ಲಿ ಭೆಟ್ಟಿ ಆದಿರಿ. ದೇವರು ಕೊಡಿಸಿ ಕೊಡೋದು ಅಂದ್ರ ಹೀಂಗಿರತದ ನೋಡ್ರಿ. ನಾವೂ ಇಲ್ಲೇ ಕೆಲಸ ಮುಗಿಸಿಕೊಂಡು ತಮ್ಮ ಮನೆಗೇ ಬರಬೇಕಂತ ಮಾಡಿದ್ದೆವು. ಹಃ ಹಃ ಹಃ..." ನಾನು ಕೇಳಿಯೇ ಕೇಳಿದೆ ತುಂಬಾ ಸಹನೆಯಿಂದ, ಮುಂದೇನು ಬರುತ್ತದೆ ಎಂದು. ಆದರೆ ಒಡಕು ಗ್ರಾಮೋಫೋನ್ ರಿಕಾರ್ಡಿನ ಮೇಲೆ ಮೊಂಡ ಪಿನ್ನನ್ನು ಹಚ್ಚಿದ ಹಾಗೆ, ಅವರ ಬಾಯಿ "ತಮ್ಮಲ್ಲಿಯೇ ಬರಬೇಕೆಂದು ಮಾಡಿದ್ದೆವು" ಎಂಬುದನ್ನು ಬಿಟ್ಟು ಬೇರೆ ಮತ್ತೇನನ್ನೂ ನುಡಿಯಲೇ ಇಲ್ಲ. ಕೊನೆಗೆ ನಾನೂ ತಾಳ್ಮೆಗೆಟ್ಟು ಕೇಳಿದೆ : "ಯಾಕೆ? ಯಾರು? ಏನು? ಏನು ಕೆಲಸವಿತ್ತು? ಬರುವವರಿದ್ದರೆ ಯಾಕೆ ಬರಲಿಲ್ಲ?...." ತನ್ನ ಅಸ್ತ್ರದ ಕೌಶಲ್ಯ ನಡೆಯದೆಂದು ಆ ನಾಪಿಕ ತಟಸ್ಥನಾಗಿ ಹಾಗೆಯೇ ನಿಂತ. ನನ್ನ ಮಾತು ಮುಗಿಯುವುದರಲ್ಲಿಯೇ ಆ ಗ್ರಾಮಪುಢಾರಿಗಳು ಮತ್ತೆ ಹೇಳಿದರು : "ಅದೇ... ಹೆಹೆ... ನಿಮ್ಮಲ್ಲಿಯೇ ಬರಬೇಕೆಂದು ಮಾಡಿದ್ದವು...." "ಹೌದು, ಮುಂದೇನು?" ಎಂದು ನಾನು ಅರಿಚಿದೆ. "ನಮ್ಮ ಊರಲ್ಲಿ ಒಂದು ಭಾವಿ ತೆಗೆಯ ಬೇಕಾಗಿದೆ. ಅದರ ಉದ್ಘಾಟನ ಸಮಾರಂಭ ಇಂದು ಸಂಜೆ... ತ....ಮ್ಮಿ...ಂದ..." ಎಂದು ಅವನು ಮುಗಿಸುವುದರೊಳಗಾಗಿ "ಏನು ಭಾಷಣವೇನು? ನನ್ನಿಂದ ಸಾಧ್ಯವಿಲ್ಲ. ನೀವು ಇಲ್ಲಿ ಯಾವ ಕೆಲಸದ ಸಲುವಾಗಿ ಬಂದಿದ್ದೀರಿ, ನಾನೂ ಅದೇ ಕೆಲಸದ ಸಲುವಾಗಿಯೇ ಇಲ್ಲಿಗೆ ಬಂದಿದ್ದೇನೆ! ಕೇಳುವುದಕ್ಕಾದರೂ ಒಂದು ರೀತಿ ಇರಬೇಕು" ಎಂದು ನಾನೇ ಗುಡುಗಿದೆ. "ಇಲ್ಲ.... ಇಂದೇ ಭಾವಿ ತೋಡಲು ಒಳ್ಳೆಯ ಮುಹೂರ್ತ ಎಂದು ಹೇಳಿದರು ಜೋಯಿಸರು. ಅದಕ್ಕೆ ತಮ್ಮನ್ನು..." ದೀನವಾಗಿತ್ತು ಮಾತು. "ಅದಕ್ಕೆ ನಾನೇನು ಮಾಡಬೇಕು, ಭಾವಿ ತೋಡುವದಿದ್ದರೆ?" ಎಂದು ಕಿರುಚಿದೆ ಅಸಹಾಯನಾಗಿ. "ಅದೇ, ತಾವು ಅದಕ್ಕಾಗಿ ಬರಬೇಕು." "ಏನು ಭಾವೀ ತೋಡಲಿಕ್ಕೋ? ನನ್ನ ರೋಷ ತೋಡಿಕೊಳ್ಳಲಿಕ್ಕೋ? ಇದೇನು ಉದ್ಘಾಟನವೋ, ಉತ್ಖನನವೋ?" ನನ್ನ ಕೊನೆಯ ಶಬ್ದದ ಅರ್ಥ ಅವರಿಗೆ ಗೊತ್ತಾಯಿತೋ ಇಲ್ಲವೋ! ನಾಪಿಕನೆದುರು ಅವರ ಸರತಿ ಬಂದದ್ದರಿಂದ ಅವರು ಕುಳಿತಲ್ಲಿಂದ ಎದ್ದರು. ನನಗೂ

ಅಲ್ಲಿ ಕೂಡ್ರಲಾಗಲಿಲ್ಲ. "ಭಾಷಣ... ಭಾಷಣ" ಎಂದು ವಟಗುಟ್ಟುತ್ತ ಅಲ್ಲಿಂದ ಎದ್ದೆ. ನಾಪಿಕ ಎಚ್ಚರಿಸದಿದ್ದರೆ ಹಣ ಕೊಡದೆ ಹಾಗೇ ಬಂದುಬಿಡುತ್ತಿದ್ದೆ.

ದಾರಿಯುದ್ದಕ್ಕೂ ನನಗೆ ಅದೇ ವಿಚಾರ : ಭಾವಿ ತೋಡುವುದು.... ಉದ್ಘಾಟನ.... ನನ್ನ ಭಾಷಣ... ಯಾಕೆ ಭಾಷಣ ಈ ಪರಿ ನನ್ನ ಬೆನ್ನು ಹತ್ತಿದೆ? ಛೆ, ಬೆನ್ನು ಬಿಡದ ಶನಿ. ಮಾಡಿಕೊಂಡ ಹಿಂದೂ ಹೆಂಡತಿ. ಭಾವಿ ತೋಡಬೇಕಾದರೆ ವಾಪಿಪ್ರಾರಂಭ ಭಾಷಣ, ಗಡಗಡೆ ಕೂಡಿಸಬೇಕಾದರೆ ಘಟಯಂತ್ರ ಪ್ರಾರಂಭ ಭಾಷಣ, ಹಗ್ಗ ಹಾಕಬೇಕಾದರೆ ರಜ್ಜು ಪ್ರಾರಂಭ ಭಾಷಣ, ಕೊಡ ಇಳಿಬಿಟ್ಟರೆ ಕುಂಭಪ್ರಾರಂಭೋತ್ಸವ, ನೀರು ಎಳೆದರೆ ಉದಕೋತ್ಸವ! ಛೆ, ಛೆ, ಏನು ಭಾಷಣ! ಭಾಷಣ! ಅದೂ ಹೋಗಲಿ. ಜನ ಹಾಳಾಗಲಿ, ನನಗಿಷ್ಟೂ ಸ್ವಾತಂತ್ರ್ಯವಿಲ್ಲವೇ? ಸಲೂನಿನಲ್ಲಿ, ಕಾಯಿಪಲ್ಲೆ ಪೇಟೆಯಲ್ಲಿ 'ಬಸ್ಸಿನಲಿ ಸೆನ್ಸಸ್ಸಿನಲಿ' – ಹಲ್ಲುಕಿರಿಯುವುದು "ಹೆ ಹೆ, ತಾವು ಬರಬೇಕು. ಭಾಷಣ." ಇದರಿಂದ ನಾನು ನನ್ನ ಕೈಯಿಂದ ಹಣ ಖರ್ಚು ಮಾಡಿ ಊರಿಗೆ ಹೋಗಿದ್ದರೂ ಸಹ, ದಾರಿಯಲ್ಲಿ ಭೆಟ್ಟಿಯಾದ ಜನ ಕೇಳಿಯೇ ಕೇಳುತ್ತಾರೆ : "ಯಾಕೆ ಎಲ್ಲಿ ಭಾಷಣ" ನನ್ನ ರೈಲುಖರ್ಚು ಹೋಗಲಿ, ನಾನು ಉಣ್ಣುವ ಊಟವೂ ಭಾಷಣದ ಖರ್ಚಿನಲ್ಲಿಯೇ ನಡೆದಿದೆಯೆಂದು ತಿಳಿದಿದ್ದಾರೋ ಏನೋ ಈ ಪಾಖಂಡರು! ಭಾವಿ... ತೋಡುವುದು... ಭಾಷಣ... ಹೆಯ್... ಗ್ರಾಮಮುಖಂಡ...

ಹೀಗೆ ದಾರಿ ನಡೆಯುತ್ತಲೇ ಆ ಗ್ರಾಮಮುಖಂಡನ ಚಿತ್ರ ನನ್ನೆದುರು ಪುನಃ ಬರತೊಡಗಿತು. ಅವನ ಆ ಮಾರ್ದವ, ಅವನ ವಿನಯ, ೧೧॥ ಹಲ್ಲುಗಳು,.... ಹೌದು ಪಾಪ ಅವನದಾದರೂ ಏನು ತಪ್ಪು? ಭಾಷಣಕ್ಕಾಗಿ ಕೇಳಿದರೆ ನಾನೇಕೆ ಇಷ್ಟು ಸಿಟ್ಟಿಗೆ ಬರಬೇಕು? ಇದು ನನ್ನ ಮನೋದೌರ್ಬಲ್ಯ. ಸ್ಥಿತಪ್ರಜ್ಞಸ್ಥಿತಿಯ ಹಾನಿ. ನಾನು ನನ್ನ ಉದ್ಯೋಗ ನಡೆಸಿದ ಹಾಗೆ ಅವನು ತನ್ನ ಕಾಯಕ ನಡೆಸಿದ್ದಾನೆ. ಇದರಲ್ಲಿ ಅವನದೇನು ತಪ್ಪು? "ಸ್ವೇ ಸ್ವೇ ಕರ್ಮಣಿ ನಿರತಾಃ". ಹಾಗಿದ್ದರೆ ಅವನು ಮೊದಲಿಗೇ ನಮ್ಮ ಮನೆಗೇಕೆ ಬರಲಿಲ್ಲ? ಹೌದು, ಬರಲಿಲ್ಲ, ಬಂದಿರದಿದ್ದರೆ ಏನು ತಪ್ಪು? ಇನ್ನೂ ಒಬ್ಬಿಬ್ಬರನ್ನು ಕೇಳಿ, ಆಮೇಲೆ ನಿಮ್ಮಲ್ಲಿ ಬರಬಹುದೆಂದು ಮಾಡಿದ್ದಾನು. ಯಾಕೆ ಇಷ್ಟು ಸ್ಪರ್ಧೆ? ಇಷ್ಟು ಅಸೂಯೆ? ನಿನಗೇ ಏಕೆ ಅಗ್ರತೀರ್ಥ? ಹತ್ತರ ಕೂಡ ನೀನೂ ಹನ್ನೊಂದು. ಮೇಲಾಗಿ ಅವನಿಗೂ ನಿಮ್ಮ ಊರಿನ ಈ ಭಾಷಣಕಾರರ ಪ್ರಖ್ಯಾತಿ ಗೊತ್ತೇ ಇದೆ. ಅಂತಲೇ ಅವನು ನಿಮ್ಮ ಧಾರವಾಡಕ್ಕೆ ಬಂದಿದ್ದಾನೆ. ಇಲ್ಲಿ ಏನೂ ಸಿಗದಿದ್ದರೂ ಭಾಷಣಕಾರರ ಅಭಾವವೇನೂ ಇಲ್ಲವೆಂದು ಅವನಿಗೆ ಗೊತ್ತು.

ಹೌದು; ಅಂದಾಕ್ಷಣಕ್ಕೇ ನಮ್ಮ ಧಾರವಾಡದ ಪ್ರೋಜ್ವಲ ಕೀರ್ತಿ ನನ್ನ ಕಣ್ಣೆದುರಿಗೆ ತಳತಳಿಸಹತ್ತಿತು. ಇಲ್ಲಿ "ಕಿರುಮಕ್ಕಳುಂ ಅರಿಪಲ್ಕೆ ಅರಿವರ್ ವಿವೇಕಮಂ ಮಾತುಗಳಂ" ನಮ್ಮ ಧಾರವಾಡದಲ್ಲಿ ದಡ್ಡರು ಬಂಡಿಗಟ್ಟಲೆ ಹುಟ್ಟಿರಬಹುದು; ಆದರೆ ಮೂಕರು ಮಾತ್ರ ಹುಟ್ಟಿರಲಿಕ್ಕೇ ಇಲ್ಲವೆಂದು ನನ್ನ ಭಾವನೆ. ಇಲ್ಲಿಯ ಚಿಕ್ಕ ಕೂಸುಗಳಿಗೆಲ್ಲ ಮೂರು ತಿಂಗಳಿಗೇ ನಾಲಿಗೆ ನುಸುಳಾಡುತ್ತಿರಬಹುದು. ಏನು ಮಾತು ಇಲ್ಲಿಯ ಮಕ್ಕಳದು? ಮುತ್ತಿನಂತಹ ಮಾತು!

ಅಂತಲೇ ಇಂಥ ಸಂದರ್ಭದಲ್ಲೆಲ್ಲ ಜನ ಧಾರವಾಡಕ್ಕೆ ನುಗ್ಗುತ್ತಾರೆ. ಪಾಪ ಆ ಗ್ರಾಮ ಮುಖಂಡನದಾದರೂ ಏನು ತಪ್ಪು? ನೋಡಬೇಕು ನೀವು ನಮ್ಮ ಧಾರವಾಡವನ್ನು, ನಾಡಹಬ್ಬ ಪ್ರಾರಂಭೋತ್ಸವಗಳ ಈ ಕಾಲದಲ್ಲಿ, ಏನು ಪರ್ವಕಾಲ ಅದು ಭಾಷಣ-ಬ್ರಾಹ್ಮಣರಿಗೆ! ಆಗ ಯಾವ ಬಿಡಾಡಿ ಆಗಾಮಿ ಹಂಗಾಮಿಗೂ ಬಿಡುವಿರುವುದಿಲ್ಲ, ಎಲ್ಲರೂ ಪಕ್ಷಮಾಸದ ಆಚಾರ್ಯರು; ಎರಡೆರಡು ಕಡೆಗೆ 'ಮಾಡಿಸುವುದು' ಒಂದೆಡೆಗೆ ಊಟ. ಹೀಗಾಗಿ ಮುಂಜಾನೆ, ಮಧ್ಯಾಹ್ನ ಸಂಜೆ ಭಾಷಣಗಳೇ ಭಾಷಣಗಳು! ನಾಡಹಬ್ಬ ಪ್ರಾರಂಭೋತ್ಸವಗಳ ಈ ಕಾಲದಲ್ಲಿ ಕರ್ನಾಟಕದ ಎಲ್ಲ ರೈಲೂ ಬಸ್ಸೂ ಒಂದೇ ಮುಖವಾಗಿ ಪ್ರವಹಿಸುತ್ತವೆ, ಧಾರವಾಡದ ಅರಬ್ಬೀ ಸಮುದ್ರದ ಕಡೆಗೆ. ಜನತೆಗೆ ಗೊತ್ತು ಇಲ್ಲಿ ಪಾತಾಳಗರಡಿ ಹಾಕಿದರೆ ನಾಲ್ಕಾರಾದರೂ ಭಾಷಣಕಾರರ ಕೊಡಗಳು ಎದ್ದಾವೆಂದು. ನಮ್ಮ ಧಾರವಾಡದಲ್ಲಿ ಒಂದು ಕಲ್ಲು ಬೀಸಿದರೆ ಸಾಕು, ಅದು ಯಾವನಾದರೂ ಭಾಷಣಕಾರನನ್ನೋ, ಲೇಖಕನನ್ನೋ, ಪಿಂಚಣಿದಾರರನ್ನೋ, ಮಾಸ್ತರರನ್ನೋ ತಾಕುತ್ತದೆ. ಕೊನೆಯ ಎರಡು ವರ್ಗದವರಿಗೂ ನಾಲಗೆಯ ಬಲವೇನೂ ಕಡಿಮೆಯಿಲ್ಲ. ಬಾಯಿಬ್ರಹ್ಮಿಗಳ ತವರುಮನೆ ನಮ್ಮ ಧಾರವಾಡ.

ಇಲ್ಲಿ ಸಾಹಿತ್ಯವೇಷಾಂತರ್ಗತ ಸಾಧು... ಅಲ್ಲಲ್ಲ, sorry... ಭಾಷಣಕಾರರಿಗೆ ಏನೂ ಕಡಿಮೆಯಿಲ್ಲ. ಎಷ್ಟು ಜನ ಸಾಹಿತಿಗಳು ಇಲ್ಲಿ? ಭಯ್ಯಾನ ಅಂಗಡಿಯ ಕಪಾಟಿನಲ್ಲಿಯ ಲಾಡು, ಜಿಲೇಬಿಗಳ ಹಾಗೆ!... ಹಿರಿ ಸಾಹಿತಿಗಳು, ಮರಿ ಸಾಹಿತಿಗಳು, ಕಿರಿ ಸಾಹಿತಿಗಳು, ಕುರಿ ಸಾಹಿತಿಗಳು, ಕುರುಕುರು ಸಾಹಿತಿಗಳು, ಹುರು ಹುರು ಸಾಹಿತಿಗಳು-ಎಂಥಾ ಮೆರವಣಿಗೆ ಈ ಸಾಹಿತಿಯೆಂಬ ಭಾಷಣಕಾರರದು! ಹಾಂ ಏನು? ಬರೀ ಪ್ರಾಸಕ್ಕಾಗಿ ಈ ವಾಕ್ಯ ಕೂಡಿಸಿದೆನೆಂದು ಕೇಳಿದಿರಾ? ಗೊತ್ತು ಸ್ವಾಮೀ ನನಗದು, ನೀವು ಹೀಗೆ ಆಕ್ಷೇಪವೆತ್ತುತ್ತೀರೆಂದು. ನಾನೂ ಭಾಷಣದಿಂದ ಸವಡು ಸಿಕ್ಕಾಗ ಇದೇ ಟೀಕೆಯ ಉದ್ಯೋಗವನ್ನೇ ಮಾಡಿದವ. ಆದರೆ, ನಮ್ಮಲ್ಲಿ

ಶಬ್ದಗಳೇನು ಪುಕ್ಕಟೆ ಬಿದ್ದಿಲ್ಲ. ಅದು ಸಾರ್ಥಪದಪ್ರಯೋಗ; ಪರಿಕರಾಲಂಕಾರ. ಹಾಗಾದರೆ, ಅಂದರೇನೆಂದು ಕೇಳುವಿರಾ? ತಕ್ಕೊಳ್ಳಿರಿ, ಹೇಳಿಯೇಬಿಡುತ್ತೇನೆ. ಹಿರಿ ಸಾಹಿತಿಗಳೆಂದರೆ ಮಠಾಧಿಪತಿಗಳು. ಈಗಾಗಲೇ ಖ್ಯಾತನಾಮರು. ಶಿಷ್ಯೇಚ್ಛುಗಳು. ಕೀರ್ತಿ ಪತಾಕಿಗಳು. ಮೊಹರಮ್ಮದ ಹುಲಿಯಂತಿದ್ದು ಇವರ ಬಾಲಕ್ಕೆ ಶೆಲ್ಲೆ, ಬೆಳ್ಳಿ, ಖಿಡೆ, ಬಣ್ಣಬಣ್ಣದ ಪೀತಾಂಬರ ಕಟ್ಟಿದಂಥವರು. ಆಸನೇರಿಯವರು, ಇವರ ಹತ್ತಿರ ಸುಳಿಯುವಂತಿಲ್ಲ, ಇನ್ನು ಮರಿ ಸಾಹಿತಿಗಳು. ಇವರು ಮೇಲಿನ ಮಠದ ಶಿಷ್ಯೋತ್ತಮರು. ಹುಲಿಯ ಹಿಂದೆ ಗೆಜ್ಜೆ ಬಾರಿಸುವವರು. ಕಿರಿ ಸಾಹಿತಿಗಳಾರೆಂದು ಕೇಳುವಿರಾ? ಇವರು ಸ್ವಯಂಭೂ ಲಿಂಗಗಳು. ಮಠಾಶ್ರಿತರಲ್ಲ, ತಾವು ಹಿರಿಯ ಸಾಹಿತಿಗಳಾಗಬೇಕೆಂಬ ಆಸೆಯುಳ್ಳವರು. ಅಡಿಗೆ ಹೋಗಬೇಕಾದ ಪಾಡುಗಾಯಿಗಳು. ಕುರಿ ಸಾಹಿತಿಗಳು ಮಾತನಾಡದೆ ಬರೀ ಪುಸ್ತಕಗಳ ತಕ್ಕಡಿ ತೂಕ ಇನ್ನೂ ಹೆಚ್ಚಿಸುವವ. ಕಿರಿಕಿರಿ ಸಾಹಿತಿಗಳೆಂದರೆ ಯಾರೆಂದಿರಾ? ಇವರು ಭಾಷಾಂತರ ಪೈಲ್ವಾನರು. ಇನ್ನೊಬ್ಬರ ಕೀರ್ತಿಯಲ್ಲಿ ಪಾಲು ಬೇಡುವವರು. ಸ್ವಂತ ಭಂಡವಲು ನಾಸ್ತಿ. ಬೇರೆಯವರ ವಿಮರ್ಶೆಗಳನ್ನೇ ಅಭುಕ್ತ ಎತ್ತಿಹಾಕಿ ಅವನ್ನು ತಮ್ಮವೆಂದೇ ಹೇಳಿಕೊಂಡು ರಾಜವಿಮರ್ಶಕ ಎಂದು ಸಾಹಿತ್ಯ ಸಿಂಹಾಸನವನ್ನೇರಬಯಸುವವರು. ಇವರ ಕಿರಿಕಿರಿ ಬಹಳ ಸಾಹಿತ್ಯದಲ್ಲಿ, ಕುರುಕುರು: ಹುರುಹುರು? ಏನು ಮುದ್ದಾಂ ಕೇಳುತ್ತಿರುವಿರೇನು? ಶಬ್ದ-ದ್ರಾಕ್ಷಾಪಾಕ. ಸ್ಫಟಿಕದ ಹಾಗೆ ಮೇಲೆಯೇ ಅರ್ಥ ಎದ್ದು ಕಾಣುತ್ತದೆ. ಯಾವಾಗಲೋ ಒಂದುಕಾಲಕ್ಕೆ ತಾವು ಬರೆದ ಒಂದೆರಡು ಪುಸ್ತಕಗಳ (ವಿಷಯ ಕೇಳಬೇಡಿ) ತಪ್ಪಿಗಾಗಿ ಏರಿದ ಸ್ಥಾನವನ್ನು ಬಿಟ್ಟು ಕೆಳಗಿಳಿಯಬಾರದೆಂದು ಹಟತೊಟ್ಟ ಸುಶೋಧನರು ಇವರು. ನಾಯಿ.... ನಾಯಿಯನ್ನು... ಕಂಡಕೂಡಲೇ ಗುರುಗುರು... ಛೇ! ಛೇ ಹೀನೋಪಮೆ. ಬಿಟ್ಟುಬಿಡಿರಿ. ಇವರು ಕಡಲೆ ತಿಂದು ಸೊಕ್ಕಿದ ಕುದುರೆ ಖುರ ಕೆದರಿದಂತೆ ಯಾವ ಪಂಡಿತರನ್ನು ಕಂಡರೂ, ಯಾವಾಗ ತಡವೇವೆಂದು ಹೂಂಕರಿಸುವವರು. ಇವರ ಮರ್ಯಾದಿತ ಪಾಂಡಿತ್ಯ ಯಾವಾಗಲೂ ಇವರ ತುದಿ ನಾಲಿಗೆಯ ಮೇಲೇ ಕುಳಿತು ಫೂತ್ಕರಿಸುತ್ತಿರುತ್ತದೆ. ಯಾವುದಾದರೂ ಒಂದು ಗುಡಿಯ ಕಟ್ಟೆಯ ಮೇಲೋ ಧರ್ಮಶಾಲೆಯ ನೆರಳಿನಲ್ಲೋ, ಪಾಕಭಟ್ಟರ ಮಧ್ಯದಲ್ಲಿ... ಇಷ್ಟು ಜನ ಇದ್ದಾಗ ಏನು ಎಲ್ಲಿಯೋ ಸುರುವಾಗಿ ಎಲ್ಲಿಗೋ ಹೊರಟೆ ಎನ್ನುತ್ತೀರಾ? ಹಾಗಲ್ಲ ಸ್ವಾಮೀ, ಅದನ್ನೇ ಹೇಳುತ್ತಿದ್ದೆ ಇಷ್ಟು ಜನ ಸಾಹಿತಿಗಳಿರುವ ಈ ನಮ್ಮ ಧಾರವಾಡದ ಕ್ಷೌರಕರ್ಮಶಾಲೆಗೆ ಪಾಪ, ನಮ್ಮ ಗ್ರಾಮಮುಖಂಡರು ಬಂದಿದ್ದರೆ ತಪ್ಪೇನು? ಅಥವಾ ನನ್ನನ್ನು ಕೇಳಿದ್ದರಲ್ಲಿಯಾದರೂ ತಪ್ಪೇನು? ಈ

ಸಾಹಿತಿಗಳೆಲ್ಲ ಮುಕ್ತರೋ ಪ್ರಚ್ಛನ್ನರೋ ಆದ ಭಾಷಣಕಾರರೇ. ಒಗೆಯುವ ಹಾಗೆ ಪಾಪ, ಕಲ್ಲು ಒಗೆದಿದ್ದಾನೆ ಬಾಂಧವ! ಹೀಗೆ ಕರೆ ಬಂದಾಗ ನಾನೆಂದೂ ಕೇಳಬಾರದು. ಇದರಲ್ಲಿ ತಪ್ಪೇನೂ ಇಲ್ಲ, ಭಾವಿ ತೋಡುವುದು ಏನು ತಪ್ಪು? ದೇಹ, ಮನಸ್ಸು ಎರಡಕ್ಕೂ ಹಿತ. ಆಗಲೆ ಹೊಳೆದಿದ್ದರೆ... ಎಂಥ ಅನುಭವ ದೊರಕುತ್ತದೆ ಈ ಭಾಷಣಗಳ ಮೂಲಕ!

ಹೌದು ಭಾಷಣಕ್ಕೆ ಹೋಗುವುದೆಂದರೆ ಧ್ವನಿ ಕೊಟ್ಟು ಅನುಭವ ಗಳಿಸಿದ ಹಾಗೆ. ನಿಮ್ಮ ಆಯುಷ್ಯದ ಮೂವತ್ತು ವರ್ಷಗಳಲ್ಲಿ ನೀವು ಗಳಿಸಿದಷ್ಟು ಅನುಭವವನ್ನು ಮೂರು ತಾಸುಗಳಲ್ಲಿ ಗಳಿಸುತ್ತೀರಿ. ಇದೇನು ಕಡಿಮೆ ಲಾಭವೇ? ಅದೂ ಮತ್ತೊಬ್ಬರ ಖರ್ಚಿನಿಂದ. ಕೀರ್ತಿಯ ಕ್ಷಣ ಭಂಗುರತೆ, ಅಹಂಕಾರಭರ್ತ್ಸನೆ, ಸಹನಶೀಲತೆ, ಸ್ಥಿತ ಪ್ರಜ್ಞತ್ವ, ನಿರುಪದ್ರವತ್ವ-ಒಂದೇ ಎರಡೇ ಎಷ್ಟು ಅನುಭವ ಭಾಷಣದಿಂದ!

ನಾನು ಭಾಷಣಕ್ಕೆ ಹೊಸದಾಗಿ ಹೋದಾಗ-ನನ್ನನ್ನು ಕರೆದ ತಪ್ಪಿಗೋ ಅಥವಾ ತಮ್ಮ ಮಾನ ಉಳಿಸಿಕೊಳ್ಳಲಿಕ್ಕೋ ಅಥವಾ ತಮ್ಮ ಕಹಳೆ ಊದಲಿಕ್ಕೋ-ಪರಿಚಯ ಕಾರರು ಮಾಡಿಕೊಟ್ಟ ಅಪರಿಚಯಾತ್ಮಕ ಭಾಷಣಗಳನ್ನು ನಾನೆಂದಿಗೂ ಮರೆಯಲಾರೆ: "ಶ್ರೀ...ಶ್ರೀ...ಶ್ರೀ... ಶ್ರೀಮಾನ್ನರು ಉದ್ದಾಮ ಪಂಡಿತರು; ಶ್ರೇಷ್ಠ ವಾಗ್ಮಿಗಳು; ಕಲಾ ಕುಶಲರು; ಕಾರ್ಯತತ್ಪರರು; ಬಹುಭಾಷಾವಿಶಾರದರು; ಅನೇಕ ಗ್ರಂಥಗಳ ಜನಕರು..." ಇತ್ಯಾದಿ, ಇತ್ಯಾದಿ. ನನ್ನ ಪರಿಚಯ ಹೀಗೆ ನಡೆದಾಗಲೆಲ್ಲ ನನ್ನ ಕೊರಳು ತಾನಾಗಿಯೇ ಭೇಷ್ ಭೇಷ್ ಎಂದು ಹತ್ತಾರು ಸಲ ತೂಗಿದೆ. "ಅವರ ಬಿಡುವಿಲ್ಲದ ಕಾರ್ಯಕ್ರಮ ವನ್ನು ನೀವು ಧಾರವಾಡಕ್ಕೆ ಹೋಗಿಯೇ ನೋಡಬೇಕು. ಅವರಿಗೆ ಒಂದು ಗಳಿಗೆ ಪುರಸೊತ್ತು ಇರುವದಿಲ್ಲ, ನಾವು ಹೋಗಿ ವಿನಂತಿ ಮಾಡಿಕೊಂಡಾಗ ನಮ್ಮ ಮೇಲಿನ-ನಮ್ಮ ಊರ ಮೇಲಿನ ನಿಮ್ಮೆಲ್ಲರ ಮೇಲಿನ-ಅಪಾರ ಕರುಣೆಯಿಂದ ಇಲ್ಲಿಗೆ ಬರಲು ಒಪ್ಪಿಕೊಂಡರು. ಅವರಿಗೆ ನಾವು ಎಷ್ಟು ಕೃತಜ್ಞರಾದರೂ ಕಡಿಮೆಯೇ" ಎಂದಾಗ ನನ್ನ ಕಣ್ಣುಗಳಿಂದ ಹೊರಬಂದ ಅನುಕಂಪೆಯ ಜ್ಯೋತ್ಸ್ನಾವರ್ಷ ಶ್ರೋತೃಗಳ ತಲೆಯನ್ನೆಲ್ಲಾ ಮೂಸಿ ತಿರುಗಿ ಬಂದಿದೆ. ಎಂಥ ದೊಡ್ಡ ಮನುಷ್ಯನಾ? ಕ್ರೂರವಾದ ಈ ಜಗತ್ತಿನಲ್ಲಿ ಉಳಿದವರಿಗೆ ಗೊತ್ತಾಗದಿದ್ದರೂ ಈ ಊರಿನವರಿಗಾದರೂ ನನ್ನ ದೊಡ್ಡಿಸ್ತಿಕೆ ಗೊತ್ತಿದೆಯಲ್ಲಾ, ದೇವರು ಅಂತೂ ಅಷ್ಟು ನಿರ್ಘೃಣನಲ್ಲ ಎಂದು ದೇವರ ಕೂಡ ನನ್ನ ರಾಜಿ ಮಾಡಿಸಿದೆ ಈ ಭಾಷಣ ಕಾರ್ಯಕ್ರಮ. (ಕೊನೆಗೆ ಮನೆಗೆ ಬಂದಾಗ ನಮ್ಮ ಮನೆಯವರು ಕಾಯಿಪಲ್ಯೆ ತರಲು ಆಜ್ಞಾಪಿಸಿದಾಗಲೇ ನನ್ನ ನಿಜವಾದ ಯೋಗ್ಯತೆ ನನಗೆ ಗೊತ್ತಾದದ್ದು.) ಅದಿರಲಿ. ಇಷ್ಟು ನಿಮ್ಮ ದೊಡ್ಡಿಸ್ತಿಕೆಯನ್ನು

ತಿಳಿದುಕೊಳ್ಳುವ ಜನ ಜಗತ್ತಿನಲ್ಲಿದ್ದಾಗ ನೀವೇಕೆ ಭಾಷಣಕ್ಕೆ ಹೋಗಬಾರದು?

ಆದರೆ ಅನುಭವ ಸಾರ್ವತ್ರಿಕವಲ್ಲ. ಕೆಲಕಾಲ ಗತಿಸಿದ ಮೇಲೆ, ನಿಮ್ಮ ಹೆಸರು ಅಲ್ಲಲ್ಲಿ ಸುಳಿದಾಡಿದ ಮೇಲೆ, ಜನ ಆಮಂತ್ರಿಸುವದು ನಿಮ್ಮನ್ನಲ್ಲ; ನಿಮ್ಮ ಹೆಸರನ್ನು. ಆಗ ಪಾಪ ಅವರಿಗೆ ನಿಮ್ಮ ವಿಷಯವಾಗಿ ಸುತರಾಂ ಏನೂ ಗೊತ್ತಿರುವುದಿಲ್ಲ. ಪೇಪರುಗಳಲ್ಲಿ ಆಗಾಗ ಬರುವ ನಿಮ್ಮ ಹೆಸರನ್ನು ಓದಿ, ನೀವೂ ಭಾಷಣ ಮಾಡುವ ಜಾತಿಗೆ ಸೇರಿದವರೆಂದು, ನಂಬಿ ಕರೆದಾಗ ಹೋಗುವ ವರ್ಗದವರೆಂದು ತಿಳಿದು ಅವರು ನಿಮ್ಮನ್ನು ಆಮಂತ್ರಿಸುತ್ತಾರೆ. ಹೀಗೆ ಹೋದಾಗ, ನಿರಾಶೆ ನಿಮಗಾಗಿ ಕಾದಿರುತ್ತದೆ. ಆಗ ನೀವು ಗಾಬರಿಯಾಗುವ ಕಾರಣವಿಲ್ಲ. ಇಂಥ ಊರುಗಳಲ್ಲಿ ನಡೆಯಬೇಕಾದ ಶ್ರಾದ್ಧ ಮುಗಿಯಬೇಕೆಂಬಂತೆ, ಒಂದು ಸಭೆ ನಡೆಯಬೇಕಾಗಿರುತ್ತದೆ. ನೀವು ಹೋದಾಗ, ಕಾರ್ಯಕ್ರಮದ ಪುರೋಹಿತ ಮುಂದಾಗಿ ನಿಮ್ಮ 'ಚಾ-ಖಾರದ' ವ್ಯವಸ್ಥೆ ಮಾಡುತ್ತಾನೆ. ಗ್ರಾಮಸುಧಾರಣೆ, ನಗರ ನೈರ್ಮಲ್ಯ, ನೆಹರು ಅವರ ವಿದೇಶ ನೀತಿ, ಐಸನ್‌ಹಾವರ ಅವರ ಇತ್ತೀಚಿನ ಭಾಷಣ-ಎಲ್ಲವನ್ನೂ ಕೇವಲ ನಿಮ್ಮ ಹತ್ತು ವರ್ಷದ ಸ್ನೇಹಿತನ ಹಾಗೆ ನಿಮ್ಮ ಕೂಡ ಚರ್ಚಿಸುತ್ತಾನೆ. ಆಗ ಸಭೆಯ ವೇಳೆ ಆಗುತ್ತದೆ. ವಧಸ್ತಂಭಕ್ಕೆ ಕರೆದೊಯ್ಯುವವರಂತೆ ನಿಮ್ಮನ್ನು ಸಭಾಸ್ಥಾನಕ್ಕೆ ಕರೆದೊಯ್ಯುತ್ತಾನೆ. ಈ ವ್ಯಕ್ತಿ ಊರಲ್ಲಿ ಯಾರಯಾರ ಮೇಲೆ ತನ್ನ 'ಛಾಪು' (impression) ಹಾಕಬೇಕಾಗಿದೆಯೋ ಅವರ ಸುತ್ತೆಲ್ಲ ನಿಮ್ಮನ್ನು ಸುಳಿದಾಡಿಸಿಕೊಂಡು ಸಭಾಪೀಠಕ್ಕೆ ಕರೆದೊಯ್ಯುತ್ತಾನೆ. ಇನ್ನೇನು ಸಭೆ ಸುರುವಾಗಬೇಕು. 'ಉದಯವಾಗಲಿ' ಸೂರು ಪ್ರಾರಂಭವಾಗುತ್ತಿರುತ್ತದೆ : ನಿಮ್ಮನ್ನು ಮಗ್ಗಲು ಕರೆದು ಅವನು ಸಣ್ಣದನಿಯಲ್ಲಿ ಕೇಳುತ್ತಾನೆ : "ನಿಮ್ಮೂರು ಅದೇ ಧಾರವಾಡವೇ ಅಲ್ಲವೇ? ನೀವು ಅಲ್ಲಿ ಮಾಡುವ ನೌಕರಿ ಯಾವುದು? ನೀವು ಆದ ಪರೀಕ್ಷೆ ಏನು? ನೀವು ಏನಾದರೂ ಪುಸ್ತಕ ಗಿಸ್ತಕ ಬರೆದಿರುತ್ತೀರಾ? ಕೊನೆಗೆ, ನಿಮ್ಮ ಪೂರ್ಣ ಹೆಸರೇನು?" ಆಗ ನಿಮಗೆ ನಿಮ್ಮ ಪ್ರಸಿದ್ಧಿಯ ಭ್ರಮ ನಿರಸನವಾಗುತ್ತದೆ. ಏನೋ ದೊಡ್ಡ ಮನುಷ್ಯ ಎಂದು ಕರೆದಿದ್ದಾರೆಂದು ತಿಳಿದ ನೀವು ಅವರಿಗೆ ನಿಮ್ಮ ಪರಿಚಯ ಆಗುತ್ತಿರುವುದು ಈಗೇ ಮಾತ್ರ ಎಂದು ತಿಳಿದುಕೊಳ್ಳುತ್ತೀರಿ. ನಿಮ್ಮನ್ನು ಈ ವರೆಗೆ ಪ್ರಶ್ನೆ ಕೇಳಿದವನೇ ನಿಮ್ಮ ಪರಿಚಯ ಮಾಡಿ ಕೊಡುವವನಿರುತ್ತಾನೆ. ಅಷ್ಟರಲ್ಲಿಯೇ ಆ ಮುಖಂಡ ಎದ್ದು ಪ್ರಾರಂಭಿಸುತ್ತಾನೆ : "ಮಿತ್ರರೇ, ಮಹನೀಯರೇ, ನಿಮಗೆ ಗೊತ್ತಿದ್ದ ಪ್ರಕಾರ ಪ್ರತಿವರ್ಷ ನಾವು ಈ ಸಭೆಯನ್ನು ಕೂಡಿಸುತ್ತ ಬಂದಿದ್ದೇವೆ. ಈ ವರ್ಷ ಹಲವಾರು ನಮ್ಮಲ್ಲಿಯ ತೊಂದರೆಗಳ ಮೂಲಕ ಕೂಡಿಸಬಾರದೆಂದು ಮಾಡಿದ್ದೆವು. ಆದರೆ ನಮ್ಮಲ್ಲಿಯ

ಹಲವು ಹುಡುಗರು ಪ್ರತಿವರ್ಷ ನಡೆದ ಈ ಕ್ರಮವನ್ನು ಏಕೆ ನಿಲ್ಲಿಸುವದು ಎಂದು ದುಂಬಾಲುಬಿದ್ದರು. ನಾವೂ ಮನಸ್ಸಿಲ್ಲದೆ ಒಪ್ಪಿಕೊಂಡು ಹಾಗೇ ಮಾಡುವದೆಂದು ನಿರ್ಣಯಿಸಿದೆವು. ಇದಕ್ಕೆಲ್ಲ ಮುಖ್ಯ ಹಣದ ಸಹಾಯ ಬೇಕು. ಸುಮಾರು ೪೦೦ ರೂಪಾಯಿಯಾದರೂ ಖರ್ಚು ಬರಬಹುದೆಂದು ಅಂದಾಜು ಮಾಡಿದೆವು. ಈಗ ಇನ್ನೂ ೧೦೦ ರೂಪಾಯಿ ಮಾತ್ರ ಕೂಡಿದೆ. ಇನ್ನುಳಿದದ್ದನ್ನು ತೀವ್ರ ಕೂಡಿಸ ಬೇಕಾಗಿದೆ. ಅದನ್ನಷ್ಟು ನೀವು ಬೇಗ ಕೊಟ್ಟು ಬಿಡಿರಿ. ಯಾಕಂದರೆ ಈಗ ಕೂಡಿದ ೧೦೦ ರೂಪಾಯಿ ಬಹುಮಟ್ಟಿಗೆ ಖರ್ಚಾಗಿಯೇಬಿಟ್ಟಿದೆ. ಹಾಂ-ಹಾಂ ಮರೆತಿದ್ದೆ ಇದನ್ನೇ ಸುರುಮಾಡಿದೆ. ನಮ್ಮ ತಾಪತ್ರಯ ನಮಗಿರಲಿ. ನಾನು ಇಂದಿನ ಅತಿಥಿಗಳ ಪರಿಚಯ ಮಾಡಿಕೊಡಬೇಕೆಂದು ಹೇಳಿದ್ದಾರೆ. ಅದನ್ನೇ ಮರೆತಿದ್ದೆ, ಶ್ರೀಮಾನ್ ಶ್ರೀಮಾನ್.... ಇವರು..." ಇಷ್ಟನ್ನುವದರಲ್ಲಿಯೇ ಪಾಪ, ಪರಿಚಯಕಾರರಿಗೆ ತಮ್ಮ ಹಣದ ತಾಪತ್ರಯದಲ್ಲಿ ನಿಮ್ಮ ಹೆಸರೇ ನೆನಪು ಹಾರಿ ಹೋಗುತ್ತದೆ. ನಿಮ್ಮ ಕಡೆಗೇ ತಿರುಗಿ ಕೇಳುತ್ತಾರೆ. "ನಿಮ್ಮ ಪೂರ್ಣ ಹೆಸರೇನಂದಿರಿ?" ನೀವು ಬೆವರು ಸುರಿಸುತ್ತ ಹೇಳುತ್ತೀರಿ : "ಶ್ರೀ... ಹೂಂ ಶ್ರೀಮಾನ್... ಇವರು ಇಲ್ಲಿಗೆ ದಯಮಾಡಿ ಬಂದಿದ್ದಾರೆ. ಅವರು ಭಾಷಣ ಕೊಡುತ್ತಾರೆ. ಹೆಸರೇನೂ ಮಹತ್ವದ್ದಲ್ಲ, ಅವರ ಬಗ್ಗೆ ನನಗೇನೂ ಗೊತ್ತಿಲ್ಲ, ಈಗೇ ಒಂದೆರಡು ಪ್ರಶ್ನೆ ಕೇಳಿದೆ. ಅವರೇನೋ ಪುಸ್ತಕ ಬರೆದಿದ್ದಾರಂತೆ. ಒಂದು ಮಾತು ಮಾತ್ರ ನಿಜ; ಅವರು ಬಹಳ ದಯಾವಂತರು. ಆಗಲೇ ನಾನು ನಿಮಗೆ ಹೇಳಿದೆ-ನಮ್ಮ ಈ ಹಣದ ಅಡಚಣೆಯಲ್ಲಿ ಬಹಳ ತಡಮಾಡಿ ಸುರುವು ಮಾಡಿದೆವೆಂದು. ಇಷ್ಟು ತಡಮಾಡಿ ಯಾರು ಸಿಗಬೇಕು? ಇವರನ್ನು ಕೇಳು, ಅವರನ್ನು ಕೇಳು ಎನ್ನುವುದರಲ್ಲಿಯೇ ಹೊತ್ತು ಹೋಯಿತು. ಯಾರೂ ಸಿಗಲಿಲ್ಲ, ಯಾರು ಸಿಗಬೇಕು ನಮ್ಮ ಅವಸರಕ್ಕೆ? ಹೀಗಾಗಿ ನಮ್ಮ ಶ್ರೀಮಾನ್..." ಪುನಃ ಹೆಸರಿಗಾಗಿ ನಿಮ್ಮ ಕಡೆಗೆ ತಿರುಗುತ್ತಾರೆ. ನೀವು ಪುನಃ ನೆನಪುಕೊಟ್ಟ ಕೂಡಲೇ ಎಂಜಿನ್ ಪ್ರಾರಂಭವಾಗುತ್ತದೆ. ".... ಇವರ ಕಡೆಗೆ ಹೋದೆವು. ಹೀಗೆ ನೀವು ಭಾಷಣಕ್ಕೆ ಬರಬೇಕು ಎಂದು ಕೇಳಿದೆವು. ಅವರು ಒಮ್ಮೆಲೆ 'ಹೂಂ' ಎಂದು ಬಂದರು. ಇದು ಅವರ ಉತ್ಸಾಹವನ್ನು ತೋರಿಸುತ್ತದೆ." ಹೀಗೆ ಭಾಷಣ ನಡೆದಿರುವಾಗಲೇ ನಿಮ್ಮ ಕೈ ತಾನೇ ತಾನಾಗಿ ಒಳಕಿಸೆಗೆ ಹೋಗುತ್ತದೆ. ನಿಮ್ಮಲ್ಲಿ ತಿರುಗಿ ನಿಮ್ಮ ಊರು ಮುಟ್ಟಲು ಬಿಡಿ ಕಾಸುಗಳೇನಾದರೂ ಇವೆಯೇ ಇಲ್ಲವೋ ಎಂದು ನೋಡಲು. ಇಂತಹ ಅವಸ್ಥೆಯಲ್ಲಿಯೇ ನೀವೂ ಬೆವರು ಸುರಿಸುತ್ತ ನಿಮ್ಮ ಭಾಷಣ ಮುಗಿಸುತ್ತೀರಿ. ಏನೋ ಮಾಡಿ ಹೇಗೋ ನಿಮ್ಮ ಊರಿಗೆ ತಲುಪುತ್ತೀರಿ,

ಯಾರದೋ ಸಹಾಯದಿಂದ. ಒಂದು ಕ್ಷಣ ಏನು ಕ್ಷುದ್ರ ಈ ಕೀರ್ತಿ-ಕಾಮನೆ! ಎನಿಸುತ್ತದೆ. 'ಹೆಸರು-ಹಡಗಗಳೆಷ್ಟೋ ತೇಲುತಿಹವು' ನಿಜ. ಎಲ್ಲ ಹಡಗಗಳ ಹೆಸರನ್ನು ಯಾರು ನೆನಪಿಡಬೇಕು?

ಇನ್ನೊಂದು ವಿಧದ ಆಮಂತ್ರಕರಿದ್ದಾರೆ. ಅವರು ಯಂತ್ರದ 'spare-part' ಇಟ್ಟ ಹಾಗೆ, ಒಬ್ಬರು ತಪ್ಪಿದರೆ ಇನ್ನೊಬ್ಬರಿರಲಿ ಎಂದು ಒಂದೇ ದಿವಸಕ್ಕೆ ಇಬ್ಬರನ್ನು ಆಮಂತ್ರಿಸುತ್ತಿರುತ್ತಾರೆ. ಎರಡೂ ಇಂಜನ್ ಎದುರು ಬಂದು ನಿಂತಾಗ ಅವರಿಗೆ ಸ್ವಲ್ಪ ತೊಂದರೆ. ಆದರೆ ಅವರೂ ಘಟಾನುಘಟಿಗಳು. ಹೀಗೆ ಪ್ರಸಂಗ ಬಂದಾಗ ಆದರಲ್ಲಿಯೇ ಅವರವರ ಯೋಗ್ಯತೆ, ಸ್ಥಾನ, ಮಾನ, ವಯಸ್ಸು ಅಥವಾ ಆಢ್ಯತೆ-ಇವುಗಳ ಮೇಲಿಂದ ಒಬ್ಬನನ್ನು ಅಧ್ಯಕ್ಷನನ್ನಾಗಿಯೂ ಇನ್ನೊಬ್ಬನನ್ನು ಮುಖ್ಯ ಭಾಷಣಕಾರನನ್ನಾಗಿಯೂ ಪರಿವರ್ತಿಸಿ ಕೆಲಸವನ್ನು ಸಾಗಿಸುತ್ತಾರೆ. ಸಭೆ ಮುಗಿದ ಕೂಡಲೆ ನಿಮ್ಮ ಪಾಡಿಗೆ ನಿಮ್ಮ ಕೈ ಬಿಟ್ಟುಬಿಡುತ್ತಾರೆ, ಏನೂ ಸಂಬಂಧವಿಲ್ಲದವರಂತೆ. ತಾತ್ಪರ್ಯವೇನೆಂದರೆ ಯಾರಾದರೂ ನಿಮ್ಮನ್ನು ಭಾಷಣಕ್ಕೆ ಕರೆದಾಗ ಎಂಟು-ಹತ್ತು ರೂಪಾಯಿ ನಿಮ್ಮದಲ್ಲಾ ಎಂದು ಕಿಸೆಯಲ್ಲಿ 'spare' ಇಟ್ಟಿರುವುದು ಯಾವಾಗಲೂ ಜಾಣತನದ್ದಲ್ಲದಿದ್ದರೂ ವ್ಯಾವಹಾರಿಕ ಲಕ್ಷಣ.

ಅದೇನೇ ಇದ್ದರೂ, ನನ್ನ ಜಿಹ್ವಾಶಕ್ತಿ ನನ್ನ ಬತ್ತಳಿಕೆಯಲ್ಲಿದ್ದ ಬ್ರಹ್ಮಾಸ್ತ್ರ. "ಬಳಸಿಕೊಂಡೇವದನು ನಾವು ಅದಕು ಇದಕು ಎದಕು." ನನ್ನ ವಾಕ್‌ಶಕ್ತಿ ನನ್ನ ಜೀವನಸಿದ್ಧಿಯ ಪರಮ ಸಾಧನೆ. ಆಧುನಿಕ ಜಗತ್ತಿನ ಮಹಾವಾಗ್ಮಿಯಾದ ಸರ್ ವಿನ್‌ಸ್ಟನ್ ಚರ್ಚಿಲ್‌ನ ಬಗ್ಗೆ ಹೇಳಿದ ಹಾಗೆ, ನಾನೂ ನನ್ನ ಬಗ್ಗೆ I spoke my way to fame and victory ಎಂದು ಹೇಳಬಹುದು. ಚರ್ಚಿಲ್‌ನ ಭಾಷಣದ ಬಗ್ಗೆ ಹೇಳುವಾಗ ಪ್ರೊ. ಸಿ.ಡಿ. ನರಸಿಂಹಯ್ಯ ಅವರು "Churchill's speeches have the march and speed, the flash and thud the rumble and crash of a cavalry display with its traditional gaiety of lance and pennant." ಎಂದು ಹೇಳಿದರು. ನನ್ನ ಭಾಷಣಗಳೆಂದರೂ ಹೀಗೆಯೇ. ಅಲ್ಲಿ ಮಹಾಭಾರತದ ಕುರುಕ್ಷೇತ್ರದ "ಕಹಳೆ, ಹರೆ, ಕೊಂಬು"ಗಳನ್ನು ಕೇಳಬಹುದು. ನಗಾರಿ ನೌಬತ್ತುಗಳನ್ನು ಆಲಿಸಬಹುದು. ಧ್ವಜ ಪತಾಕೆಗಳ ಮೆರವಣಿಗೆಯನ್ನು ಕಾಣಬಹುದು.

ನಮ್ಮಂಥ ಭಾಷಣಕಾರರಿಗೆ ಮಾತನಾಡಿ ಮಾತನಾಡಿ ಮನೆಯ ಮಕ್ಕಳೂ ಸಹ ಶ್ರೋತೃವೃಂದವೆಂದೇ ಭಾವನೆಯಾಗುತ್ತದೆ. ಕೇಳುವವರು ಸಿಕ್ಕರೆ ಸಾಕು, ಹೇಳುವದನ್ನು

ತಡೆಯುವಂತಿಲ್ಲ, ನಮಗೆ audienceಏ ಬೇಕೆಂದೇನೂ ಇಲ್ಲ, audien ಸಿಕ್ಕರೂ ಸಾಕು. ಇದನ್ನರಿತೇ, ನಮ್ಮ ಮನೆಯವರು ನನಗೆ ಊಟಕ್ಕೆ ನೀಡುವಾಗ, ಒಂದೊಂದೇ ವಾಕ್ಯದ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ-ಅನ್ನ ಬೇಕು, ಸಾರು ಬೇಕು, ಪಲ್ಯ ಸಾಕು - ಇತ್ಯಾದಿ. ಅವರಿಗೆ ಗೊತ್ತಿದೆ. ಇದನ್ನು ದಾಟಿ, ನಾನು ಎರಡನೆಯ ವಾಕ್ಯದಲ್ಲಿ ಕಾಲಿಟ್ಟೆನೋ, ಮಾತು ನಿಂತು ಭಾಷಣ ಪ್ರಾರಂಭವಾಗುತ್ತದೆಂದು. ಅಲ್ಲಿಂದ ಎದುರಿಗಿದ್ದ ಪಾತ್ರೆಪಡಿಗಗಳೆಲ್ಲ ಭಾಷಣ ಮುಗ್ಧವಾಗಿ ಮೌನವಾಗಿಯೇ ಇರಬೇಕು. Studies form character ಎಂದು ಇಂಗ್ಲಿಷದಲ್ಲಿ ಹೇಳುವದುಂಟು. ಅದಕ್ಕೇ ಏನೋ ನಾನು ಅಡುಗೆ ಮನೆಯಲ್ಲಿ ಅಡುಗೆ ನೀಡುವ ನಮ್ಮ ಮನೆಯವರನ್ನು ಅನೇಕ ಸಲ ಭಾಷಣ ಕೇಳಲು ಬಂದ ಶ್ರೋತೃವೃಂದದಲ್ಲಿ ಒಬ್ಬರೆಂದು ಮರೆತು ಭಾವಿಸಿ ಬಿಟ್ಟಿದ್ದೇನೆ. ಇಂಗ್ಲಂಡಿನ ಸುಪ್ರಸಿದ್ಧ ಪ್ರಧಾನಮಂತ್ರಿಗಳೂ ಮುತ್ಸದ್ದಿಗಳೂ ಆಗಿದ್ದ William Gladstone ಅವರ ಬಗ್ಗೆ ಇದ್ದ ರಾಣಿ ವಿಕ್ಟೋರಿಯಾ ಅವರ ತಕರಾರೆಂದರೆ ಒಂದೇ - ಗ್ಲ್ಯಾಡ್‌ಸ್ಟನ್ ತಮ್ಮ ಕೂಡ ಮಾತನಾಡುವಾಗ ರಾಣಿಯೊಡನೆ ಮಾತನಾಡುತ್ತಿದ್ದೇನೆಂಬ ಪ್ರಜ್ಞೆಯನ್ನೇ ಕಳೆದುಕೊಳ್ಳುತ್ತಾರೆಂದು. ಅಂತಲೇ Gladstoneರ ಬಗ್ಗೆ "He addressed the Queen as if she were a public meeting" ಎಂದು ಹೇಳುತ್ತಾರೆ... ಸರ್ ವಿನ್ಸಟನ್ ಚರ್ಚಿಲ್‌ರು ಸ್ನಾನಗೃಹಕ್ಕೆ ಹೋಗಿ ಬಾಗಿಲು ಹಾಕಿಕೊಂಡಾಕ್ಷಣವೇ ಭಾಷಣಕ್ಕೆ ಪ್ರಾರಂಭ ಮಾಡುತ್ತಿದ್ದರಂತೆ. ಅವರ ಪರಿಚಾರಕನಾಗಿ ನಿಯಮಿಸಲ್ಪಟ್ಟಿದ್ದ Norman MacGowan ಒಂದು ಸಲ ಗಾಬರಿಗಿಟ್ಟುಕೊಂಡನಂತೆ. ಚರ್ಚಿಲ್‌ರ ಸ್ನಾನ ವ್ಯವಸ್ಥೆಯನ್ನು ಮಾಡಿ ಅವರನ್ನು ಸ್ನಾನಗೃಹಕ್ಕೆ ಕಳಿಸಿದ ಕೂಡಲೇ, ಚರ್ಚಿಲ್‌ರು ಬಾಗಿಲು ಹಾಕಿಕೊಂಡು ಭಾಷಣ ಪ್ರಾರಂಭಿಸಿದರಂತೆ, ಪಾಪ; ಅದೇ ಹೊಸದಾಗಿ ನಿಯಮಿಸಲ್ಪಟ್ಟಿದ್ದ Norman-ಬಾಗಿಲು ತಟ್ಟಿ -

"Do you want me Sir?" ಎಂದು ಕೇಳಿದನಂತೆ. ಅದಕ್ಕೆ ಚರ್ಚಿಲ್‌ರು :

"I was not talking to you Norman; I was addressing the House of Commons" ಎಂದು ಹೇಳಿದರಂತೆ. ಚರ್ಚಿಲ್‌ರ ಸ್ನಾನ ಗೃಹದಲ್ಲಿ House of Commons ಇದೆಯೆಂದು ಪಾಪ Normanನಿಗೇನು ಗೊತ್ತು! ಚರ್ಚಿಲ್‌ರ ಅನೇಕ ಸುಪ್ರಸಿದ್ಧ ಭಾಷಣಗಳು ರೂಪಗೊಂಡದ್ದು ಅವರು ಸ್ನಾನಗೃಹದಲ್ಲಿದ್ದಾಗಲೇ.

ಅನೇಕ ಸಲ ನಮ್ಮ ಭಾಷಣಗಳ ಪ್ರಭಾವವೂ ಉಜ್ವಲವಾಗಿರುತ್ತದೆ. ಬರ್ಕ್ ಸುಪ್ರಸಿದ್ಧ ಭಾಷಣಕಾರ; ವಾಗ್ಮಿ. ಜಗತ್ತಿನ ಹಲವೇ ವಾಗ್ವಲ್ಲಭರಲ್ಲಿ ಅವನೊಬ್ಬ ಆದರೆ, ಅನೇಕ ಸಲ ಭಾಷಣದಲ್ಲಿ ಅವನು ಯಾವುದನ್ನು ಸಾಧಿಸಬೇಕೆಂದು ಹೊರಟಿದ್ದನೋ, ಆದರ ವಿರುದ್ಧವೇ ಆಗುತ್ತಿತ್ತು. ಬ್ರಿಟಿಶ್ ಪಾರ್ಲಿಮೆಂಟಿನಲ್ಲಿ ಬರ್ಕ್ ಮಾತನಾಡಲು ಎದ್ದ ಕ್ಷಣವೇ ಜನವೆಲ್ಲ ಒಬ್ಬೊಬ್ಬರಾಗಿ ಊಟಕ್ಕೇಳುತ್ತಿದ್ದರಂತೆ. ಅವರಿಗೆ ಗೊತ್ತು ತಾವು ಊಟ ಮುಗಿಸಿ ಬರುವವರೆಗೂ ಬರ್ಕನ ಭಾಷಣ ನಡೆದೇ ಇರುತ್ತದೆಂದು. ಅಂತಲೇ ಅವನನ್ನು Dinnerbell of the House of Commons ಎಂದು ಕರೆಯುತ್ತಿದ್ದರಂತೆ.

***Too deep for his hearers***
***He went on refining,***
***He thought of convincing***
***And they thought of dining.***

ನನ್ನ ಮಿತ್ರರೊಬ್ಬರ ಗತಿಯೂ ಒಂದು ಸಲ ಹೀಗೇ ಆಯಿತು. ಒಂದು ಸಲ ಅವರು ಬೆಳಗಾವಿಯಲ್ಲಿ ಅಮೋಘವಾದ ಭಾಷಣ ಮಾಡಿದರು. ಅದು ನಿಜವಾಗಿಯೂ ಪರಿಣಾಮಕಾರಿಯಾಯಿತು. ಪಾಪ, ಒಂದು ದೊಡ್ಡ ಕಾಲೇಜಿನ ಪ್ರಿನ್ಸಿಪಾಲರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದಾರೆಂದು, ಯಜಮಾನರ ಮನೆಯವರು ಅಂದಿನ ಸಂಜೆಯ ಅಡಿಗೆಯನ್ನು ರಾಜಾರೋಷವಾಗಿ ತಯಾರು ಮಾಡಿದ್ದರು - ಹಪ್ಪಳ, ಸಂಡಿಗೆ, ಹೋಳಿಗೆ - ಎಲ್ಲಾ ಸಿದ್ಧಮಾಡಿ ಪಾಪ ಅವರಿಗೆ ಸರಿಯಾದ ಮನ್ನಣೆ ತೋರಬೇಕೆಂದು. ಆದರೆ, ದುರ್ದೈವಕ್ಕೆ, ಅಂದಿನ ಸಂಜೆ, ಭಾಷಣ ಮಾಡುತ್ತ ಮಾಡುತ್ತ ನಮ್ಮ ಮಿತ್ರರು ಊಟ-ಉಪಹಾರಗಳ ಮಾತೆತ್ತಿದರು. ಮಾತಿನಲ್ಲಿ ಅವರು ಒಳ್ಳೇ ಜೋರಾಗಿ "ನಮ್ಮ ಭಾರತೀಯ ಊಟದ ಪದ್ಧತಿ ತುಂಬಾ ಬದಲಾಗಬೇಕು. ನಾವು ತಿನ್ನುವುದು ತುಂಬಾ ಜಡವಿರುತ್ತದೆ; ಘಾತುಕವಿರುತ್ತದೆ. ಈಗ ನಮ್ಮ ಹೋಳಿಗೆಯನ್ನೇ ತೆಗೆದುಕೊಳ್ಳಿರಿ. ಅದರಲ್ಲಿ ಪಚನ ಮಾಡಿಕೊಳ್ಳಲಿಕ್ಕೆ ಎಷ್ಟು ಕಠಿಣ ಸಾಮಾನುಗಳು ಬೇಕೋ ಅಷ್ಟೆಲ್ಲಾ ಸೇರಿವೆ. ಗೋದಿ, ಬೆಲ್ಲ, ಕಡಲೆ, ತುಪ್ಪ-ಛೇ ಇಂಥ ಆಹಾರ ಎಂದೂ ತಿನ್ನಬಾರದು. ಒಂದೊಂದು ಹೋಳಿಗೆ ತಿಂದರೆ ಒಂದೊಂದು ವರುಷ ಆಯುಷ್ಯ ಕಡಿಮೆ..." ಭಾಷಣ ಅಮೋಘವಾಗಿದ್ದಿತು. ಪರಿಣಾಮವೂ ಅಮೋಘವಾಯಿತು. ತಿರುಗಿ ಎಲ್ಲರೂ ಯಜಮಾನರ ಮನೆಗೆ ಬಂದಾಗ, ಮನೆಯವರು ಅರ್ಧ ತಾಸಾದರೂ ಬರಿಯ ಅನ್ನ ಸಾರನ್ನೇ

ನೀಡಹತ್ತಿದರಂತೆ. ಮನೆಯಲ್ಲಿ ಹೋಳಿಗೆ ಮಾಡಿದ್ದಾರೆಂದು ಗೊತ್ತಿದ್ದ ಮನೆಯವರು "ಬರಿಯ ಅನ್ನ ಸಾರೇಕೆ? ಹೋಳಿಗೆ ತೆಗೆದುಕೊಂಡು ಬನ್ನಿರಲ್ಲಾ?" ಎಂದಾಗ ಮನೆಯವರು ಹಿಂದುಮುಂದು ನೋಡಿ :

"ಛೆ, ಹೋಳಿಗೆ ತಿನ್ನಬಾರದೆಂದು ಅತಿಥಿಗಳು ಹೇಳಿದ್ದಾರೆ. ಒಂದೊಂದು ಹೋಳಿಗೆಗೆ ಒಂದೊಂದು ವರುಷ ಆಯುಷ್ಯ ಕಡಿಮೆ." ಎಂದರಂತೆ. ಆಗ ನಮ್ಮ ಭಾಷಣಕಾರ ಮಿತ್ರರೇ "ಹಾಗೇನಲ್ಲ; ಅದು ಸಭೆಯಲ್ಲಿ ಹೇಳಿದ ಮಾತು-ಇತರರಿಗಾಗಿ ಅದು ಸತ್ಯ. ಸದ್ಯ ನನಗೆ ಮಾತ್ರ ಹೋಳಿಗೆ ಹಾಕಿ" ಎಂದರಂತೆ. ನಿಜವಾಗಿಯೂ ಭಾಷಣಗಳ ಪ್ರಭಾವ ಅದ್ಭುತವಾದದ್ದು!

ಅಂದರೇನು? ಇವೆಲ್ಲವುಗಳಿಂದ ನಾನು ಭಾಷಣಕ್ಕೆ ಹೋಗುವುದನ್ನೇ ಬಿಟ್ಟಿದ್ದೇನೆಂದು ತಿಳಿದಿದ್ದೀರಾ? ಛೇ; ಆಗದು. "ಕುರ್ವನ್ನೇವೇಹ ಕರ್ಮಾಣಿ ಜಿಜೀವಿಶೇತ್ ಶತಂ ಸಮಾಃ". ಅದು ನಮ್ಮ ಭಾರತೀಯ ಸಂಸ್ಕೃತಿಯ ಲಕ್ಷಣ. ಭಾಷಣಸನ್ಯಾಸ ತೆಗೆದುಕೊಳ್ಳಲು ನನಗೇನು ಹಲ್ಲು ಬಿದ್ದಿವೆಯೇ? ಏನೆಂದಿರಿ? ಮೊದಲಿನ ಉತ್ಸಾಹವಿಲ್ಲವೆಂದೆ? ಹೂಂ, ಉತ್ಸಾಹವೆನ್ನುವುದಕ್ಕಿಂತ ಆವೇಶ-ಭಾವನೆ ಇಲ್ಲವೆನ್ನಿರಿ. ಈಗ ಆವೇಶ-ಭಾವನೆ ಅಳಿದು ಬುದ್ಧಿಯ ಪುನರ್ಜನ್ಮವಾಗಿದೆ. ಯಾರು, ಹೇಗೆ ಎಂಬ ಅವ್ಯಕ್ತ ಅಜ್ಞಾತದ ಬದಲು ಈಗ ನನ್ನ ಬುದ್ಧಿ ಸಾಕ್ಷಿಪುರುಷನ ರೂಪದಲ್ಲಿ ಕುಳಿತು ಭಾಷಣದ ವೇಳೆಯಲ್ಲಿ ಇವರು ಹೀಗೆ ಹೀಗೆ ಎಂದು ಪೃಥಕ್ಕರಿಸ ಹತ್ತುತ್ತದೆ. ನಾನು ಈ ವರೆಗೆ ಹೇಳಿದ ವರ್ಗಗಳಲ್ಲಿ ಯಾವ ವರ್ಗಕ್ಕೆ ಇವರು ಸೇರುತ್ತಾರೆ ಎಂಬುದನ್ನು ಗೊತ್ತುಮಾಡಿ ಆ ಪೆಟ್ಟಿಗೆಯಲ್ಲಿ ಅವರನ್ನು ಹಾಕಲು ಹವಣಿಸುತ್ತದೆ. ಇದರಲ್ಲಿ ಆವೇಗವಿಲ್ಲ; ಉದ್ವೇಗವಿಲ್ಲ; ಕೇವಲ ಅನುಭವಜನ್ಯ ಬುದ್ಧಿಶಕ್ತಿ-ತಿಳಿಯಾದ, ಶೀತಲವಾದ ಬುದ್ಧಿಶಕ್ತಿ-ಮಾತ್ರ ಕಾರ್ಯ ನಡೆಸುತ್ತದೆ.

## ಮೂಢನಂಬಿಕೆಗಳು

*"The forms change : but the substance remains"*
*- Aldous Huxley*

ಮನುಷ್ಯ ಸರಿಸಮಾನರನ್ನು ಹಳಿಯಲು ಸಾಧ್ಯವಿಲ್ಲದಾಗ, ಸತ್ತವರನ್ನು ಹಳಿದೇ ತನ್ನ ಅಹಂಕಾರವನ್ನು ಪೂರೈಸಿಕೊಳ್ಳಬೇಕು. ಸಮಕಾಲೀನರ ಬಗ್ಗೆ ಬೆರಳೆತ್ತದಿದ್ದ ಹೆಂಬೇಡಿ ಪ್ರಾಚೀನ ಅಜ್ಜಂದಿರನ್ನು ಹಳಿದೇ ತನ್ನ ಪೌರುಷವನ್ನು ಪ್ರದರ್ಶಿಸ ಬೇಕಲ್ಲವೇ...? "Kill that infamous wretch" ಎಂದು ಮೂಢನಂಬಿಕೆಗಳ ಬಗ್ಗೆ ಶಾಪವೆತ್ತಿದ Voltaire ಸತ್ತ; ಆದರೆ, ಮೂಢನಂಬಿಕೆ ಉಳಿದವು. ನಿಜವಾಗಿ ಹೇಳಿರಿ ನಮ್ಮ ಪ್ರಾಚೀನ ಸೊತ್ತಾದ ಮೂಢನಂಬಿಕೆಗಳಲ್ಲಿ ವಿಶ್ವಾಸವಿಲ್ಲದವರು ಈ ಪ್ರಪಂಚದಲ್ಲಿ ಯಾರಿದ್ದಾರೆ? ಕನ್ನಡಿಯ ಮುಂದೆ ನಿಂತವರು ಹಲ್ಲುಕಿರಿಯದೆ ಬಿಟ್ಟಾರೇ? ಜ್ಯೋತಿಷಿಯನ್ನು ಕಂಡಾಗ ಹಿಂದುಮುಂದು ನೋಡಿಯಾದರೂ ಕೈಚಾಚದವರಿದ್ದಾರೆಯೇ? ಮೂಢನಂಬಿಕೆ ನಮ್ಮ ಹಿರಿಯರು ನಮಗೆ ಬಳುವಳಿಯಾಗಿ

ಕೊಟ್ಟ ದೊಡ್ಡ ಆಸ್ತಿ; ಅದು ನಮ್ಮ ಜೀವನದ ಹಾಸು-ಹೊಕ್ಕು; ನಮ್ಮ ಪ್ರಾಚೀನರ ಜ್ಞಾನಸುಧೆ; ಜೀವನದಾಯಿಯಾದ ಕಾಂತಾ ಸಮ್ಮಿತಿ; ಭಾವಜೀವಿಯ ಅಭಯಹಸ್ತ; ಸಂಸ್ಕೃತ ಹೃದಯದ ಪರಿಪಕ್ವತೆ; ಮಾನವ್ಯದ ಪಕ್ವತೆಯ ಹೆಗ್ಗುರುತು; ಕಾವ್ಯದ ನೆಲೆಗಟ್ಟು. ಇದಕ್ಕೂ ಹೆಚ್ಚಿಗೆ ಏನು ಬೇಕು? ಸಾವನ್ನು ಮೀರಿದವರು ಯಾರಿದ್ದಾರೆ? ಮೂಢನಂಬಿಕೆಗಳನ್ನು ಕಳಚಿದವರು ಯಾರಿದ್ದಾರೆ? ಸುಮ್ಮನೆ ಯಾತಕ್ಕೆ ಈ ಬರಿಯ ಮಾತಿನ ಜಂಭ! ವ್ಯರ್ಥ ಜಲ್ಪನೆ!! ಎಂತೆಂಥ ವೀರಾಧಿವೀರರು ಇದರ ಜಾಜ್ವಲ್ಯ ಮಾನವಾದ ಪ್ರಖರ ಪ್ರಕಾಶದಲ್ಲಿ ನಡೆದಿದ್ದಾರೆಂಬುದನ್ನು ನೆನೆದರೆ, ನಮ್ಮ ಪೌರುಷ ಇಲಿಯ ಬಾಲದ ಹಾಗೆ ಮುದುಡಿಕೊಂಡೀತು! ಯಾರೋ ಒಂದು ಸಲ ಡಾ. ಜಾನ್ಸನ್ ಅವರನ್ನು ಕೇಳಿದರಂತೆ "ಜಾನ್ಸನ್‌ರೇ, ದೆವ್ವಗಳ ಬಗ್ಗೆ ನಿಮ್ಮ ಅಭಿಪ್ರಾಯ ವೇನು?" ಎಂದು. ಆಗ ಅವರು ಹೇಳಿದರಂತೆ "All argument is against it and all belief for it" ದೆವ್ವಗಳ ಈ ಮಾತೇ ಮೂಢನಂಬಿಕೆಗಳಿಗೂ ಅನ್ವಯಿಸುತ್ತಿದೆ. ಯಾಕೆ ಸುಮ್ಮನೆ ಪೌರುಷ ರೋಮ್ ಚಕ್ರಾಧಿಪತ್ಯದ ಏಕೈಕ ವೀರರು ಸೀಜರ್, ಪಾಂಪಿ, ಕ್ಯಾಶಿಯಸ್-ಮೂರುಲೋಕದ ಗಂಡ ಚಂಡ-ಪ್ರಚಂಡ ವೀರಾಧಿ ವೀರ ದೊರೆ ಅಲೆಕ್ಸಾಂಡರ್-ವಾಣೀವಲ್ಲಭ ರೋಮೀಯ ಸಿಸಿರೋ-ಇನ್ನೂ ಎಷ್ಟು ಹೆಸರು ಬೇಕು ಹೇಳಿರಿ. ಇಂಥವರ ಶೌರ್ಯದ ಎದುರಿಗೆ ಹುಲುಮಾನವರಾದ ನಿವೇಲ್ಲಿ? "ಕಲಿಗಳಿವರಿಂತು ನಿಷ್ಠೆಯನಿಟ್ಟಿರಲು, ನಿನ್ನ ಹವಣೆಷ್ಟೊ ಪ್ರಾಣೀ." ಗೊತ್ತಿಲ್ಲವೇ ನಿಮಗೆ, ಸೀಜರ ತನ್ನ ಕನಸಿನಲ್ಲಿ ಕಂಡ ಚಿತ್ರ, ರೋಮದ ಕ್ಯಾಪಿಟಲದಲ್ಲೆಲ್ಲ ಸಿಂಹಗಳು ಓಡಾಡುತ್ತಿರುವುದು, ಅಲ್ಲಿ ರಕ್ತ ಹರಿಯುತ್ತಿರುವುದು, ಜನ ಬಂದು ಆ ರಕ್ತದಲ್ಲಿ ಪಾನ ಮಾಡುತ್ತಿರುವುದು - ಅಂತಲೇ ಸೀಜರ್ ಕಿರೀಟ ಸಮಾರಂಭಕ್ಕೆ ಹೋಗಬಾರದೆಂದು ಬಯಸಿದ್ದು, ಅವನ ಹೆಂಡತಿ ಹಾಗೆ ಹೇಳಿಯೂ ಕಳಿಸಿದ್ದಳು. ಆದರೆ ನಿಮ್ಮಂಥ ಅವಿವೇಕ "ಬುದ್ಧಿವಂತರು" ಉಪದೇಶಿಸಿದ್ದರ ಮೂಲಕವಾಗಿಯೇ, ಸೀಜರ್ ಮೂಢನಂಬಿಕೆಗಳ ವಜ್ರಕವಚವನ್ನು ಕಳಚಿ ಕಿರೀಟ ಸಮಾರಂಭಕ್ಕೆ ಹೋದ; ಅಲ್ಲಿ ಆದದ್ದೇನು? ನಿಮಗೆ ಗೊತ್ತೇ ಇದೆ. ಮುತ್ತುಗದ ಮರ ಉರುಳಿದ ಹಾಗೆ ಸೀಜರ್ ಕ್ಯಾಪಿಟಲ್‌ದಿಂದ ಧುಡಂ ಎಂದು ಉರುಳಿಬಿದ್ದ. ನೀವು ಬದುಕಬೇಕೆಂದು ಆಶೆ ಇದ್ದರೆ, ಸರ್ವಥಾ ನಿಮ್ಮ ಮೂಢನಂಬಿಕೆಗಳನ್ನು ಬಿಡಬೇಡಿರಿ. ಅದು ನಿಮ್ಮ ಜೀವನದ ವಜ್ರಕವಚ - ನಿಮ್ಮ ಜೀವನಾಧಾರ. ನೀವು ಮೂಢನಂಬಿಕೆ ಬಿಟ್ಟಿರೋ, ಇಂದೇ ಸತ್ತಂತೆ. ಹೋಗಲಿ, ಪಾಂಪಿ ಏನು ಮಾಡಿದ ಗೊತ್ತೇ? ಅವನು ಮೂಢಾರಾಧಕನಿದ್ದಷ್ಟೇ (ಮೂಢನಂಬಿಕೆ Short form ಮಾಡೋಣ) ಬುದ್ಧಿವಂತನೂ

ಇದ್ದ. ಆಕಾಶದಲ್ಲಿ ಗುಡುಗು ಮೊಳಗಿದ ಕೂಡಲೇ, ರೋಮೀಯರು ಯಾವ ಕೆಲಸವನ್ನೂ ಮಾಡದೇ ಸುಮ್ಮನಿರುವರೆಂದು ಅವನಿಗೆ ಗೊತ್ತಿತ್ತು. ಅದಕ್ಕೆಂದೇ ಒಂದು ಸಲ ಅವನು ಹೀಗೆ ಮಾಡಿದ. ಅವನ ಮೂಢನಂಬಿಕೆ ಅವನಿಗೆ ಬಾರದ ಕ್ಯಾಟೋನನ್ನು ಸೈನ್ಯಾಧಿಕಾರಿಯನ್ನಾಗಿ ರೋಮೀಯರು ಚುನಾಯಿಸಲಿದ್ದಾರೆಂದು ಕಂಡಕೂಡಲೇ, ಪಾಂಪಿ ಮೊಳಗಿದ-ತಾನು ಆಕಾಶದಲ್ಲಿ ಗುಡುಗಿನ ಸಪ್ಪಳ ಕೇಳಿದನೆಂದು. ತತ್‌ಕ್ಷಣ ಯಾವ ಕೆಲಸವನ್ನೂ ಕೈಕೊಳ್ಳದೆ ರೋಮೀಯರು ಪಲಾಯನ ಪಠಿಸಿದರು. ಮೂಢನಂಬಿಕೆಯ ಈ ಹಿಡಿತ ಪಾಂಪಿಗೆ ಗೊತ್ತಿರದಿದ್ದರೆ ಏನಾಗುತ್ತಿತ್ತು ಗೊತ್ತೇ? ವಾಚ್ಯ ಯಾಕೆ ಬೇಕು? ಹೋಗಲಿ ಚಂಡವಿಕ್ರಮ ಅಲೆಕ್ಸಾಂಡರ್ ಇಪ್ಪತ್ನಾಲ್ಕು ವರುಷದವನಿದ್ದಾಗಲೇ ಅಖಂಡ ಪ್ರಪಂಚವನ್ನೆಲ್ಲ ಗೆದ್ದು ಇನ್ನು ಮುಂದು ಗೆಲ್ಲಲು ಜಗತ್ತಿನ ಭೂಭಾಗ ಉಳಿಯಲಿಲ್ಲವಲ್ಲಾ ಎಂದು ಒಂದೇಸವನೆ ಧ್ವನಿ ತೆಗೆದು ಅತ್ತ. ಆದರೆ ನಿಮಗೆ ಗೊತ್ತೇ ಅಲೆಕ್ಸಾಂಡರನ ಸುತ್ತು ಸೈನಿಕರಿದ್ದಷ್ಟೇ ಜೋಯಿಸರೂ ಇದ್ದರೆಂಬುದು. ಅಲೆಕ್ಸಾಂಡರನ ಈ ಶೌರ್ಯದ ಗುಟ್ಟು ಇದ್ದುದು ಅವನ ಈ ಜ್ಯೋತಿಷ್ಯರ ತಂಡದಲ್ಲಿ, ಇದು ಅವನಿಗೆ ಗೊತ್ತಿತ್ತು. ಅಂತಲೇ ಅಲೆಕ್ಸಾಂಡರ್ ಲೋಕೈಕ ವೀರನಾದ. ನೀವು? ಹೋಗಲಿ ಬಿಡಿ; ಯಾಕೆ ಪ್ರತಿಸಲ ನಿಮ್ಮ ಕಣ್ಣಲ್ಲಿ ಬೊಟ್ಟು ಚುಚ್ಚುವುದು?.... ಸಿಸಿರೊ ಏನು ದಡ್ಡನೇ? ಬುದ್ಧಿವಂತ! ಅವನು ಮಾತನಾಡಿದರೆ ಮುತ್ತು ಉದುರುತ್ತಿದ್ದವು. ಗುಡುಗು ಸಿಡಿಲು ಮೊಳಗುತ್ತಿದ್ದವು. ಮಾನವ್ಯಕ್ಕೆ ಭಾಷಣದ ನಾಲಗೆ ಮೊದಲಿಗೆ ಕೊಟ್ಟವ ಸಿಸಿರೋ. ಅವನ ನಾಲಗೆ "ವಿದ್ಯಾನಟೀ ನಾಟ್ಯವೇದೀಕಲ್ಪ". ಆದರೆ ಸಿಸಿರೋನನ್ನು ಕಾಗೆ ಕೊಂದಿತು. ಹೇಗೆಂದು ಕೇಳುತ್ತೀರಾ? ಜ್ಯೂಲಿಯಸ್ ಸೀಜರನ ಮರಣಾನಂತರ, ಎಂಟೂನಿ ಮತ್ತು ಅಗಸ್ಟಸ್ ಸೀಝರ್ ಸಿಸಿರೋನನ್ನು ಕೊಂದು ಹಾಕಲು ಬೆನ್ನಟ್ಟಿದರು. ಸಿಸಿರೋ ರಣಾಂಗಣದಿಂದ ಓಡಿದ. ಅಂತೂ ಪಾರಾದ. ಪಾರಾಗಿ ಸಮುದ್ರದಡಕ್ಕೆ ಬಂದ. ಬಂದು ನಾವೆ ಹತ್ತಿ ಮುನ್ನುಗ್ಗಿದ. ಇನ್ನೇನು ನಾಲ್ಕು ಕ್ಷಣ-ವೈರಿಗಳೆಲ್ಲೋ ತಾನೆಲ್ಲೋ! ಅಷ್ಟರಲ್ಲಿಯೇ ಅವನ ನಾವೆಯ ಸುತ್ತಲೂ ಹತ್ತಾರು ಕಾಗೆಗಳು ಪ್ರದಕ್ಷಿಣೆ ಹಾಕುತ್ತಿರುವದನ್ನು ಕಂಡ. ಕಾಗೆ ನಾವೆಯ ಸುತ್ತಲೂ ಪ್ರದಕ್ಷಿಣೆ ಹಾಕುವುದು ಅಶುಭ ಸೂಚಕವೆಂದು ರೋಮ್ ಪರಂಪರೆ ಅವರಿಗೆ ಹೇಳಿತ್ತು. ನಾವೆ ತಿರುಗಿಸಿದ, ದಡಕ್ಕೆ ಬಂದ. ಅಷ್ಟರಲ್ಲಿಯೇ ಸಮುದ್ರದ ತೀರಕ್ಕೆ ಬಂದಿದ್ದ ವೈರಿಗಳು ಸಿಸಿರೋನ ರುಂಡವನ್ನು ಹಾರಿಸಿದರು. ವೈರಿಗಳು ಸಿಸಿರೋನನ್ನು ಕೊಲ್ಲಲಿಲ್ಲ; ಕಾಗೆ ಅವನನ್ನು ಕೊಂದವು.... ಹಾಂ- ತಡೆಯಿರಿ; ನುಗ್ಗ ಬೇಡಿರಿ. ನಿಮ್ಮ ಆಕ್ಷೇಪಣೆ ಅರ್ಥವಾಯಿತು. ಏನು "ಸಾಯಲು ಮೂಢನಂಬಿಕೆ ಗಳಲ್ಲಿ ವಿಶ್ವಾಸವಿಡಬೇಕೇ?"

ಎಂದು ಕೇಳಬೇಡಿರಿ. ಇಲ್ಲಿ ಸಿಸಿರೋ ಸತ್ತದ್ದು ಮಹತ್ವವಲ್ಲ; ಸಿಸಿರೋನಂಥ-ಜ್ಞಾನಿಗಳೂ ವಾಣೀವಲ್ಲಭರೂ-ನಮ್ಮ ಈ ಮೂಢನಂಬಿಕೆಗಳ ಈ ಆಸ್ತಿಯನ್ನು ಎಷ್ಟು ಜತನವಾಗಿ ಕಾಯ್ದುಕೊಂಡು ಬಂದರೆಂಬುದು ಪ್ರಕೃತ. ಅಥವಾ ನಮ್ಮ ಭಾರತದ ದುಷ್ಯಂತ, ಕಟ್ಟಡವಿಯಲ್ಲಿ ಅವನ ಬಲಭುಜ ಸ್ಫುರಿಸಿತು. ಬಲಭುಜಸ್ಫುರಣ ಸುಖವನ್ನು ತರಲೇಬೇಕು. ಅದು ನಂಬಿಕೆಯ ಶಾಸ್ತ್ರ. ಆಗ ದುಷ್ಯಂತ ಹಾಗೇ ತಿರುಗಿದ್ದರೆ ಅವನಿಗೆ ಶಕುಂತಲೆ ದೊರಕುತ್ತಿದ್ದಳೇ?

ಆದ್ದರಿಂದ "ಕಲಿಗಳಿವರಿಂತು ನಿಷ್ಠೆಯನಿಟ್ಟಿರಲು, ನಿನ್ನ ಮತಿ ಎಷ್ಟಿರದೋ ಎಲೆ ಮೂಢ ಮಾನವಾ". ಮೂಢನಂಬಿಕೆ ನಮ್ಮ ಜೀವನದ ಹಾಸು-ಹೊಕ್ಕು. ಅದು ನಿಜವಾದ ಜ್ಞಾನಸುಧೆ. ಮೂಢನಂಬಿಕೆ ಅನ್ನುವಲ್ಲಿ, ನಿಮಗೆ ನಂಬಿಕೆ ಇರಲಿ, ಬಿಡಲಿ, ಮೂಢ ಅನ್ನುವದಾದರೂ ಏನು? ನೀವೇ ಏನು ಜಗತ್ತಿನ ಬುದ್ಧಿಯ ಮಕ್ತೆ ಹೊತ್ತಿದ್ದೀರಾ? ಎಲ್ಲಿದೆ ನಿಮಗೆ ಬುದ್ಧಿ? ನಮ್ಮ ನಂಬುಗೆ ನಮಗೆ ಏನು ಹೇಳುತ್ತಿದೆ?... ಮನೆಯಲ್ಲಿ ಯಾರಾದರೂ ಅನಾರೋಗ್ಯವಾಗಿದ್ದಾಗ, ರಾತ್ರಿ ನಾಯಿ ಅಳಬಾರದೆಂದು ಒಂದು ನಂಬುಗೆ. ನಾಯಿ ಆ ರೀತಿ ಅತ್ತರೆ, ಊಳಿದರೆ, ಆ ರೋಗಿ, ಸಾಯುತ್ತಾನೆಂದು ಬುದ್ಧಿವಾದ. ಇದರಲ್ಲಿ ಮೂಢವಾದದ್ದೇನಿದೆ? ರಾತ್ರಿ ಅಳುವ ನಾಯಿ ಏನು ಕೋಗಿಲೆ ಹಾಡಿದ ಹಾಗೆ ಹಾಡುತ್ತದೆಯೇ? ರೋಗಿಗೆ ಮೊದಲೇ ಶತಾಯ-ಗತಾಯ ಆಗಿದೆ. ಅದರಲ್ಲಿ ಸತ್ತಾಗ ಸುತ್ತಲಿನವರು ಅಳುವ ಹಾಗೆ, ಸುತ್ತಲೂ ನಾಯಿ ಅಳುವುದು, ಬೆಕ್ಕು ಕಿರಚುವುದು ಇವೆಲ್ಲ ನಡೆದರೆ, ಪಾಪ ರೋಗಿ ಬದುಕಿಯಾನು ಹೇಗೆ? ಅವನ ಮೆದುಳೆಲ್ಲ ಕಿತ್ತು ಬಂದಾವು. ರೋಗಿಯು ಸಾಯುವದೊತ್ತಟ್ಟಿಗಿರಲಿ, ಅಶಕ್ತ ಮನುಷ್ಯನೂ ಈ ಕೀಸರ-ಬಾಸರ ಕೇಳಿ ಸತ್ತಾನು. ಇದರಲ್ಲಿ ಮೂಢವಾದದ್ದು ಹಾಗಾದರೆ ಏನಿದೆ? ಇದನ್ನು ನಂಬದ "ಬುದ್ಧಿವಂತರಾದ" ಬುದ್ಧುಗಳು-ನಾವೇ ಮೂಢರು. ಅಥವಾ ಇಂಗ್ಲಿಷರಲ್ಲಿ ಒಂದು ನಂಬುಗೆ ಇದೆ - ಯಾರೂ ನಿಚ್ಚಣಿಕೆಯ ಬುಡದಲ್ಲಿ ಹಾಯ್ದುಹೋಗಬಾರದೆಂದು. ಇದರಲ್ಲಿ ಮೂಢವಾದದ್ದು ಏನಿದೆ? ನೀವು ನಿಚ್ಚಣಿಕೆಯ ಬುಡದಲ್ಲಿ ಹಾಯ್ದು ಹೋಗುವಾಗ, ಏಣಿಯ ಮೇಲೆ ನಿಂತಿದ್ದ ಕೆಲಸಗಾರರಾರಾದರೂ ಕೈಯಲ್ಲಿಯ ಇಟ್ಟಿಗೆ, ಕಲ್ಲು, ಬುಟ್ಟಿಗಳನ್ನು ನಿಮ್ಮ ಮೇಲೆ ಚೆಲ್ಲಿದರೆ, ಎಲ್ಲಿದ್ದೀತು ನಿಮ್ಮ ಬುದ್ಧಿವಂತ-ಬುದ್ಧು ತಲೆ? ಇದರಲ್ಲಿ ನಿಮಗೆ ವಿಶ್ವಾಸವಿಲ್ಲವೆಂದು ತೋರಲು ನೀವು ಗೋಡೆಗೆ ಹೋಗಿ ತಲೆ ಹಾಯಿಸುವದಿದೆಯೆ? ಯಾಕೆ ನಿಮಗೆ ಈ ಪೌರುಷ? ಬೆಂಕಿಯಲ್ಲಿ ಕಾಲಿಟ್ಟರೆ, ಕಾಲು ಸುಡುವುದೆಂದು ಹೇಳುವ ಬುದ್ಧಿವಾದಕ್ಕೂ ಇದಕ್ಕೂ ಏನಿದೆ ಅಂತರ? ಆದರೂ

ಮೂಢನಂಬಿಕೆ-! ಅಥವಾ ಇಂಗ್ಲಿಷರಲ್ಲಿ ಇನ್ನೂ ಒಂದು ನಂಬಿಕೆ ಇದೆ. ಪಾವಟಿಗೆಗಳನ್ನು ಎದುರುಬದುರಾಗಿ ಸರಸರನೆ ಹತ್ತಬಾರದೆಂದು. ಹಾಗೆ ಹತ್ತಿದರೆ ಯಾರಾದರೊಬ್ಬರು ಸಾಯುತ್ತಾರೆಂದು. ಹತ್ತುವದೇ ಆದರೆ, ಒಬ್ಬರನ್ನೊಬ್ಬರು ಸಂಧಿಸಿದಾಗ, ಬೆರಳು ಬೆರಳು ಜೋಡಿಸಿ ಇಲ್ಲವೆ ಮಾತಾಡಿ ಮುಂದುಹೋಗಬೇಕೆಂದು. ಇದರಲ್ಲಿಯಾದರೂ ಮೂಢವಾದದ್ದೇನಿದೆ? ಇಕ್ಕಟ್ಟಾದ ಪಾವಟಿಗೆಗಳನ್ನು ಎದುರುಬದುರಾಗಿ ರಭಸದಿಂದ ಹತ್ತುವಾಗ, ಒಬ್ಬರಿಗೊಬ್ಬರು ತಾಕಲಾಡಿ, ಯಾರಾದರೂ ಕೆಳಗೆ ಬಿದ್ದು ಪ್ರಾಣನೀಗಬಹುದೆಂದು ಹೇಳುವದರಲ್ಲಿ ಮೂಢವಾದದ್ದೇನು? ಅಥವಾ ಬೆರಳು ಬೆರಳು ಸೇರಿಸಿ, ಇಲ್ಲವೆ ಮಾತನಾಡಿ ಸಾಗಬೇಕೆಂದಾಗ, ಸ್ವಾಭಾವಿಕವಾಗಿಯೇ ನೀವು ನಿಮ್ಮ ವೇಗಕ್ಕೆ ಬ್ರೆಕ್ ಹಾಕುತ್ತೀರೆಂಬ ಮಾನಸಶಾಸ್ತ್ರದ ಬುದ್ಧಿವಂತಿಕೆಯನ್ನು ಮೆಚ್ಚುವ ಬದಲು ಮೂಢನಂಬಿಕೆಯೆಂದು ಹೆಕ್ಕಳಿಸುವದರಲ್ಲಿ ಅರ್ಥವೇನಿದೆ?... ಅಥವಾ ಇಂಗ್ಲಿಷರಲ್ಲಿ ಇನ್ನೂ ಒಂದು ನಂಬಿಕೆ ಇದೆ. ಮನೆಯ ಕೋಣೆಯಲ್ಲಿದ್ದಾಗ ಛತ್ತರಿಗೆಯನ್ನು ತೆರೆಯಬಾರದೆಂದು. ಇದಕ್ಕಿಂತ ಬುದ್ಧಿವಂತಿಕೆಯ ಮಾತು ಇನ್ನೇನು ಬೇಕು? ಇರುವವೇ ಇಕ್ಕಟ್ಟಾದ ಕೋಣೆಗಳು. ಅವುಗಳಲ್ಲಿ ನೀವು 'ಫಲ್' ಎಂದು ಛತ್ತರಿಗೆಯನ್ನು ಬಿಡಿಸಿಬಿಟ್ಟರೆ, ಮಗ್ಗುಲಿದ್ದವರ ಹಣೆ ಕಟ್ಟು ಗುಡ್ಡೆಗಳ ಗತಿಯೇನು? ಇದರ ಬುದ್ಧಿವಂತಿಕೆ ಸೂರ್ಯಪ್ರಕಾಶದಷ್ಟು ಸ್ಪಷ್ಟ. ಕಣ್ಣಿಗೆ ಕಾಮಾಲೆಯಾದವರಿಗೆ ಯಾರ ಬುದ್ಧಿಯ ಬೆಳಕು ಸರಿಯಾಗಿ ಕಂಡೀತು. ಅಥವಾ ಅವರಲ್ಲಿ ಇನ್ನೂ ಒಂದು ನಂಬಿಕೆಯಿದೆ. ಛತ್ತರಿಗೆಯನ್ನು ಗಾದೆಯ ಮೇಲೆ ಇಟ್ಟುಕೊಂಡು ಮಲಗಬಾರದೆಂದು. ಇದರಲ್ಲಿಯೂ ಮೂಢವಾದದ್ದೇನು? ಮಳೆಯಲ್ಲಿ ತೋಯಿಸಿಕೊಂಡು ಬಂದಿದ್ದರೆ, ಗಾದೆ ತೊಯ್ದೀತು. ಇಲ್ಲವಾದರೆ ರಾತ್ರಿ ಉರುಳಾಡುವಾಗ ಕಡ್ಡಿ ಕಣ್ಣಿಗೆ ಚುಚ್ಚಿಯಾವು. ಅಥವಾ ವಿದೇಶೀಯರ ನಂಬಿಕೆಯೇ ಏಕೆ? ನಮ್ಮಲ್ಲಿಯೂ ಹೇಳುತ್ತಾರೆ. ಸಂಜೆಯಾದ ಮೇಲೆ ಕಸಗುಡಿಸಬಾರದೆಂದು. ಆದರಿಂದ ಲಕ್ಷ್ಮೀ ಹೊರಗೆ ಹೋಗುತ್ತಾಳೆ-ಅಶುಭ ಸೂಚಕವೆಂದು. ಇದಕ್ಕಿಂತ ಹೆಚ್ಚಿನ ಹಿತ-ವಾದ ನಿಮಗೇನು ಬೇಕು? ಮರಗುಳಿಗಳಾದ ನೀವು ಏನಾದರೂ ಅಲ್ಲಲ್ಲಿ ಚೆಲ್ಲಿರಬಹುದು. ಹಗಲು ಕಸಗುಡಿಸಿದರೆ, ಕಸದಲ್ಲಿ ಏನು ಹೋಗಿದೆಯೆಂಬುದಾದರೂ ತಿಳಿದೀತು. ಸಂಜೆಯಾದರೆ, ಕಸವೂ ಹೋದೀತು, ಕಸವರವೂ ಹೋದೀತು. ಕಸವನ್ನೂ ಉಳಿಸಿಕೊಳ್ಳಬೇಕಾದ ಈ ಕಾಲದಲ್ಲಿ ಅಲ್ಲಲ್ಲಿ ಬಿದ್ದ ಎರಡು ಪೈಸಾಗಳನ್ನಾದರೂ ಉಳಿಸಿಕೊಳ್ಳೋಣ. ಇಂಗ್ಲಿಷ ನಂಬುಗೆಯೂ ಅದನ್ನೇ ಹೇಳುತ್ತದೆ. ಇಂಗ್ಲಂಡದಲ್ಲಿ ಆದೇ ಮದುವೆಯಾದ ನವದಂಪತಿಗಳಂತೂ ಸುತರಾಂ ಸಂಜೆ ಕಸಗುಡಿಸಬಾರದೆಂದು. ಸರಿಯೇ ಮೊದಲೇ ಯೌವ್ವನ! ಅದರಲ್ಲಿ ಹೊಸ

ದಂಪತಿಗಳು–! ಮರಗುಳಿತನಕ್ಕೆ ಇದಕ್ಕಿಂತ ಹೆಚ್ಚಿನ ಇಂಧನ ಏನು ಬೇಕು! ನೀವು ಶುಭ ಕೆಲಸದ ಸಲುವಾಗಿ ಹೊರಟಾಗ ಬೊಕ್ಕತಲೆಯವರು ಎದುರು ಬಂದರೆ ಅಪಶಕುನ. ಹೆಣ ಹೊರಲಿಕ್ಕೆ ಹೋದಾಗ ಜನ ಬೊಕ್ಕತಲೆ ಬರಿಗಾಲಲ್ಲಿರುವರು. ಆದ್ದರಿಂದ ಅಂಥ ಬೊಕ್ಕತಲೆ ಅಪಶಕುನವಲ್ಲದೆ ಏನು? ಮೂಢನಂಬಿಕೆಯೆಂದರೆ, ನಗಬೇಡಿ. ನಿಜವಾಗಿ ಮೂಢನಂಬಿಕೆಯೆಂದರೆ ನಲ್ಲೆಯ ಜ್ಞಾನದ ಸುಧೆ–ಕಾಂತಾ ಸಮ್ಮಿತತೆಯ ಉಪದೇಶ– ಆ ಮೃದುವಾಣಿಯನ್ನು ಆಲಿಸುವ ಬುದ್ಧಿಯನ್ನು ನಾವು ಕಲಿಯಬೇಕು.

ನಿಜವಾಗಿ ಮೂಢನಂಬಿಕೆ ಎಂದರೆ ಗಾರ್ಡಿನರ್ ಹೇಳಿದ ಹಾಗೆ ಭಾವಜೀವಿಯ ವರದ ಹಸ್ತ. ಈಗ ೧೩.ನೆಯ ಅಂಕಿಯನ್ನೇ ತೆಗೆದುಕೊಳ್ಳೋಣ. ೧೩.ನೆಯ ಅಂಕಿ ಅಶುಭಸೂಚಕವೆಂದು ಜಗತ್ತೇ ಸಾರುತ್ತದೆ. ಒಬ್ಬ ರೋಗಿಯನ್ನು ೧೩.ನೆಯ ನಂಬರಿನ ಕೋಣೆಯಲ್ಲಿ ೧೩.ನೆಯ ಮಂಚದ ಮೇಲೆ ಮಲಗಿಸಿದರೆ ಎಂದಾದರೂ ಅವನು ಬದುಕಿಯಾನೆ? ರೋಗ ನಿವಾರಣೆ ದೈಹಿಕ ಪ್ರಗತಿಯನ್ನು ಅವಲಂಬಿಸಿದಷ್ಟೇ ಮಾನಸಿಕ ಸ್ಥೈರ್ಯವನ್ನೂ ಅವಲಂಬಿಸಿದೆ. ರೋಗಿ ಮಲಗಿದ್ದ ಸ್ಥಳಕ್ಕೆ ಬಂದು ಎಲ್ಲರೂ ನೀನು ಸಾಯುತ್ತೀ ಎಂದು ಹೇಳಹತ್ತಿದರೆ, ಬದುಕಬಲ್ಲ ರೋಗಿ ಯಾರಿದ್ದಾರೆ ಹೇಳಿರಿ. ಅಂತಲೇ ಲಂಡನ್‌ದಲ್ಲಿ ಎಷ್ಟೋ ಕಡೆಗೆ ೧೨ ಆದ ಕೂಡಲೆ ೧೪ನೆಯ ನಂಬರಿನ ರಸ್ತೆಯೇ ಬರುತ್ತದೆ; ಎಷ್ಟೋ ಹೋಟೆಲುಗಳಲ್ಲಿ ೧೩.ನೆಯ ನಂಬರಿನ ಕೋಣೆಗಳೇ ಇಲ್ಲ, ಅಥವಾ ನಮ್ಮಲ್ಲಿಯ ಪರಂಪರೆಯನ್ನೇ ತೆಗೆದುಕೊಳ್ಳಿರಿ. ನೀವು ಬ್ರಾಹ್ಮಣರೋ? ಚಿಕ್ಕವರಿರುವಾಗ ನಿಮಗೆ ದೆವ್ವಗಳ ಭಯ ಎಷ್ಟಿತ್ತು? ಆದೇ ನಿಮ್ಮ ಉಪನಯನವಾದ ಕೂಡಲೇ ದೆವ್ವಗಳಿಗೆ ನೀವು ಬ್ರಹ್ಮಗಂಟನ್ನು ತೋರಿಸಿದಿರೆಂದರೆ, ದೆವ್ವಗಳು ಓಡಿಹೋಗುತ್ತವೆ ಎಂದಾಕ್ಷಣಕ್ಕೆ ನಿಮ್ಮ ಮನಸ್ಸಿನಲ್ಲಿ ಎಷ್ಟು ಧೈರ್ಯ ಉಕ್ಕಿಬಂದಿತು! ಎಷ್ಟು ಸಲ ನೀವು ಕತ್ತಲೆಯಲ್ಲಿ ಹೋಗುವಾಗ ಬ್ರಹ್ಮಗಂಟಿನ ಮೇಲೆ ಬೆರಳಿಟ್ಟು ನಡೆದಿಲ್ಲ? ಅಥವಾ ಎಷ್ಟು ಜನ ವಟುಗಳು ಈ ಭೂತನಿವಾರಣೆಯ ಬ್ರಹ್ಮಗಂಟಿಗಾಗಿಯೇ ಉಪನಯನವಾಗಲಿಕ್ಕೆ ಧಾವಿಸಿಲ್ಲ? ಬ್ರಹ್ಮನನ್ನು ಅರಿಯದ ಯಾವ ಗಂಟೂ ಇಲ್ಲದ ಇಂದಿನ ಜನಾಂಗಕ್ಕೆ ಯಾವ ಭಾಷೆಯ ಬುದ್ಧಿವಾದವನ್ನು ಹೇಳಬೇಕು?– ಅದೂ ಹೋಗಲಿ, ರಾತ್ರಿ ನೀವು ನಡೆದಾಡುವಾಗ ಹಾವು–ಹುಳ–ಹುಪ್ಪಡಿಗಳ ಭಯ ನಿಮಗೆ ಎಷ್ಟು ಸಲ ಆಗಿಲ್ಲ? ಆಗ ಹಿರಿಯರು ನಿಮಗೆ ಹೇಳಿಕೊಟ್ಟ "ಆಸ್ತಿಕ, ಆಸ್ತಿಕ, ಕಾಳಭೈರವ" ಎಂಬ ಮಂತ್ರದ ದೊಣ್ಣೆಗೋಲನ್ನು ಕೈಯಲ್ಲಿ ಹಿಡಿದುಕೊಂಡು ನೀವು ಎಂಥೆಂಥ ನಾಗಲೋಕವನ್ನು ಪ್ರವೇಶಿಸಿಲ್ಲ, ಸುಮ್ಮನೆ ಯಾಕೆ ಸ್ವಾಮೀ ನಿಮ್ಮ ಜೀವನಕ್ಕೆ ಮಂದರಪರ್ವತದ ಧೈರ್ಯವನ್ನು ತಂದುಕೊಟ್ಟು

ದೆಂದರೆ "ಮೂಢ" ನಂಬಿಕೆಯೇ. ಬ್ರಹ್ಮಗಂಟಿನ ಹಾಗೆ ಜಟಿಲವಾಗಿ ಆಶ್ರಯಿಸಿರಿ, ಅದನ್ನು ಬಿಡಬೇಡಿ.

ಅಷ್ಟೇ ಅಲ್ಲ; ನಿಜವಾಗಿ ಮೂಢನಂಬಿಕೆಗಳೆಂದರೆ ಸು-ಸಂಸ್ಕೃತ ಹೃದಯದ ಪರಿಪಕ್ವತೆ. ಜಾಣನಿಗೆ ಮಾತಿನ ಪೆಟ್ಟಂತೆ-ಕೋಣನಿಗೆ ಲತ್ತೆಯ ಪೆಟ್ಟಂತೆ. ಮೂಢ ನಂಬಿಕೆ ಮಾನವಹೃದಯದ ಸೂಕ್ಷ್ಮತೆಯ ಪರಾಕಾಷ್ಠೆ ವಾಚ್ಯವಾಗಿ, ಸ್ಪಷ್ಟವಾಗಿ, ಕಿರಿಚಿ, ಮಾರ್ಕೆಟ್ಟಿನಲ್ಲಿ ಹೇಳಿದ ಹಾಗೆ ಬೊಗಳಿ ಹೇಳದೆ, ಮೂಢನಂಬಿಕೆ ಮಧುರವಾಗಿ, ಸುಲಲಿತವಾಗಿ, ಮೃದುವಾಗಿ, ಸೂಚ್ಯವಾಗಿ ನಿಮಗೆ ಹೇಳುತ್ತದೆ. ಮನೆಯಲ್ಲಿ ಮನೆಯ ಸುತ್ತು ಗೂಗೆ ಕಿರಿಚಿದರೆ ಕೆಟ್ಟ ಎಂದು ಹೇಳುತ್ತಾರೆ. ಕಿರಚುವದಂತೂ ಹೋಗಲಿ ಗೂಗೆಯನ್ನು ಕಂಡರೆ ಹೆದರದಿದ್ದವರು ಯಾರು? ಏನು ಅದರ ಗಿಡ್ಡ ದೇಹ! ಏನು ಅದರ ದೊಡ್ಡ ತಲೆ! ಏನು ಅದರ ಭಯಂಕರ ರಾವು ಕಣ್ಣು! ಏನು ಧಾವಿಸಿ ಬರುವ ಅದರ ಚುಂಚು. ಅದರ "ಗುಟುರ್ ಗುಟರ್". ಅದು ಗೋಣು ಹೊರಳಿಸಿದರೆ ಸಾಕು-ನನಗಂತೂ ನನ್ನ ಎದೆ ನಡುಗಿದ ಹಾಗೆ ಆಗುತ್ತದೆ. ನಯವಿಲ್ಲ-ವಿನಯವಿಲ್ಲ-ಹಾರುವದಿಲ್ಲ-ನುಡಿಯುವದಿಲ್ಲ-ಮಾತಿಲ್ಲ-ಕಥೆಯಿಲ್ಲ-ಭೂತ ಕೂತ ಹಾಗೆ ಕೂತಿರುತ್ತದೆ ದೇವರ ಈ ಸೃಷ್ಟಿ ಇದನ್ನು ನೋಡಿ ಎದೆ ನಡುಗದವರಾರು? ಇದು ಮನೆ ಹೊಕ್ಕರೆ ಪ್ರಾಣ ನೀಗದವರಾರು? ರಾತ್ರಿ ಓಡಾಡುವ ಈ ನಿಶಾಚರ ಪಿಶಾಚಿ ಹಗಲು ಮನೆಯ ಮುಂದೆ ಲಬೋಲಬೋ ಮಾಡಿದರೆ ಗತಿ ಏನು? ಸು-ಸಂಸ್ಕೃತ ಹೃದಯ ಬದುಕೀತೆ? ಗೂಗೆಯಂತೆಯೇ ಬೆಳವ, ಕಣ್ಣುಕಪ್ಪಡಿ. ಬೆಳವ ಹೊಕ್ಕ ಮನೆ ಹಾಳು. ಅದರ ರೂಪಕ್ಕಲ್ಲದಿದ್ದರೂ ಅದರ ಗುಟುರುವಿಕೆಗೆ. ಕಣ್ಣುಕಪ್ಪಡಿಯಂತೂ ಪಕ್ಷಿಯೂ ಅಲ್ಲ ಪಶುವೂ ಅಲ್ಲ; ಸಾವೂ ಅಲ್ಲ ಬದುಕೂ ಅಲ್ಲ; ಜೀವವೂ ಅಲ್ಲ ಬೆಂತರವೂ ಅಲ್ಲ; ಹಾಳಿನ ಪ್ರತೀಕ ಕಣ್ಣುಕಪ್ಪಡಿ. ಅಮೇರಿಕೆಯಲ್ಲಿ ಒಂದು ನಂಬಿಗೆಯಿದೆ. ಹೆಣದ ಹಿಂದಿನಿಂದ ಹೋಗಬಾರದೆಂದು. ನಿಮ್ಮ ಮುಂದು ಹೆಣದ ಮೆರವಣಿಗೆ ಸಾಗಿದ್ದರೆ, ನೀವು ಅದರ ಹಿಂದಿನಿಂದ ಹೋಗದೆ, ಅದನ್ನು ದಾಟಿ ಸಾಗಿ ಹೋಗಬೇಕೆಂದು. ಇದು ಮಾನವನ ನಿಜವಾದ ಸೌಕುಮಾರ್ಯ ದೃಷ್ಟಿ ಹೆಣದ ಹಿಂದಿನಿಂದ ಸಾಗಿ ನೀವು ಹೆಣದ ಎರಡನೆಯ ನಂಬರ್ ಸೀಟ್ ರಿಝರ್ವ್ ಮಾಡಿಸುವದಿದೆಯೇ? ಅದಕ್ಕಾಗಿಯೇ ಹೆಣವನ್ನು ಹಿಂದೆ ಮಾಡಿಕೊಂಡು ನೀವು ಮುಂದೆ ಸಾಗಿ ಹೋಗಬೇಕು. ಅಂದರೆ, ಹೆಣ ಹಿಂದಿನಿಂದ ನಿಮ್ಮನ್ನು ಬರಮಾಡಿಕೊಳ್ಳುವದಿಲ್ಲ. ನೀವು ಮರಣವನ್ನು ದಾಟಿ ಮುಂದೆ ಹೋಗಿರುತ್ತೀರಿ. ಆದ್ದರಿಂದ ಮೂಢನಂಬಿಕೆಯೆಂದರೆ ಸುಸಂಸ್ಕೃತ ಹೃದಯದ ಅಭಿವ್ಯಕ್ತಿ.

ಅಂತಲೇ ನೂರಾರು-ಸಾವಿರಾರು ನಂಬಿಕೆಗಳು ದೇಶ-ಕಾಲಗಳ ಪರಿಮಿತಿಯನ್ನು ಮೀರಿ ಮಾನವನ ಅನುಭವದ ಅಮೌಲ್ಯಪರಂಪರೆ ಆಗಿವೆ. ಬೆಕ್ಕು, ಕಾಗೆ, ಗೂಗೆ, ಬೆಳವ, ಕಣ್ಣುಕಪ್ಪಡಿ, ಹಲ್ಲಿ, ನರಿ, ನವಿಲು, ಮೊಲ-ಎಲ್ಲವೂ ತಮ್ಮ ತಮ್ಮದೇ ಆದ ಭಾಷೆಯಲ್ಲಿ ಮಾನವತೆಗೆ ಉಪದೇಶಿಸುತ್ತವೆ. ನಮ್ಮ ಹಿರಿಯರಲ್ಲಿ ಒಂದು ಸಂಪ್ರದಾಯವಿತ್ತು. ಯಾರಾದರೂ ಸೀತರೆ ಸಾಕು "ಚಿರಾಯುಷಿ" ಎನ್ನುತ್ತಿದ್ದರು. ಒಂದು ಸೀತರೆ ಅಪಸವ್ಯ, ಎರಡು ಶುಭ. ಪಾಶ್ಚಿಮಾತ್ಯರಲ್ಲೂ ಇದೇ ನಂಬುಗೆ ಇದೆ. ಯಾರಾದರೂ ಸೀತರೆ ಸಾಕು ಹತ್ತಿರಿದ್ದವರು "God bless you" ಎನ್ನುತ್ತಾರೆ. ಅಂದರೇನು? ಸೀತು ಬಾಯಿ ತೆಗೆದರೆ, ದೇವರು ಏಕೆ ಆಶೀರ್ವದಿಸ ಬೇಕು? ಬರ್ಟ್ರಾಂಡ್ ರಸೆಲ್ ಈ ಪ್ರಶ್ನೆಗೆ ಉತ್ತರ ಹೇಳುತ್ತಾರೆ. ನಮ್ಮ ಪ್ರಾಚೀನರ ಕಲ್ಪನೆ ಇತ್ತು-ಮನುಷ್ಯ ಸೀತಾಗ ಅವನ ಆತ್ಮ ಆ ಕ್ಷಣದಮಟ್ಟಿಗೆ ಹೊರಗೆ ಹೋಗುತ್ತದೆಂದು. ಆಗ ತೆರವಾದ ಅವನ ಹೃದಯ ಪೀಠದಲ್ಲಿ ಭೂತಸಂಚಾರವಾಗುವ ಹೆದರಿಕೆ ಇದೆ. ಆದ್ದರಿಂದ, "ಈ ತೆರವಿನ ವೇಳೆಯಲ್ಲಿ ದೇವರು ಆಶೀರ್ವದಿಸಲಿ" ಎಂದಾಕ್ಷಣಕ್ಕೆ ಹತ್ತಿರ ಬಂದಿದ್ದ ಭೂತ ಓಡಿಹೋಗುತ್ತದೆ. ಒಂದು ಸೀತರೆ ಅಶುಭ-ಎರಡು ಸೀತರೆ ಶುಭ ಏಕೆ? ಸೀನು ಬರುವುದು ಮಸ್ತಕದಿಂದ. ಮಸ್ತಕ ಪರಮಾತ್ಮನ ಸ್ಥಾನ. ಆದ್ದರಿಂದ ಸೀನು ಪರಮಾತ್ಮ ಕಳಿಸಿದ ಸಂದೇಶ. ಒಂದು ಅಶುಭ- ಎರಡು ಶುಭ-ಮೂರು ಅತಿಶಯ ಶುಭ ಇತ್ಯಾದಿ. ಇಡೀ ಮಾನವ್ಯವನ್ನೇ ವ್ಯಾಪಿಸಿದ ಸಾಮಾನ್ಯವಾದ ಅನೇಕ ನಂಬಿಕೆಗಳನ್ನು ಹೇಳಬಹುದು. ನಮ್ಮಲ್ಲಿ ಒಂದು ಕಲ್ಪನೆ ಇದೆ- ಸೌಂದರ್ಯಕ್ಕೆ ದೃಷ್ಟಿ ತಾಕಬಹುದೆಂದು. ಅಂಥ ಕಿಸುಗಣ್ಣವರು ನಮ್ಮಲ್ಲಿಯೂ ಇದ್ದಾರೆ. ಪಾಶ್ಚಿಮಾತ್ಯರಲ್ಲೂ ಇದ್ದಾರೆ. ಇಂಥವರು ಒಳ್ಳೆಯ ಕಲ್ಲುಗಳನ್ನೂ ನೋಡಿದರೆ ಸಾಕು, ಕಲ್ಲುಗಳು ಒಡೆದಾವು. ನೀವು ಮುದ್ದು ಮುದ್ದಾದ ಸುಂದರವಾದ ದಷ್ಟಪುಷ್ಟವಾದ ಪುಟ್ಟ ಮಗುವನ್ನು ನೋಡುತ್ತೀರಿ. ನೋಡಿದ ಕೂಡಲೇ ನಿಮ್ಮ ಮನಸ್ಸು ಆನಂದದಿಂದ ಉಕ್ಕಿ ಹರಿಯುತ್ತದೆ. ವರ್ಣನೆ ಓತ ಪ್ರೋತವಾಗಿ ಬರುತ್ತದೆ. "ಏನು ಸೌಂದರ್ಯ" ಎನ್ನುತ್ತೀರಿ. ತಾಯಿಯಾದವಳೋ ಮಗ್ಗುಲಿದ್ದವಳೋ ಹೇಳುತ್ತಾಳೆ. "ಒಳಿತೆನ್ನು" ಇಲ್ಲವಾದರೆ, "ಅಂಗಾಲಿಗೆ ಏನು ಹತ್ತಿದೆ ನೋಡು" ಎಂದು. ವರ್ಣನೆ ಮಾಡುವಾಗ ನೀವು ಅಂಗಾಲೇಕೆ ನೋಡಿಕೊಳ್ಳಬೇಕು? ನಿಮ್ಮ ದೃಷ್ಟಿ ಆ ಮಗುವಿಗೆ ತಾಕಬಾರದೆಂದು. ಮಗುವಿನ ಆ ಮುದ್ದು ಮುಖಬಿಂಬದಿಂದ, ನಿಮ್ಮ ಲಕ್ಷ್ಯ ನಿಮ್ಮ ಹೇಸಿ ಕಾಲಿನ ಕಡೆಗೇ ಹೋಗಲಿ ಎಂದು. ಇಂಗ್ಲಂಡದಲ್ಲಿಯಂತೂ ಒಳ್ಳೆಯ ಆಹಾರವನ್ನು ಕೂಡ ನೀವು ಈ ರೀತಿ ವರ್ಣಿಸಿದರೆ, ಹೆಣ್ಣುಮಕ್ಕಳು ಅದರ ಮೇಲೆ ಶಿಲುಬೆಯ ಚಿಹ್ನವನ್ನು ಬರೆಯುತ್ತಾರೆ. ದೇವತಾ ಪ್ರತೀಕ ಶಿಲುಬೆಯ ಚಿಹ್ನ ಆ

ವಸ್ತುವನ್ನು ನಿಮ್ಮ ಕಾಕದೃಷ್ಟಿಯಿಂದ ರಕ್ಷಿಸಲೆಂದು. ಇಲ್ಲವೆ ನೀವು ಈ ರೀತಿ ವರ್ಣಿಸ ಹತ್ತಿದರೆ, "Touch wood" ಎನ್ನುತ್ತಾರೆ.

ಆದ್ದರಿಂದ ಮೂಢನಂಬಿಕೆ ಎಂದಾಕ್ಷಣಕ್ಕೆ ಮೂಗು ತಿರುವದಿರಿ. ಹುಲ್ಲಿನ ಬುಡದಲ್ಲಿ ಹಾವಿರುತ್ತದೆ ಎಂದಾಕ್ಷಣಕ್ಕೆ ಒಂದು ಹುಲ್ಲಿನ ಎಸಳನ್ನು ಎತ್ತಿಹಿಡಿದು ಹಾವೆಲ್ಲಿದೆ ತೋರಿಸಿರಿ ಎಂಬ ಬುದ್ಧಿಯ ಪ್ರಕಾಂಡತೆ ಪ್ರದರ್ಶಿಸಬೇಡಿರಿ. ಜನ ನಿಮ್ಮ ಗೇಲಿ ಮಾಡಿಯಾರೆಂದು ಗಾಬರಿಯಾಗಿ ನಿಮ್ಮ ಅನೂನ ಪರಂಪರೆಯಾದ, ಅಮೌಲ್ಯ ಸೊತ್ತಾದ, ಮೂಢನಂಬಿಕೆಗಳನ್ನು ಮೂಲೆಗೆ ಒತ್ತದಿರಿ. ''ಜನ ಮೆಚ್ಚಿ ನುಡಿದ ರೇನುಂಟು ಲೋಕದಲಿ, ಮನಮೆಚ್ಚಿ ನುಡಿಯಬೇಕು." ಪರೀಕ್ಷೆಗೆ ಕೂಡ್ರುವಾಗ ಮಾತ್ರ ಎಲ್ಲರ ಕಣ್ಣು ತಪ್ಪಿಸಿ ದೇವಾಲಯಗಳಿಗೆ ಹೋಗುವ ಅಧಮತನದಕಿಂತ ಹೆಚ್ಚಿನ ಅಪರಾಧವೇನಿದೆ? ಪರೀಕ್ಷೆಗೆ ಬರೆಯುವಾಗ ತನ್ನ ಕಣ್ಣಿಗೆ ಮಾತ್ರ ಕಂಡು, ಯಾರ ಕಣ್ಣಿಗೂ ಕಾಣದ ಹಾಗೆ ಟಾಚಣಿಯ ಮೊನೆಯಿಂದ ಪೇಪರುಗಳ ಮೇಲೆ "ಶ್ರೀರಾಮ ಜಯರಾಮ'' ಎಂದು ಲಿಖಿಸುವ ಹೇಡಿತನಕ್ಕಿಂತ ಹೀನಕೆಲಸವೇನಿರಬೇಕು? ಧೈರ್ಯವಿದ್ದರೆ ಮುನ್ನುಗ್ಗಿರಿ. "ನಡೆ ಮುಂದೆ, ನಡೆ ಮುಂದೆ, ಹಿಗ್ಗಿ ನಡೆ ಮುಂದೆ. ಜಗ್ಗದೆಯೆ, ಕುಗ್ಗದೆಯೆ ನುಗ್ಗಿ ನಡೆ ಮುಂದೆ." ಅಂಜುಬುರುಕರು ಮಾತ್ರ ಮೂಢ ನಂಬಿಕೆಯಲ್ಲಿ ವಿಶ್ವಾಸವಿಲ್ಲದವರು. ನಿಜವಾದ ವೀರರು ಯಾವಾಗಲೂ ಮೂಢ ನಂಬಿಕೆಯಲ್ಲಿ ಅಚಲವಾದ ವಿಶ್ವಾಸವಿಟ್ಟು ಆ ರೀತಿ ಆಚರಿಸುವವರು. ಆದ್ದರಿಂದ ಜನಕ್ಕೆ ಅಂಜಿ ನಡೆಯಬೇಡಿರಿ. ಮನಕ್ಕೆ ಅಂಜಿ ನಡೆಯಿರಿ.

ಎಂಥ ಜಗತ್ತಿದೆ ನಮ್ಮ ಈ ಮೂಢನಂಬಿಕೆಗಳ ವರ್ಣಮಯ ಜಗತ್ತು. ನೀವು ಈ ಕಾವ್ಯಸಾಮ್ರಾಜ್ಯದ ಬ್ರಹಸ್ಪತಿಗಳಾಗಿರಿ. ಎಡದಿಂದ ಬಲಕ್ಕೆ ಬರುವ ಬೆಕ್ಕು, ಎದುರಾಗಿ ಹಾರುವ ಕಾಗೆ, ಮುಂಜಾವು ಮುಖ ತೋರಿಸುವ ನರಿ, ಲಾಸ್ಯಗೈಯುವ ನವಿಲು, ಅಡ್ಡಗೋಡೆಯ ಮೇಲೆ ಲೊಟಗುಡುವ ಹಲ್ಲಿ, ಒಂದೇ ಎರಡೇ, ಎಂಥ ಅದ್ಭುತ ಪ್ರಾಣಿಸಂಗ್ರಹಾಲಯ ನಮ್ಮ ಈ ಮೂಢನಂಬಿಕೆಗಳ ಜಗತ್ತು! ಇಂಥ ಕಾವ್ಯ ಸಾಮ್ರಾಜ್ಯವನ್ನು ಬಿಟ್ಟು, ಚಿಲ್ಲರೆ ಪೈಸಾದ ವ್ಯವಹಾರರಾಜ್ಯದ ಅಧಃಪತನಕ್ಕೆ ಮನಸ್ಸು ಮಾಡುತ್ತೀರಾ? ಸುತರಾಂ ಬೇಡ. ಎಂದಿಗೂ ಬಿಡಬೇಡಿರಿ ನಮ್ಮ ಹಿರಿಯರು ಗಳಿಸಿ ಕೊಟ್ಟ ಮೂಢನಂಬಿಕೆಗಳ ಆಸ್ತಿಯನ್ನು.

# ದೂರದೃಷ್ಟಿ

ಮನುಷ್ಯನಿಗೆ ಏನಾದರೂ ಆಗಬಹುದು, ಆದರೆ ಅವನು ಅಜಾರಿ ಮಾತ್ರ ಬೀಳಬಾರದು. ಅವನು ಅಜಾರಿ ಬಿದ್ದನೆಂದರೆ, ಅವನು ನೆಟ್ಟಗಾಗುವವರೆಗೂ ಉಪದೇಶ ಮಾಡುವ ಜನರಿಗೇನೂ ಕೊರತೆಯಿಲ್ಲ, ನಾಯಿ ಕಡಿದಾಗ, ಹೊಂಬಳ ದಾರದಿಂದ ಮೊದಲುಗೊಂಡು, ಸಿವಿಲ್ ಆಸ್ಪತ್ರೆಯ ಹನ್ನೆರಡು ಇಂಜೆಕ್ಶನ್‌ಗಳವರೆಗೆ ಮೋಫತ್ತಾಗಿ ಉಪದೇಶ ಸಿಗುತ್ತದೆ. ಕೈ-ಕಾಲು ಮುರಿದಾಗ ಭದ್ರಾಪುರದ ಎಲುವು ಕೂಡ್ರಿಸುವ ವೈದ್ಯರಿಂದ ಮೊದಲುಗೊಂಡು ಮುಂಬೈಯ Bone specialists ವರೆಗೆ ಜನರು ಉಪದೇಶ ಮಾಡುವವರೇ. ಈ ಕಾಲದಲ್ಲಿ, ನಿಜವಾಗಿ, ಜನ ನಮ್ಮನ್ನು ನೋಡದಿದ್ದರೆ ಸಾಕು ಎನಿಸುತ್ತದೆ. ನೀವು ಎಲ್ಲರ ಚಿಕಿತ್ಸೆಗೂ guinea pig. ಎಲ್ಲರ ಕುತೂಹಲಕ್ಕೂ ಆಶ್ರಯಸ್ಥಾನ. ಎಲ್ಲರ ಕನಿಕರಕ್ಕೂ ಗುರಿ. ಪ್ರಾಣಿಗಳನ್ನು ಪ್ರಯೋಗಾಲಯದ ಟೇಬಲ್ಲುಗಳ ಮೇಲೆ ಮಲಗಿಸಿ, ಅವುಗಳ ಅಂಗಾಂಗಗಳನ್ನು ಕತ್ತರಿಸಿ ನೋಡುವಂತೆ, ಜನ ನಿಮ್ಮ ವ್ಯಾಧಿಗೆ ದುರ್ಬೀನು ಹಚ್ಚಿ ಹತ್ತಾರು ಸಲಹೆಗಳನ್ನು

ಕೊಡುತ್ತಾರೆ. ಗಾಯವಾದ ಮಂಗ ಬದುಕುವದಿಲ್ಲವಂತೆ; ಅಜಾರಿಯಾದ ಮನುಷ್ಯ ಉಳಿಯುವುದೂ ಅಷ್ಟೇ ಕಠಿಣ. ಈಯೆಲ್ಲ ಸಲಹೆಗಳ ಧಾರಾವೃಷ್ಟಿಯಿಂದ ಬದುಕಿ ನೀವು ಪಾರಾದಿರೋ, ನಿಜವಾಗಿ ನೀವು ಎಂಟೆದೆಯ ಬಂಟರು. ಸರಕಾರವು ಏನಾದರೂ ಮಾಡಬೇಕಿದ್ದರೆ, ಅಜಾರಿಯಾದ ಕೂಡಲೇ ಮನುಷ್ಯನು ಎಲ್ಲರ ಕಣ್ಣನ್ನು ತಪ್ಪಿಸಿ ಯಾವುದಾದರೂ ಒಂದು ಗುಡ್ಡದಲ್ಲಿಯ sanatoriumದಲ್ಲಿ ಆಶ್ರಯ ಹುಡುಕುವಂತೆ ಮಾಡಬೇಕು.

ಇಷ್ಟೆಲ್ಲ ತತ್ವಜ್ಞಾನ ಯಾಕೆ ಅಂತೀರೊ? ನನಗೂ ಕಳೆದ ತಿಂಗಳು ಇಂತಹ ಒಂದು ಸಂದರ್ಭ ಒದಗಿತು. ಆದರಿಂದ ದೇವರೇ ನನ್ನನ್ನು ಪಾರುಮಾಡಿದ. ಅದು ಹೇಗೆ ಅಂತೀರಾ?

ಕಳೆದ ತಿಂಗಳು ನನಗೆ ಒಮ್ಮಿಂದೊಮ್ಮೆಲೆ ವಿಪರೀತ ತಲೆನೋವು ಕಾಣಿಸಿ ಕೊಂಡಿತು. ಸಾಮಾನ್ಯವಾಗಿ ಹೆಚ್ಚು ವಿಚಾರ ಮಾಡದವರಿಗೆ ಇಂಥ ತಲೆನೋವು ಎಂದೂ ಕಾಣಿಸಿಕೊಳ್ಳುವದಿಲ್ಲವಂತೆ. ಅಂದು ಸಪ್ಟೆಂಬರ್ ೩ನೆಯ ತಾರೀಖು ಇರಬಹುದು. ಯಥಾಪ್ರಕಾರ, ಆಫೀಸಿನ ಕೆಲಸ ಮುಗಿಸಿಕೊಂಡು ೬ ಗಂಟೆಯ ಸುಮಾರಿಗೆ ಮನೆಗೆ ಬಂದೆ. ಮನೆಯಲ್ಲಿ ಹುಡುಗರು ಯಾವುದೋ ಕಾಜಿನ ಪಾತ್ರೆಯನ್ನು ಒಡೆದದ್ದರಿಂದಲೋ ಏನೋ, ಮನೆಯ ವಾತಾವರಣ ಭಯಂಕರ ಗಂಭೀರವಾಗಿತ್ತು. ನಾನು ಹೋದಾಗ ಮಾತನಾಡುವವರು ಕೂಡ ಇರಲಿಲ್ಲ. ಒಂದರ್ಧ ತಾಸು ದಾರಿ ನೋಡಿದೆ. ಹಾಗೆಯೇ ಕೋಟನ್ನು ಮತ್ತೆ ಹೆಗಲಿಗೆ ಹಾಕಿಕೊಂಡು ಹೊರಹೊರಟೆ. ನಾನು ತೀರ ಕೊನೆಯ ಪಾವಟಿಗೆಯನ್ನು ಇಳಿದು ಹೊರಡುತ್ತಿರುವಾಗ ಮನೆಯಾಕೆ ಕೇಳಿದರು : "ಏಕೆ ಹಾಗೇ ಹೊರಟುಬಿಟ್ಟೀರಲ್ಲಾ" ಎಂದು. ರಣಭೂಮಿಗೆ ಹೊರಟ ಯೋಧ, ಹಿಂದು ಹೆಜ್ಜೆಯನ್ನು ಇಡಬಾರದೆಂಬಂತೆ, ಮನೆ ಬಿಟ್ಟು ಹೊರಟ ಸಿದ್ಧಾರ್ಥ ನಾನು "ಇಲ್ಲ; ಹೋಗಿಬರುತ್ತೇನೆ. ವಿಪರೀತ ತಲೆಶೂಲಿ" ಎಂದೆ. ಇಷ್ಟಂದದ್ದೇ ತಪ್ಪಾಯಿತು. "ಹೀಗೊ? ಹಾಗಾದರೆ ಹೋಗಿಬನ್ನಿ, ತಲೆಶೂಲಿ ಕಡಿಮೆಯಾಗಲಿ" ಎಂದು ಆಶೀರ್ವದಿಸಿ ಕಳಿಸಿದರು. ಈ ಆಶೀರ್ವಾದದ ಫಲವೋ, ಅಥವಾ ನಿಜವಾಗಿಯೇ ತಲೆಶೂಲಿ ಹೊಗೆಯಾಡುತ್ತಿತ್ತೋ–ನನಗೆ ಎರಡು ನಿಮಿಷಗಳಲ್ಲಿ ತಲೆ ನೋಯುವಂತೇನೇ ಕಂಡಿತು. ತಿರುಗಿ ಮನೆಗೆ ಹೋದಾಗ, ಬಹಳೇ ಅಂತಃಕರಣದಿಂದ ಮನೆಯಾಕೆ ಹೇಳಿದರು "ತಲೆಶೂಲಿ ಇದ್ದರೆ, ಈ ಹೊತ್ತು ಸಂಜೆ ಊಟ ಬಿಟ್ಟುಬಿಡಿ. ತಲೆಶೂಲಿ ಸುಧಾರಿಸುತ್ತಿದೆ" ಎಂದು. ನಾನೂ ಹಾಗೆಯೇ ಮಾಡಿದೆ. ಆದರೆ ಇಲ್ಲಿಗೆ ಈ ನಾಟಕ ಮುಗಿಯುತ್ತದೆ ಎಂದು ಭಾವಿಸಿದ್ದ ನನಗೆ ವಿಧಿ

ಬೇರೊಂದು ಆಟವನ್ನೇ ಹೂಡಿತ್ತು. ಮರುದಿನ ಮುಂಜಾನೆ ನಾನು ಏಳುವುದರಲ್ಲಿಯೇ ನನ್ನ ತಲೆಶೂಲಿ ಒಂದು ವಿಚಾರ ಸಂಕಿರಣದ ವಸ್ತುವಾಗಿತ್ತು... "ದೀಪಾವಳಿಗೆ ಹೊಸ ಉಡುಪು ತರಲು ಹೇಳಿದ್ದಕ್ಕೆ ತರಲಾಗದಿದ್ದರ ಹೇಡಿತನದ ತಲೆಶೂಲಿ ಇದು"- ಎಂದು ಮಕ್ಕಳು diagnosis ಹೇಳಿದರೆ, "ಹೊಸದಾಗಿ ತರಹೇಳಿದ Stainless ಭಾಂಡಿ ತರಲು ಆಗದ ಅಧಮತನಕ್ಕೆ ಬಂದ ತಲೆಶೂಲಿ ಇದು" ಎಂದು ಮನೆಯಾಕೆ ಹೇಳಿದರು. "ಆಫೀಸಿನಲ್ಲಿ ಬಹಳೇ ಕೆಲಸಮಾಡಿದ್ದಕ್ಕಾಗಿ ಹೆಚ್ಚಿನ ಕೆಲಸದ ಭಾರದಿಂದ ಉಂಟಾದ ತೊಂದರೆ ಇದು"- ಎಂದು ನನ್ನ ಆಫೀಸ್ ಸಹಕಾರಿಗಳು ಹೇಳಿದರೆ, "ಬಹುಶಃ ಸಂಜೆಯ ತಂಗಾಳಿಯಲ್ಲಿ ಹೆಚ್ಚು ತಿರುಗಾಡಿ ಬಂದದ್ದಕ್ಕೆ ಉಂಟಾದ ಚಳಿಯ ಬಾಧೆ" ಎಂದು ಮನೆಗೆ ಹಾಲು ಕೊಡುವ ಭೀಮಪ್ಪನು ಹೇಳಿದನು. ಅಂತೂ ತಲೆಶೂಲಿಯ ಸಮಸ್ಯೆ ಎಲ್ಲರ ತಲೆಯನ್ನೂ ತಿನ್ನಹತ್ತಿತು. ನನಗೇನೋ ಒಂದು ಭಾವನೆ. ಸಾಮಾನ್ಯವಾಗಿ ದಿನಾಲು ನಾನು ಆಫೀಸಿನಿಂದ ಬಂದಕೂಡಲೇ ೬ ಗಂಟೆಗೆ ೨ ಕಪ್ಪು ಚಹ ಕುಡಿಯುವ ವ್ಯಸನವಿದ್ದ ನನಗೆ ಅಂದು ಚಹ ಸಿಗದ್ದರಿಂದ ಹಾಗಾಯಿತೇನೋ ಎಂದು. ಆದರೆ ಇಷ್ಟು ಆರ್ಭಟೆ ನಡೆದಾಗ ಇಂಥ ಚಿಕ್ಕ ಕಾರಣವನ್ನು ಹೇಳುವ ಧೈರ್ಯವೆಲ್ಲಿ? ಅಂತೂ ಮಾತನಾಡಲಾರದ ಹೇಡಿತನಕ್ಕಾಗಿ ಉಳಿದವರು ಹೇಳಿದ ವಿಧಾನವನ್ನು ಕೇಳುತ್ತ ಕೂಡುವ ಸರತಿ ನನಗುಂಟಾಯಿತು. ಮನೆಗೆ ಬಂದವರಾರೋ "ಹಲ್ಲುನೋವಿನಿಂದ ಹೀಗಾಗಿರಬಹುದು. ಏನಾದರೂ ಹಲ್ಲು ಅಲುಗಾಡುತ್ತಿದ್ದರೆ, ಕಿತ್ತಿಸಿಬಿಡಿ" ಎಂದು ಹತ್ತು ಜನ ಹಲ್ಲಿನ ಡಾಕ್ಟರರ ಹೆಸರನ್ನು ಹೇಳಿದರು. ನನ್ನ ಶ್ರೀಮತಿಯವರು ಅದಕ್ಕೂ 'ಹೂ' ಗುಟ್ಟಿದರು. ಯಾರ ಬಾರಕೋಲೋ! ಯಾರ ಕುದುರೆಯೋ!! ಅವರ ಜೊತೆಗೇ ಬಂದಿದ್ದ ಇನ್ನೊಬ್ಬ ಮಿತ್ರರು "ಬಹುಶಃ ಹಲ್ಲಿನ ನೋವಿರಲಿಕ್ಕಿಲ್ಲ; ಹಾಗಿದ್ದರೆ ಹೀಗೆ ಸುಮ್ಮನೆ ಕೂಡ್ರಿಸಿ ಕೊಡುತ್ತಿರಲಿಲ್ಲ, ಬಹುಶಃ ಕಣ್ಣು ಮಂದವಾಗಿರಬೇಕು. ಆದ್ದರಿಂದ, ಯಾರಾದರೂ ಕಣ್ಣಿನ ಡಾಕ್ಟರರಲ್ಲಿ ತೋರಿಸಬೇಕು. ಕಣ್ಣುಮಂದವಾಗಿದ್ದರೂ ಹಲವು ಸಲ ತಲೆನೋವು ಬರುತ್ತದೆ" ಎಂದು ಹೇಳಿ ಯಾರೋ ದೊಡ್ಡ ಬೋರ್ಡಿನ ಡಾಕ್ಟರರ ಹೆಸರು ಹೇಳಿದರು. ಏನೇ ಆಗಲಿ ಎಲ್ಲಿಯೋ ಪ್ರಾರಂಭವಾದ ನನ್ನ ತಲೆನೋವು ಮಾತ್ರ ಇವೆಲ್ಲ ಚರ್ಚೆಗಳಲ್ಲಿ ಹಾಗೆಯೇ ಮುಂದುವರೆದಿತ್ತು... ಕೊನೆಗೆ ಅಳೆದೂ ಸುರಿದೂ ಹಲ್ಲಿನ ಡಾಕ್ಟರಕಿಂತ, ಕಣ್ಣಿನ ಡಾಕ್ಟರಲ್ಲಿಯೇ ಹೋಗುವುದು ಲೇಸೆಂದು ನಾನು ಭಾವಿಸಿದೆ. ಹಲ್ಲು ಅಲುಗಾಡಿಸಿದರೆ ಹಲ್ಲಿನ ಡಾಕ್ಟರರು ಕಿತ್ತು ಬಿಸಾಕಿಬಿಡುತ್ತಾರೆ. ಕಣ್ಣಿಗೇನೂ ಆ ಭಯವಿಲ್ಲವಲ್ಲ ಎಂದು ನನ್ನ ಭಾವನೆ.... ಆದರೆ, ಯಾರು ಬಲ್ಲರು ಈ ಡಾಕ್ಟರ ಎಂಬ

ಪ್ರಾಣಿಗಳನ್ನು!! ಚಿಕ್ಕಮಕ್ಕಳು ಕಾಗದ ಕತ್ತರಿಸಿದ ಹಾಗೆ, ಅಂಗಾಂಗಗಳನ್ನು ಕತ್ತರಿಸುವವರು!!!

ಸರಿ ಮರುದಿನ ಮುಂಜಾನೆ ೮ ಗಂಟೆ ಎನ್ನುವುದರಲ್ಲಿಯೇ ಆ ನೇತ್ರಯಜ್ಞಿಯ ಆಸ್ಪತ್ರೆಯ ಎದುರು ಹೋಗಿ ನಿಂತೆ. ಅಲ್ಲಿಯೋ ಕಾಳಿನ ಅಂಗಡಿಯ ಮುಂದೆ ಹಚ್ಚಿದ ಹಾಗೆ, ಜನಗಳ ಸಾಲು ಇರುವೆ ಹರಿದಾಡುವ ಹಾಗೆ ಹರಿದಾಡುತ್ತಿತ್ತು. ಅಂತೂ ಇಂತೂ ನುಗ್ಗಾಡಿ, ಮಹಡಿಯ ಮೇಲಿನ ಡಾಕ್ಟರರ ಕೋಣೆಯೊಂದಕ್ಕೆ ನುಗ್ಗಿದೆ. ಡಾಕ್ಟರ ಮಹಾಶಯರು ಯಜ್ಞದಲ್ಲಿಯ ಋತ್ವಿಜರ ಹಾಗೆ ಆರ್ಭಟೆಯಿಂದ ಅತ್ತ ಇತ್ತ ಓಡಾಡುತ್ತಿದ್ದರು. ಯಾರ ಕಣ್ಣೋ! ಯಾರ ಚಾಕುವೋ!! ಹತ್ತಾರು ನಿಮಿಷಗಳಲ್ಲಿ ನನ್ನ ಸರತಿಯೂ ಬಂದಿತು. ಕಣ್ಣು ತಪಾಸಿಸುವ ಕುರ್ಚಿಯಲ್ಲಿ ಕೂಡ್ರಲು ಹೇಳಿ, ಡಾಕ್ಟರರು ನನ್ನ ಪರೀಕ್ಷೆ ಪ್ರಾರಂಭಮಾಡಿದರು.

"ಎದುರಿಗಿನ ಪಟ ಕಾಣುತ್ತದೆಯೇ?"

"ಕಾಣುತ್ತದೆ."

"ಥೂ-ನಿಮ-ಏನು ಜನಾ ಇದು? ಪಟವಲ್ಲ; ಅಕ್ಷರ-"

"ಅಕ್ಷರ? ಪಟವೆಂದಿರೀ! ಹೂ ಸ್ವಲ್ಪುಸ್ವಲ್ಪು ಕಾಣುತ್ತದೆ."

"ಬಹಳ ಮಾತಾಡಬೇಡಿರಿ, ಅಕ್ಷರ ಎಲ್ಲಿಯ ವರೆಗೆ ಕಾಣುತ್ತದೆ?"

"ಸಾಧಾರಣ" ಎಂದೆ.

ಕೊನೆಗೆ, ಕಣ್ಣೆದುರಿಗೆ ಏನೋ ಕಾಜಿನ ತುಣುಕುಗಳನ್ನು ಹಿಡಿದು ಡಾಕ್ಟರರು ತೀರ್ಪು ಕೊಟ್ಟರು.

"ನಿಮಗೆ Myopia."

"ಅಂದರೆ?...."

"ದೂರದೃಷ್ಟಿ ಇಲ್ಲ - ಬರೀ ಸಮೀಪ ದೃಷ್ಟಿ"

"ಅಂದರೇ???...."

"ಈಗ ನಿಮಗೆ ಸಮೀಪ ದೃಷ್ಟಿ ಇದೆ; ದೂರದೃಷ್ಟಿ ಬರಬೇಕಾದರೆ ಚಷ್ಮ ಉಪಯೋಗ ಮಾಡಬೇಕಾದೀತು. ಈಗ ಪರೀಕ್ಷೆ ಮಾಡಿದ ಚಾರ್ಜು, ನಂತರ

ಚಷ್ಮಾದ ಚಾರ್ಜು. ನೀವು ಹೀಗೇ ವಿಚಾರ ಮಾಡುತ್ತಿರಿ. ನಾನು ಈಗ ಬರುತ್ತೇನೆ. ನೀವೊಬ್ಬರೇ Patient ಅಲ್ಲ." ಎಂದು ಹೇಳಿ ಡಾಕ್ಟರು ಬೇರೆ ಪರೀಕ್ಷೆಗೆ ಹೋಗಿಯೇಬಿಟ್ಟರು.

'ನಿಮಗೆ Myopia. ದೂರದೃಷ್ಟಿ ಇಲ್ಲ... ಬರೀ ಸಮೀಪ ದೃಷ್ಟಿ.. ಇದಕ್ಕೆ Chargeಉ. ಬರಲಿರುವ ಚಷ್ಮಾದ Chargeಉ. ವಿಚಾರ ಮಾಡುತ್ತಿರಿ, ಈಗ ಬರುತ್ತೇನೆ.'

*   *   *   *   *

ದೂ-ರ-ದೃ-ಷ್ಟಿ ಇ-ಲ್ಲ

ಛೇ ಏನು ಮಾಡುವುದು ಹಾಗಾದರೆ? ಹಾಳು ಈ ಕಾಣುವ ಕಣ್ಣಿನ ದೃಷ್ಟಿ ಹೋಗಲಿ ನನಗೆ ಎಷ್ಟು ಬೇಕೋ ಅಷ್ಟು ಕಂಡೇಕಾಣುತ್ತದೆಯಲ್ಲಾ, ನಾನು ಆಸ್ಪತ್ರೆಗೆ ಬಂದದ್ದು ಕಣ್ಣಿಗಾಗಿ ಅಲ್ಲವೇ ಅಲ್ಲವಲ್ಲ! ತಲೆನೋವಿಗಾಗಿ ಬಂದಿದ್ದೆ, ಅದೂ ಬಹುಶಃ ಅಂದು ನನ್ನ ಶ್ರೀಮತಿಯವರು ಸಂಜೆ ೬ ಗಂಟೆಗೆ ಕೊಡದ ಚಹದ ಕಪ್ಪಿನ ಅಭಾವದ ಮೂಲಕ ಉಂಟಾದದ್ದು, ಆದರೆ, ಹೇಳುವ ಧೈರ್ಯ? ಹೋಗಲಿ ಈಗ ಆ ತಲೆಶೂಲಿಯ ಜೊತೆಗೆ ಈ ಯಮರಾಯ ಸಹೋದರ ಇನ್ನೊಂದು ಶಿರೋವೇದನೆ ಯನ್ನೂ ಸೇರಿಸಿಬಿಟ್ಟನಲ್ಲ-ದೂರದೃಷ್ಟಿ ಇಲ್ಲವೆಂದು. ಏನು ಮಾಡುವುದು? Myopia?

ಸರಿ? ಒಂದು ದೃಷ್ಟಿಯಿಂದ ನನಗೆ ದೂರದೃಷ್ಟಿಯಿಲ್ಲ, ಯಾಕಂದರೆ ಚಿಕ್ಕವನಿದ್ದಾಗಿನಿಂದಲೂ ನನ್ನದು ಎಂದೂ ದೂರದ ದೃಷ್ಟಿ ನಾನು ಯಾರ ವಿರುದ್ಧವೂ ಯಾವುದರ ವಿರುದ್ಧವೂ ಎಂದೂ ದೂರಿಲ್ಲ, Non complaining ಮನುಷ್ಯ. ಹಾಲಲ್ಲಿ ಹಾಲಾಗಿದ್ದೇನೆ. ನೀರಲ್ಲಿ ನೀರಾಗಿದ್ದೇನೆ. ಎತ್ತಿನಲ್ಲೂ ಸೇರಿದ್ದೇನೆ. ಎಮ್ಮೆಯಲ್ಲೂ ಸೇರಿದ್ದೇನೆ. ಸಿಕ್ಕಷ್ಟಕ್ಕೇ ತೃಪ್ತಿಪಟ್ಟುಕೊಂಡು ಮತ್ತೊಬ್ಬರ ಬಾಯತುಂಬಲಿಕ್ಕೆ ಕೈ ಆನಿದ್ದೇನೆ. ಅದು ಸಿಗದೇ ಇದ್ದಾಗ ಎಂದೂ ವ್ಯಥೆ ಕೂಡ ಪಟ್ಟಿಲ್ಲ, ಮಣ್ಣಲ್ಲಿ ಹೊಟ್ಟೆ ಹೊಸೆಯುವ ಹುಳಕ್ಕೆ ಎಲ್ಲಿ ನಾಗರ ಹೆಡೆ? God is in heaven, All is right with the world ಎಂದು ಬ್ರೌನಿಂಗ ಹೇಳಿದ ಹಾಗೆ ನಂಬಿ ಆಯುಷ್ಯದ ಬಸ್ಸಿಗೆ whistle ಕೊಟ್ಟಿದ್ದೇನೆ. ಆದ್ದರಿಂದ, ನನ್ನದು ದೂರದ - Complain ಮಾಡದ-ದೃಷ್ಟಿ ಅದೇ ನನ್ನನ್ನು ಈ ವರೆಗೆ ತಾರಿಸಿದ್ದು, ಆದರೆ, ಡಾಕ್ಟರರು ಹೇಳಿದ ಈ ಹೊಸ ದೂರದೃಷ್ಟಿ ಯಾವುದು?

ಬೇಕು; ನಿಜವಾಗಿ ಮನುಷ್ಯನಿಗೆ **ದೂರದೃಷ್ಟಿ ಬೇಕು. ಈ ಚರ್ಮಚಕ್ಷುವಿನ ದೃಷ್ಟಿ ಹಾಳಾಗಲಿ. ಮಾನಸಚಕ್ಷುವಿನ ದೂರದೃಷ್ಟಿ ಬೇಕು.** ಅದೇ ನಮ್ಮನ್ನು ರಕ್ಷಿಸುವುದು. ಆಸಕ್ತಿ, ಅನುಭವ, ಸ್ಥಾನ, ಇವೆಲ್ಲವುಗಳ ದೂರದೃಷ್ಟಿಯೂ ಬೇಕು.

ಮನುಷ್ಯನಿಗೆ ಆಸಕ್ತಿಯಿಂದ ದೂರವಿರುವ ದೂರದೃಷ್ಟಿ ಬೇಕು. ಮನುಷ್ಯ ಯಾವುದಾದರೂ ವಿಷಯದಲ್ಲಿ ಆಸಕ್ತನಾದನೋ ಪಂಕದಲ್ಲಿ ಪಶು ಸಿಕ್ಕಹಾಗೆ ಸಿಕ್ಕುಬಿದ್ದ. "ಅಯ್ಯಾ ಅಯ್ಯಾ ಎಂದು ಒರಲುತಲಿದ್ದೇನೆ. ಅಯ್ಯಾ ಅಯ್ಯಾ ಎಂದು ಹಲಬುತಲಿದ್ದೇನೆ. ಓ ಎನ್ನಲಾಗದೆ ಅಯ್ಯಾ" "ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ". ಮನುಷ್ಯ ಯಾವ ವಿಷಯದಲ್ಲಿಯೂ ಬಂಧಿಸುವಷ್ಟು ಆಸಕ್ತಿ ತಾಳಬಾರದು.

*ಧ್ಯಾಯತೋ ವಿಷಯಾನ್ ಪುಂಸಃ*
*ಸಂಗಸ್ತೇಷುಪಜಾಯತೇ*
*ಸಂಗಾತ್ ಸಂಜಾಯತೇ ಕಾಮಃ*
*ಕಾಮಾತ್ ಕ್ರೋಧೋಽಭಿಜಾಯತೇ*
*ಕ್ರೋಧಾದ್ ಭವತಿ ಸಮ್ಮೋಹಃ*
*ಸಮ್ಮೋಹಾತ್ ಸ್ಮೃತಿವಿಭ್ರಮಃ*
*ಸ್ಮೃತಿಭ್ರಂಶಾತ್ ಬುದ್ಧಿನಾಶೋ*
*ಬುದ್ಧಿನಾಶಾತ್ ವಿನಶ್ಯತಿ ॥*

ತನುವಿನ ಕೋಪ ಮನದ ಕೇಡು. ಸಿಟ್ಟಿಗೂ ಹುಚ್ಚಿಗೂ ಒಂದು ಕಿರು ಬೆರಳಿನಷ್ಟು ಮಾತ್ರ ಅಂತರ. ಇದು ನನಗೆ ದೊರಕಬೇಕು. ಇದು ನನ್ನದು-ಇವ ನಮ್ಮವ-ಇದು ಹೀಗಾಗ ಬೇಕು ಎಂದು ಮನುಷ್ಯ ಎಷ್ಟು ಸಲ ವ್ಯಥೆಪಟ್ಟಿಲ್ಲ! ಆಸಕ್ತಿಯನ್ನು ಮೆಟ್ಟಿ ಮೇಲೆ ನಿಲ್ಲುವ ದೂರದೃಷ್ಟಿ ಮನುಷ್ಯನಿಗೆ ಬೇಕು. ಪದ್ಮಪತ್ರಮ್ ಇವ ಅಂಭಸಿ, ಇದ್ದರೂ ಇರದ ಹಾಗೆ ಇರುವ ಗಾಳಿಯ ವೃತ್ತಿ. ಈ ದೂರದೃಷ್ಟಿ ನನ್ನಲ್ಲಿದೆಯೇ? ಬಹುಶಃ ಇರಲಿಕ್ಕಿಲ್ಲ. ಅಂತಲೇ ಡಾಕ್ಟರರು ದೂರದೃಷ್ಟಿಯಿಲ್ಲ ಎಂದು ಸರಿಯಾಗಿಯೇ ಹೇಳಿದರು.

ಈ ಆಸಕ್ತಿಯಿಂದ ದೂರವಿರುವ ದೃಷ್ಟಿಯಂತೆಯೇ **ಅನುಭವದ ದೂರ ದೃಷ್ಟಿಯೂ ಇದೆ.** ಒಂದು ವಸ್ತು ಅಥವಾ ವಿಷಯವನ್ನು ಅನುಭವಿಸಿದ ಮೇಲೆ ಅದರಿಂದ ದೂರವಿದ್ದು ಪ್ರಯೋಗಾಲಯದ ಟೇಬಲ್ಲಿನ ಮೇಲಿನ ಪ್ರಾಣಿಯನ್ನು ನೋಡಿದ ಹಾಗೆ ಅದನ್ನು ನೋಡಬಹುದು. ದೇಹಕ್ಕಾಗುವ ವೇದನೆಗಳೆಲ್ಲವೂ ಈ

ವರ್ಗಕ್ಕೇ ಸೇರಿದುವು. ದೇಹದ ವೇದನೆ ಕ್ಷಣಕಾಲ; ಮನದ ವೇದನೆ ಚಿರಕಾಲ... ಎಷ್ಟು ಸಲ ನಾವು Typhoid ಅಜಾರಿ ಬಿದ್ದಿಲ್ಲ? ಎಷ್ಟು ಸಲ Influenza ಆಗಿಲ್ಲ? ಎಷ್ಟು ಸಲ ಬೊಟ್ಟು ಎಡವಿಲ್ಲ? ಈ ಹೊತ್ತು ನಿಶ್ಚಿತವಾಗಿ ಹೇಳಿರಿ–ಯಾವ ಬೊಟ್ಟು ಎಂದು ಎಡವಿದಿರೆಂದು? ಸಾಧ್ಯವೇ ಇಲ್ಲ. ಆದರೆ ಎಡವಿದಾಗ? ಅಯ್ಯೋ! ಏನು ಕೋಲಾಹಲ! ಏನು ಹುರೋ ಕಿರೋ! ಏನು ಅರಿವೇ ಕಟ್ಟುವುದು! ಏನು ಮಲಾಮು ಹಚ್ಚುವುದು! ಏನು ಸೆಪ್ಟಿಕ್ ಆಗಬಹುದೆಂಬ ಭಯ! ಆದರೆ ಇಂದು ಆ ವೇದನೆಯ ಹೊಳೆಯ ಈಚೆಯ ದಡಕ್ಕೆ ಬಂದಾಗ, ಸೆಪ್ಟಿಕ್ ಇಲ್ಲ, ಗಾಯವಿಲ್ಲ, ಯಾವ ವೇದನೆಯೂ ಇಲ್ಲ. ಅದೇ ಮಾನಸಿಕ ವೇದನೆಯಾಗಿದ್ದರೆ? ಯಾರಾದರೂ ಅಪಮಾನ ಮಾಡಿದ್ದರೆ? ಯಾರಾದರೂ ಅನ್ಯಾಯ ಮಾಡಿದ್ದರೆ? ಹತ್ತು ವರುಷವಾದರೂ ಆ ಗಾಯ ಮಾಯುವಂತಿಲ್ಲ. ಮನುಷ್ಯನಿಗೆ ಈ ದೇಹ ಮನಗಳೆರಡರ ವೇದನೆಗಳನ್ನೂ ದಾಟಿ ನಿಲ್ಲುವ ಅನುಭವ ದೂರದೃಷ್ಟಿ ಬೇಕು. ಅಂತಲೇ, ಡಾಕ್ಟರರು ನನಗೆ ಹೇಳಿದರೇನು ದೂರದೃಷ್ಟಿ ಇಲ್ಲವೆಂದು. ಈ ದೃಷ್ಟಿಯನ್ನು ನನಗೆ ಆ ಭಗವಾನನೇ ದಯಪಾಲಿಸಬೇಕು.

ಆಸಕ್ತಿ ಅನುಭವಗಳ ದೂರದೃಷ್ಟಿಯಂತೆ, ಸ್ಥಾನದ ದೂರದೃಷ್ಟಿಯೂ ಬಹುಶಃ ಅವಶ್ಯ. ನೀವು ನಿಮ್ಮ ಮನಸ್ಸಿನ ಮಹಡಿಯನ್ನೇರಿ ಅಲ್ಲಿಯ ಕಿಟಕಿಯೊಂದನ್ನು ತೆಗೆದು, ಅಲ್ಲಿ ಕುಳಿತು, ಕೆಳಗೆ ಸಾಗುತ್ತಿರುವ ಈ ಮಾನವ ಜಂಗುಳಿಯ procession ನೋಡಿದರೆ, ಎಂಥ ದೃಶ್ಯ ಕಾಣುತ್ತೀರಿ! ಏನು ಬಣ್ಣ! ಏನು ವೈವಿಧ್ಯ!! ಎಷ್ಟು ವ್ಯಷ್ಟಿ! ಆದರೂ ಅದರಲ್ಲಿ ಸಮಷ್ಟಿ!

*ನೂರು ಮರ*
*ನೂರು ಸ್ವರ*
*ಒಂದೊಂದು ಅತಿ ಮಧುರ*
*ಬಂಧವಿರದೆ ಬಂಧುರ*
*ಸ್ವಚ್ಛಂದ ಸುಂದರ –*

ಹತ್ತು ಮುಖ–ಹತ್ತು ಸ್ವರ. ಆದರೂ ನಿಮಗೆ ಮೇಲೆ ಕೇಳಬರುವುದು ಯಾವ ಒಬ್ಬ ವ್ಯಕ್ತಿಯ ಧ್ವನಿಯೂ ಅಲ್ಲ; ಒಂದನ್ನೊಂದು ಜಜ್ಜಿ ಮೇಲೆ ಎದ್ದು ಬರುತ್ತಿರುವ hummed noise. ಅಸ್ಪಷ್ಟ ಧ್ವನಿ. ಎಲ್ಲ ಜ್ವಾಲೆಗಳ ಮುಸುಕು ಧ್ವನಿ ನಾಲಗೆಗಳನ್ನೂ ಮರೆಮಾಡಿ ಮೇಲೆ ಬರುವ ಶಾಖ, Hazlitt ಹೇಳಿದ ಹಾಗೆ ಈ loop hole of retreatಇನಲ್ಲಿ ಕುಳಿತು ಮಾನವ ಸಮುದಾಯದ ಮೆರವಣಿಗೆಯನ್ನು

ನೋಡುವುದರಲ್ಲಿಯೇ ಜೀವನದ ಮೋಜಿದೆ. ಈ ಸ್ಥಾನ ದೂರದೃಷ್ಟಿ ಮನುಷ್ಯನಿಗೆ ಬೇಕು.

ಆದರೆ, ಹಾಂ–ಇಂಗ್ಲಿಷಿನಲ್ಲಿ ಹೇಳಿದ ಹಾಗೆ Here is the rub. ದೂರ ಕುಳಿತು ನೋಡುವದೊಳಿತು. ಆದರೆ ಮೇಲೆ ಕುಳಿತು ನೋಡುವುದು ಸರಿಯೇ? ಕುತುಬಮಿನಾರವನ್ನೇರಿದ ಒಬ್ಬ ಮರಾಠಿ ಕವಿ ಕೆಳಗಿನ ಜನಜಂಗುಳಿಯನ್ನೆಲ್ಲ ನೋಡಿದರಂತೆ. ಪಾಪ ಕೆಳಗಿನ ಜನಜಂಗುಳಿ ಇರುವೆ ಹರಿದಾಡಿದ ಹಾಗೆ ಹರಿದಾಡುತ್ತಿತ್ತು. ಐದಾರು ಫೂಟು ಎತ್ತರದ ಪುರುಷಸ್ವರೂಪಿ ಮಾನವಪ್ರಾಣಿ ಅರ್ಧ ಅಂಗುಲ ಸಹ ಎತ್ತರ ಕಾಣದ ಬಡಪಾಯಿಗಳಾಗಿ ಕಾಣುತ್ತಿತ್ತು. ಆಗ ಆ ಕವಿ ಹೇಳಿದರಂತೆ –

"ಛೇ! ನನ್ನ ಸರಿಕರನ್ನು ಇಷ್ಟು ಲಘುವಾಗಿ ತೋರಿಸುವ ಈ ಔನ್ನತ್ಯವು ಬೇಡ" ಎಂದು. ಇಂಥ ದೂರದೃಷ್ಟಿ ತೆಗೆದುಕೊಂಡಾದರೂ ಮಾಡುವುದೇನು? ನಮ್ಮವರನ್ನೇ ಅಗಲಿಸಿ ದೂರವಿಡುವ ದೂರದೃಷ್ಟಿ ಇದು.

ಅದರಂತೆಯೇ, ಈ ದೂರದೃಷ್ಟಿಯಂತೆ ಆಯುಷ್ಯದಲ್ಲಿಯೂ ಎಷ್ಟು ಜನ ವ್ಯಾವಹಾರಿಕ ದೂರದೃಷ್ಟಿಯನ್ನಿಟ್ಟುಕೊಂಡಿಲ್ಲ. ಇಂದು ಹೀಗೆ ಮಾಡಿದರೆ, ನಾಳೆ ಹೀಗಾಗುತ್ತದೆ. ಇಂದು ಈ ಗಿಡಕ್ಕೆ ಕಸಿ ಮಾಡಿದರೆ, ನಾಳೆ ಇದರ ಟಿಸಿಲು ಇಲ್ಲಿ ಒಡೆಯುತ್ತದೆ. ಇಂದು ಇಲ್ಲಿ ಒಗೆದ ಲೆತ್ತ, ನಾಳೆ ಇಲ್ಲಿ ಫಲ ಕೊಡುತ್ತದೆ ಇತ್ಯಾದಿ. ಇಂಥ ಜನರ ಆಯುಷ್ಯವೆಲ್ಲ ಬರಿಯ ಗುಣಾಕಾರ ಭಾಗಾಕಾರ. ಅವರಿಗೆ ವ್ಯಕ್ತಿ, ವ್ಯಕ್ತಿಗಳಲ್ಲ; ಆಟದಲ್ಲಿಯ ದಾಳಗಳು. ಆ ರೀತಿ ಅವರು ಆಟವಾಡುತ್ತಿರುತ್ತಾರೆ. ಇಂಥ ದೂರದೃಷ್ಟಿಯಿಂದೇನು ಲಾಭ?

ಎಂದೋ ಮುಂದು ಬರುವ ಕಷ್ಟಕಾಲಕ್ಕಾಗಿ ನೆಪೋಲಿಯನ್ ಚಿಕ್ಕವನಿರುವಾಗಿನಿಂದಲೇ ಬಿರುಸು ರೊಟ್ಟಿಯನ್ನು ತಿನ್ನಲು ಪ್ರಾರಂಭಿಸಿದನಂತೆ. ಆದರೆ, ಬ್ರಿಟಿಶರು ಅವನನ್ನು ಸೆರೆಹಿಡಿದಾಗ, ಈ ದೂರದೃಷ್ಟಿಯ ಬಿರುಸು ರೊಟ್ಟಿ ಅವನನ್ನೇನೂ ಬದುಕಿಸಲಿಲ್ಲ. ಬರುವದೇನುಂಟೊಮ್ಮೆ ಬರುವ ಕಾಲಕೆ ಬಹುದು. ಬಂದದ್ದನ್ನು ಸ್ವೀಕರಿಸಬೇಕೇ ವಿನಾ, ಹೀಗೆ ಬರಲಿ, ಹೀಗೆ ಆಗಲಿ ಎಂದು ಬಯಸುವ ಅಧಿಕಾರಿಗಳು ನಾವು ಯಾರು?....

ನೆಪೋಲಿಯನ್ ಹೋಗಲಿ, ಸಾಧ್ವಿ ಗಾಂಧಾರಿಯಂತೂ ತನ್ನ ಮಕ್ಕಳು ಅಜೇಯರಾಗಿರಬೇಕೆಂದು ಅವರು ಚಿಕ್ಕವರಿರುವಾಗಿನಿಂದಲೇ ವರ ಪಡೆದು, ರಕ್ಷಿಸ

ಬಯಸಿದಳು. ಆದರೆ ಪರಿಣಾಮೇನಾಯಿತು? ದುರ್ಯೋಧನನ ಇಡೀ ದೇಹವೆಲ್ಲ ವಜ್ರಾಂಗವಾದರೂ ತೊಡೆ ಪೊಳ್ಳಾಗಿಯೇ ಉಳಿಯಿತು. ಭೀಮಸೇನ-ಕುರುಕುಲ ಮಥನೋದ್ಧೀಕರ ಭೀಮಸೇನ-ಪೊಳ್ಳಾದ ಆ ತೊಡೆಗೆ ಸರಿಯಾಗಿಯೇ ಕೊಟ್ಟ ಗಾಂಧಾರಿಯ ದೂರದೃಷ್ಟಿ ಆಗೆಲ್ಲಿ ಹೋಯಿತು....?

ಆಯುಷ್ಯದಲ್ಲಿ ಯಾವಾಗಲಾದರೂ ಆಗುವುದು ಹೀಗೆಯೇ. ನಾವು ಯಾವ ಬರಕ್ಕಾಗಿಯೋ ಬುತ್ತಿ ಕಟ್ಟುತ್ತಿರುತ್ತೇವೆ-ಯಾವುದೋ ಮಳೆ ಬಂದು ನಮ್ಮನ್ನು ಕೊಚ್ಚಿ ಕೊಂಡು ಹೋಗುತ್ತದೆ. ಯಾವ Typhoid, Malaria, Cholera, ಬರಬಾರದೆಂದು ಮದ್ದು ಚುಚ್ಚಿಸಿಕೊಂಡೇ ಚುಚ್ಚಿಸಿಕೊಳ್ಳುತ್ತೇವೆ, ಕೊನೆಗೆ ಎಲ್ಲಿಯೋ ಎಡವಿಬಿದ್ದು ಸಾಯುತ್ತೇವೆ. ಹತ್ತಾರು ಯುದ್ಧಗಳನ್ನು ಗೆದ್ದ ವೀರ ಇಂಜೆಕ್ಶನ್ ಚುಚ್ಚಿಸಿ ಕೊಂಡು ಸಾಯಬಹುದು. ಯಾರು ಬಲ್ಲರು ಯಾವ ಭವಿಷ್ಯದ ಗರ್ಭದಲ್ಲಿ ಯಾವ ಕೈಗತ್ತಿ ಇದೆಯೆಂಬುದು? ಅಂದಮೇಲೆ ಇಲ್ಲದ ಕಾಗುಣಿತದ ಲೆಕ್ಕವೇಕೆ? Gardiner ಹೇಳಿದ ಹಾಗೆ, ಯಾರೂ ನಮ್ಮ ಮುಖಕ್ಕೆ ಹೊಡೆಯಬಾರದೆಂದು ಮುಖವನ್ನೆಲ್ಲ ಸಂರಕ್ಷಿಸಿಕೊಳ್ಳುವುದರಲ್ಲಿಯೇ, ಹೊಡೆತ ಬೀಳುವುದು ಬೆನ್ನಿಗೇ. Man proposes, God disposes off. Gardiner ಈ ಬಗ್ಗೆ ಹೇಳಿದ್ದು ಮನೋಜ್ಞವಾಗಿದೆ :

"Experience has taught us that it is not the things we fear that come to pass, but the things of which we do not dream. The bolt comes from the blue. We take elaborate pains to guard our face and get a thump in the small of the back. We propose to send fire-engine to Ulster and turn to see Europe in flames". ನಾವು ಹೆದರಿದಲ್ಲಿ ಕತ್ತಲೆಯಾಗುವದಿಲ್ಲ; ಹೆದರದಿದ್ದಲ್ಲಿ ಹೊಡೆತ ಬೀಳುತ್ತದೆ. ಕವಿ ಹೇಳಿದ ಹಾಗೆ :-

The clouds ye so much dread,

Are big with mercy, And will break with blessings on your head. ನಾವು ಹೆದರಿದ್ದ ಮೋಡಗಳೇ ನಮ್ಮನ್ನೆಲ್ಲ ತೇಲಿಸಿ ಬಿಡುವವು.

ಅಥವಾ ಹೀಗಾಗಬಹುದು, ಹೀಗಾಗಬೇಕು ಎಂಬ ಈ ವ್ಯವಹಾರದ ದೂರದೃಷ್ಟಿಯಾದರೂ ಏಕೆ? "ಬಂದದ್ದೆಲ್ಲ ಬರಲಿ! ಗೋವಿಂದನ ದಯೆ ಒಂದಿರಲಿ!"

ಎಂದರೆ ಸಾಗದೇ? ಈ ಲೆಕ್ಕಾಚಾರವೆಲ್ಲ ಇಲ್ಲದ ಹೆದರಿಕೆ.

ಮೋಪಾಸಾನಲ್ಲಿ ಒಂದು ಕಥೆ ಬರುತ್ತದೆ. ಯಾವನೋ ಒಬ್ಬ ವ್ಯಕ್ತಿ ಒಬ್ಬ ಹೆಣ್ಣು ಮಗಳ ಕೂಡ ಹೋಟೆಲಿಗೆ ಹೋಗಿರುತ್ತಾನೆ. ಅಲ್ಲಿ ಇನ್ನೊಬ್ಬ ಆ ಹೆಣ್ಣು ಮಗಳನ್ನೇ ದುರುಗುಟ್ಟಿ ನೋಡುತ್ತಾನೆ. ಇದರಿಂದ ಉದ್ರಿಕ್ತನಾದ ಈತ ಅವನಿಗೆ ಹೀಯಾಳಿಸಿ ಮಾತನಾಡುತ್ತಾನೆ. ಇಬ್ಬರಿಗೂ ಬಾಯಿಗೆ ಬಾಯಿ ಹತ್ತಿ ಮರುದಿವಸ ಇಬ್ಬರೂ ದ್ವಂದ್ವಯುದ್ಧ ಮಾಡುವುದೆಂದು ನಿರ್ಣಯವಾಗುತ್ತದೆ. ಈ ಹೆಣ್ಣು ಮಗಳ ಕೂಡ ಹೋದ ವ್ಯಕ್ತಿ ಏನೂ ಹೇಡಿಯಲ್ಲ, ಸರಿ ಎಂದು ಹೇಳಿ ಮನೆಗೆ ಹೋಗುತ್ತಾನೆ. ಆದರೆ ಮನೆಗೆ ಹೋದಮೇಲೆ ಇವನ ದೂರದೃಷ್ಟಿ ಜಾಗೃತವಾಗುತ್ತದೆ. ಅವನಿಗೆ ನಿದ್ರೆಯೇ ಬರುವದಿಲ್ಲ, ತನ್ನನ್ನು ಆಹ್ವಾನಿಸಿದವನು ಯಾರು? ಅವನ ಶಕ್ತಿ ಏನು? ಅವನು ಎಂಥ ಗಟ್ಟಿಗ? ಎಂದು ಮೊದಲಾಗಿ Telephone Directory ಹುಡುಕುವದರಲ್ಲಿಯೇ ಇಡೀ ರಾತ್ರಿಯನ್ನು ಕಳೆಯುತ್ತಾನೆ. ಮರುದಿನ ಮುಂಜಾನೆ ಆಳು ಇವನನ್ನು ಹಾಸುಗೆಯಿಂದ ಎಬ್ಬಿಸಲು ಬಂದಾಗ, ಅಲ್ಲಿರುವುದು ಅವನ ಜೀವಂತ ದೇಹವಲ್ಲ, ಹೆಣ. ಅತಿಯಾದ ವಿಚಾರಶಕ್ತಿ, ಹೆದರಿಕೆ, ಲೆಕ್ಕಾಚಾರ, ದೂರದೃಷ್ಟಿ ಅವನ ಅವಸಾನಕ್ಕೆ ಕಾರಣವಾಯಿತು.

Dean Inge ಒಂದು ಘಟನೆ ಹೇಳುತ್ತಾರೆ. ಹೇಗದಲ್ಲಿ ರಾಯಭಾರಿ ಯಾಗಿದ್ದ BULSTRODE Whitelocke ಎಂಬವನಿಗೆ ಸಂಬಂಧಿಸಿದ ಘಟನೆ ಇದು. Bulstrode ಹೇಗದಲ್ಲಿ ರಾಯಭಾರಿಯಾಗಿದ್ದರಂತೆ. ಆಗಲೇ ಅವರ ದೇಶದ ನಡುವೂ ಇನ್ನೊಂದು ದೇಶಕ್ಕೂ ಯುದ್ಧ ಪ್ರಾರಂಭವಾಯಿತು. ಯುದ್ಧ ಅಲ್ಲಿ ಪ್ರಾರಂಭವಾದರೆ, ಇಲ್ಲಿ ಈ ಮನುಷ್ಯನಿಗೆ ನಿದ್ರೆ ಬರಲೊಲ್ಲದು. ಎಲ್ಲೆಲ್ಲಿಯೂ ಮಲಗಲೊಲ್ಲ ಪ್ರಾಣಿ. ಇಡೀ ರಾತ್ರಿ ತನ್ನ ಹಾಸುಗೆಯನ್ನು ಬಿಟ್ಟು ಇತ್ತಿಂದ ಅತ್ತ, ಅತ್ತಿಂದ ಇತ್ತ ಶತಪಥ ಪ್ರಾರಂಭಿಸಿದ. ಇದರಿಂದ ಬಾಗಿಲದ ಹೊರಗೇ ಮಲಗಿಕೊಂಡಿದ್ದ ಅವನ ಆಳಿಗೂ ಎಲ್ಲೆಲ್ಲಿಯೂ ನಿದ್ರೆ ಬರಲೊಲ್ಲದು. ಪಾಪ! ಆಳು ನೋಡಿಯೇ ನೋಡಿದ ಏನಾದರೂ ಆಸಾಮಿ ಮಲಗುತ್ತದೆಯೇ ಎಂದು. ಎಲ್ಲಿಯೂ ಮಲಗಲೊಲ್ಲದು. ಬರೀ ಯುದ್ಧ ಯುದ್ಧ ಎಂದು ವಟಗುಟ್ಟುತ್ತ ಶತಪಥ ಪ್ರಾರಂಭ. ಕೊನೆಗೆ ಬೇಸತ್ತು ಆಳೇ ರಾಯಭಾರಿಯ ಹತ್ತಿರ ಬಂದ.

"ಸ್ವಾಮೀ, ಕ್ಷಮಿಸಿ, ನಾನೊಂದು ಪ್ರಶ್ನೆ ಕೇಳಬಹುದೇ?"

"ಓಹೋ! ಅವಶ್ಯ!!" ಎಂದರು ನಿದ್ರೆಯಿಲ್ಲದ ರಾಯಭಾರಿ.

"ಸ್ವಾಮೀ.... ನೀವು ಈ ಭೂಮಿಯಲ್ಲಿ ಹುಟ್ಟಿಬರುವದಕ್ಕಿಂತ ಮೊದಲು ಈ ಭೂಮಿ ಸುಖವಾಗಿದ್ದಿತೇ?"

"ಓಹೋ! Yes! Definitely."

"ಸ್ವಾಮೀ ನೀವು ತೀರಿಕೊಂಡು ಹೋದ ನಂತರ ಈ ಭೂಮಿ ಸುಖವಾಗಿ ಇರಬಹುದೇ? "

"ಓಹೋ! Definitely."

"ಸ್ವಾಮಿ, ನೀವು ಬರುವ ಮೊದಲು ಈ ಭೂಮಿ ಸುಖವಾಗಿತ್ತು. ನೀವು ಹೋದಮೇಲೆ ಈ ಭೂಮಿ ಸುಖವಾಗಿರುತ್ತದೆ. ಅಂದ....ಮೇಲೆ ನೀವು ಬದುಕಿದ್ದಾಗ ಮಾತ್ರ ಇಷ್ಟೇಕೆ ತೊಂದರೆಪಟ್ಟುಕೊಳ್ಳುತ್ತೀರಿ?"

ಈ ಮಾತನ್ನು ಕೇಳಿದ ರಾಯಭಾರಿ ಸುಖವಾಗಿ ನಿದ್ರೆಹೋದರಂತೆ. ಈ ದೂರ ದೃಷ್ಟಿಯ ವ್ಯವಹಾರವೆಲ್ಲ ಹೀಗೆಯೇ. ಇಡೀ ರಾತ್ರಿ ನಿದ್ರೆ ಕಟ್ಟಿ ಹಾಕಿದ ಲೆಕ್ಕಾಚಾರ ಬೆಳಗಾಗುವುದರಲ್ಲಿ ಎಲ್ಲಿ ಹೋಗುತ್ತದೋ ಯಾರು ಬಲ್ಲರು. ಹೆದರಿದ ಯಾತನೆಗಳು ಎಲ್ಲಿ ಮಾಯವಾಗುತ್ತವೋ ಯಾರು ಬಲ್ಲರು? Gardiner ಹೇಳಿದ ಹಾಗೆ "I have had many and severe troubles in my life. BUT MOST OF THEM NEVER HAPPENED."

ಅಂದಮೇಲೆ, ಡಾಕ್ಟರರು ಹೇಳಿದ ದೂರದೃಷ್ಟಿ ನನಗಿಲ್ಲದಿದ್ದರೂ ಏನಾಯಿತು. **ನಾಳೆ ಭವಿಷ್ಯತ್ಗರ್ಭ; ನಿನ್ನೆ ಸತ್ತು ಹೋಗಿದೆ; ಇಂದಿನಲ್ಲಿ ಬದುಕಿದರೆ ಸಾಕು....** ಹೀಗೆ ನಾನು ವಿಚಾರ ಮೆಲುಕುಹಾಕುತ್ತಿರುವದರಲ್ಲಿಯೇ ಇನ್ನೂ ಹತ್ತಾರು ನೇತ್ರ ರೋಗಿಗಳನ್ನು ಪರೀಕ್ಷಿಸಿ ಬಂದ ಡಾಕ್ಟರರು ಕೇಳಿದರು.

"ಏನು ನಿಮ್ಮ ಯೋಚನೆ ಮುಗಿಯಿತೇ? ಏನು ನಿಶ್ಚಯಿಸಿದಿರಿ? ಚಷ್ಮಾ ಕೊಡಬೇಕೆ?" ಎಂದು.

ನಾನು ಕೇಳಿದೆ "ಸಾರ್, ನೀವು ಈಗ ಮಾಡಿದ ಕಣ್ಣಿನ ಪರೀಕ್ಷೆಗೆ ಎಷ್ಟು ಚಾರ್ಜು, ಇನ್ನು ದಯಪಾಲಿಸಬೇಕೆಂದಿರುವ ಚಷ್ಮಕ್ಕೆ ಎಷ್ಟು ಚಾರ್ಜು?" ಎಂದು.

ಡಾಕ್ಟರರು ಹೇಳಿದರು – "ಈಗಿನದು ಹದಿನೈದು ರೂಪಾಯಿ. ಮುಂದಿನದು ಐವತ್ತು."

ಮುಂದಿನ ಐವತ್ತರ ದೂರದೃಷ್ಟಿಗಿಂತ, ಈಗಿನ ಹದಿನೈದರ ಸಮೀಪ ದೃಷ್ಟಿಯೇ ಸುರಕ್ಷಿತವೆಂದು ನಾನು ಡಾಕ್ಟರ ಕೈಯಲ್ಲಿ ಹದಿನೈದು ರೂಪಾಯಿ ಇಟ್ಟು ಅಲ್ಲಿಂದ ಪಲಾಯನ ಹೇಳಿದೆ.

ಅಂದಿನಿಂದ ಇಂದಿನವರೆಗೆ ನನಗೆಂದೂ ತಲೆಶೂಲಿಯೆದ್ದಿಲ್ಲ. ಆದರೆ, ಆಫೀಸಿನಿಂದ ಮರಳಿ ಬಂದಾಗ ಆರು ಗಂಟೆಯ ಚಹಾ ಮಾತ್ರ ಎಂದೂ ನಾನು ತಪ್ಪಿಸಿಲ್ಲ.

# ಧೂಮ್ರವಲಯಗಳು

ಯಾರನ್ನಾದರೂ ದ್ವೇಷಿಸು ಎನ್ನುವುದು ಕಮ್ಯುನಿಸ್ಟ ತತ್ವ. ಕೊನೆಗೆ ಯಾರೂ ಸಿಗದಿದ್ದರೆ, ಏನನ್ನಾದರೂ ದ್ವೇಷಿಸು ಎಂಬುದು ಆದರ ಮಹತ್ವ. ಕಮ್ಯುನಿಸ್ಟರು ಕೊನೆಗೆ ತಮ್ಮ ಶಬ್ದದಲ್ಲಿಯ ಸ್ಟೆಲಿಂಗನ್ನಾದರೂ ದ್ವೇಷಿಸುವರು. ಜಗತ್ತೇ ಹೀಗೆ ಸ್ವಾಮಿ. ಯಾರೂ ಸಿಗದಿದ್ದರೆ, ಗುಬ್ಬಿಯನ್ನಾದರೂ ನಿರ್ಮಾಣ ಮಾಡಿ, ಆದಕ್ಕೇ ಬ್ರಹ್ಮಾಸ್ತ್ರ ಹೂಡಿಯಾರು! ಇಂದಿನ ಜಗತ್ತಿನಲ್ಲಿ ಗುಬ್ಬಿಯ ಮೇಲೆಯೇ ಬ್ರಹ್ಮಾಸ್ತ್ರ, ಎಲ್ಲರೂ ವೀರರು, ಎಲ್ಲರೂ ಶೂರರು ಕಾಳಗದ ಮುಖದಲ್ಲಿ ಕಾಣಬೇಕಲ್ಲದೆ, ಬಾಯಿ ಮಾತಿನಲ್ಲಿ ಅಲ್ಲ, ನಿಜವಾಗಿ ಗರಿದೋರೆ ಗಂಡರೆಂಬರ ಕಾಣೆ : ಏರಿಸೋಂಕಲು ಮುನಿಯಿಲ್ಲ: ನಂಟುತನವೇನವನ? ಬಂಟತನವೇನವನ!! ಹುಲ್ಲಗಿಚ್ಚು ಹೊಲೆಯರ ಮೇಳಾಪ!

ಯಾಕೆ ಈ ಮಾತು ಅಂದಿರಾ? ಹೇಳುತ್ತೇನೆ ಕೇಳಿ. ಅಲ್ಲಾ! ಈಗ ಬ್ರಹ್ಮ ಸೃಷ್ಟಿಯಾದ ಈ ಯವನೀ ನವನೀತ ಕೋಮಲಾಂಗಿಯಾದ ಸಿಗರೇಟಿನ ಸುತ್ತಲೇ

ಎದ್ದಿರುವ ಅನವಶ್ಯಕವಾದ ಈ ಹೊಗೆಯನ್ನು ನೋಡಿದರೆ, ನೀವೂ ನಾನು ಹೇಳಿದ ಹಾಗೆಯೇ ಹೇಳುವಿರಿ. ಪಾಪ! ಸಿಗರೇಟು ಎಷ್ಟು ಸುಂದರವಾಗಿದೆ. ಆ ಮೃದುವಾದ ನುಣುಪು! ಅತಿ ಕಿರಿದೂ ಅಲ್ಲದ ಅತಿ ಉದ್ದವೂ ಅಲ್ಲದ ಆ ಸುಂದರ ವಸ್ತು!! ಆ ಅಚ್ಚ ಮಲ್ಲಿಗೆಯ ಶುಭ್ರತೆ!! ತನ್ನ ಪಾಡಿಗೇ ತಾನು Packet ಇನಲ್ಲಿ ಬಿದ್ದುಕೊಂಡಿರುವ ಅನ್ಯಾದೃಶವಾದ ಶಿಶು ಸಹಜ ಮುಗ್ಧವಿನಯ. ಜಗತ್ತು ಈ ಚೆಲುವೆಯೊಡನೆ ಯುದ್ಧ ಸಾರಲು, ಸಿಗರೇಟೇನು, ಕತ್ತಿ-ಗುರಾಣಿ ಹಿಡಿದು Packet ಇನಿಂದ ಹೊರಗೆ ಬಂದಿತ್ತೇ? ಮನೆಯಲ್ಲಿ ಹಾಯಾಗಿ ಇದ್ದವಳ ಮೇಲೆ ಹೋಗಿ ಪರಾಕ್ರಮ ಸಾರುವ ಬಂಟರು ಇಂದಿನವರು. ಅದರಲ್ಲಿಯೂ ಸಿಗರೇಟ್ ಸುಂದರಿಯ ಮೇಲೆ. ಸಿಗರೇಟಿನ ಒಳ-ಹೊರಗಿನ ಪವಿತ್ರ ಶುಭ್ರತೆಯಾದರೂ ಈ ಕೊಲೆಗಡಕರ ಕೈ ಎತ್ತದಂತೆ ಮಾಡಬೇಕು. ನನಗಂತೂ ಸಿಗರೇಟನ್ನು ಕಂಡರೆ, ಮಹಾಶ್ವೇತೆಯನ್ನು ಕಂಡಂತೆ ಎನಿಸುತ್ತದೆ. ಬ್ರಹ್ಮಸೃಷ್ಟಿಯ ಮಹಾಶ್ವೇತೆ ಎಂದರೆ ಸಿಗರೇಟು!

ಇಂಥ ಸುಂದರಿಯ ವಿರುದ್ಧ ಎಷ್ಟು ಸಂಚು-ಎಷ್ಟು ಮೋಸ! ಎಷ್ಟು ಕುತಂತ್ರ!! ಸಿಗರೇಟಿನ ಅಸ್ತಿತ್ವವನ್ನು ಸುಟ್ಟುಹಾಕಲು ಪ್ರಪಂಚ ಹೂಡಿದ ಕುತ್ರಂತ್ರ, ಮಾಡಿದಷ್ಟು ಪ್ರಯತ್ನ ಯಾವ ಮೊಗಲ ದರಬಾರದಲ್ಲಿಯೂ ನಡೆದಿರಲಿಕ್ಕಿಲ್ಲ, ಔರಂಗಜೇಬನ ಕಾಲದಲ್ಲಿಯೂ ನಡೆದಿರಲಿಕ್ಕಿಲ್ಲ. ಸುಟ್ಟು ಸತಿಹೋಗಲೆಂದೇ ಹುಟ್ಟಿದ ಈ ಸುಂದರ ಮಹಾಶ್ವೇತೆಯ ಅಸ್ತಿತ್ವವನ್ನೇ ಉಡುಗಿಸಿಬಿಡಬೇಕೆಂಬ ಹುಚ್ಚು ಹಟ ಯಾಕೆ ಈ ಜಗತ್ತಿಗೆ? ಲಕ್ಷ್ಯದಲ್ಲಿಡಿ; ನೀವು ಸುಟ್ಟುಹಾಕಬೇಕೆಂದಷ್ಟೇ ತನ್ನ ಬೂದಿಯಲ್ಲಿಯೇ ನಿರ್ಮಾಣಹೊಂದುವ ಫೀನಿಕ್ಸ್ ಪಕ್ಷಿ ಇದ್ದ ಹಾಗೆ ಸಿಗರೇಟು. ಅದನ್ನು ನೀವು ಎಂದೂ ಕೊಂದುಹಾಕಲಾರಿರಿ. ಕೊಂದುಹಾಕಬೇಡಿರಿ. ಸಿಗರೇಟು ಜಗತ್ತಿನಿಂದ ಹೋದರೆ, ಬ್ರಹ್ಮನಿರ್ಮಿತಿಯ ಸೌಂದರ್ಯದ ಸೃಷ್ಟಿಯೊಂದು ಕೊನೆವರೆಗೂ ಕಣ್‌ಮರೆ ಯಾದೀತು!- ಮಲ್ಲಿಗೆ ಹಾಳಾದ ಹಾಗೆ, ತಾಜಮಹಲ್ ಅಳಿದ ಹಾಗೆ, ಶೃಂಗಾರಸಾರ ಸ್ತ್ರೀರೂಪವೇ ಹಾಳಾದ ಹಾಗೆ.

ಯಾಕೆ ಇಷ್ಟೆಲ್ಲಾ ಆಕ್ರೋಶವೆನ್ನುತ್ತೀರಾ?..... ಏನು ಬೆನ್ನಲ್ಲಿ ಚೂರಿ ಇರಿದು, ತೆಪ್ಪಗೆ ಬಕ ಧ್ಯಾನದಲ್ಲಿ ಕುಳಿತವರ ಹಾಗೆ ಮಾತನಾಡುತ್ತಿದ್ದೀರಲ್ಲಾ? ಏನು ಸಿಗರೇಟಿನ ವಿರುದ್ಧ ಯಾವ ಅಪಪ್ರಚಾರ ನಡೆದಿದೆ ಎನ್ನುತ್ತೀರಾ? ಅದೇಕೆ ಸ್ವಾಮೀ ಇಡೀ ಜಗತ್ತೇ ಈ ಸುಂದರಿಯನ್ನು ಕಲ್ಲಿನ ಕಂಭಕ್ಕೆ ಕಟ್ಟಿ ತನ್ನ ತೋಫು-ತುಬಾಕಿಗಳನ್ನೆಲ್ಲಾ ಅವಳೆದುರು ತಿರುಗಿಸಿದೆಯಲ್ಲಾ! ಏನೂ ಅರಿಯದವರ ಹಾಗೆ ಮಾತನಾಡುತ್ತಿದ್ದೀರಲ್ಲಾ ನೀವು. ನಾನು ಆಗಲೇ ಹೇಳಲಿಲ್ಲವೇ ಸಿಗರೇಟಿನ ವಿರುದ್ಧ ನಡೆದ ಮೋಸ ಕುತಂತ್ರ ಜಾತಿನಿಂದೆ

ಯಾವ ಮೊಗಲ ದರ್ಬಾರದ ಕಾಲದಲ್ಲಿಯೂ ನಡೆದಿರಲಿಕ್ಕಿಲ್ಲವೆಂದು. ವಿವರಣೆ ಬೇಕೆ? ಹೇಳುತ್ತೇನೆ ಕೇಳಿರಿ.

ಇಂದು ಇಡೀ ಜಗತ್ತೇ ಸಿಗರೇಟಿನ ವಿರುದ್ಧ ಆಯುಧ ಎತ್ತಿ ನಿಂತಿದೆ. ಹಿರಿಯರು, ಶಿಕ್ಷಕರು, ಧರ್ಮಗುರುಗಳು, ಡಾಕ್ಟರರು, ತತ್ವಜ್ಞಾನಿಗಳು, ಸರಕಾರಗಳು, ಅರಸರು, ಮತ್ತೇನು ಬೇಕು ಸ್ವಾಮೀ? ಇವರೊಬ್ಬರಾದರೂ, ಸಾಕಾಗಿತ್ತು ಈ ಬಡ ಪ್ರಾಣಿಯ ಆತ್ಮಾಹುತಿಗೆ ಇಷ್ಟೆಲ್ಲಾ ಜನರೇ ತೋಪು ತಿರುಗಿಸಿದರೂ, ಇನ್ನೂ ಈ ಪ್ರಾಣಿ ಬದುಕಿದೆಯೆಂದ ಮೇಲೆ ಏನಾದರೂ ಅಂತಸ್ಸತ್ವವಿಲ್ಲದೇ ಬದುಕೀತೇ?

ನಿಜವಾಗಿ ಹೇಳಿರಿ. ಯಾವ ಹಿರಿಯರು ತಮ್ಮ ಮಕ್ಕಳಿಗೆ ಬ್ರಹ್ಮೋಪದೇಶ ಮಾಡಿದ ಹಾಗೆ ಬೆಳೆದು ದೊಡ್ಡವನಾದ ಮೇಲೆ – "ಸಿಗರೇಟು ಸೇದು; ಈ ಶುಭ್ರ ಇಂಧನಗಳ ಅಗ್ನಿಹೋತ್ರಿ ಇಡು" ಎಂದು ಉಪದೇಶಿಸುತ್ತಾರೆ? ಎಲ್ಲರೂ ಹೇಳುವವರೇ "ಸಿಗರೇಟು ಸೇದಿದೆಯೋ ಕಾಲ್ ಮುರಿದು ಕೈಗೆ ಕೊಟ್ಟೇನೆಂದು" ಹಾಗಿದ್ದರೆ, ಹ್ಯಾಗೆ ಬದುಕಬೇಕು ಸಿಗರೇಟು? ಹೇಳಿರಿ. ಹೋಗಲಿ! ಯಾವ ಶಿಕ್ಷಕ ತನ್ನ ವಿದ್ಯಾರ್ಥಿಗೆ ವಿದ್ಯಾದಾನ ಮಾಡುವ ಹಾಗೆ ಸಿಗರೇಟ್ ದಾನವನ್ನೂ ಮೋಫತ್ ಆಗಿಯಾದರೂ ಎಂದಾದರೂ ಮಾಡಿದ್ದಾನೆಯೇ? ಗುರುವನ್ನು ನೋಡಿ, ಕುಶಾಗ್ರ ಬುದ್ಧಿಯ ವಿದ್ಯಾರ್ಥಿಗಳು ತಾವಾಗಿಯೇ ಏನಾದರೂ ಸ್ವಂತ ಪರಿಶ್ರಮದಿಂದ ಈ ತ್ರೇತಾಗ್ನಿ ಸ್ವರೂಪವಾದ ದಕ್ಷಿಣ ಆಹವನೀಯ ಗಾರ್ಹಪತ್ಯಾಗ್ನಿಯನ್ನು ಸಂಪಾದಿಸಿ ಕೊಳ್ಳಬೇಕು. ಯಾವ ವಾಜಸ್ರವಸ ಈ ಆಧುನಿಕ ನಚಿಕೇತನಿಗೆ ತ್ರೇತಾಗ್ನಿ ಸ್ವರೂಪವಾದ ಈ ಅಗ್ನಿವಿದ್ಯೆಯ ಉಪದೇಶವನ್ನು ಮಾಡಿದ್ದಾನೆ ಹೇಳಿರಿ. ಸ್ವಲ್ಪ ವಾಸನೆ ಬಂದರೆ ಸಾಕು. ಕ್ಲಾಸು ಬಿಟ್ಟು ಹೊರಗೆ ಹಾಕುವವರೇ? ಡಾಕ್ಟರರೂ ಅಷ್ಟೇ. ಸಿಗರೇಟು ಸೇದಿದರೆ, ಕ್ಯಾನ್ಸರ್ ಆಗುತ್ತದೆ. ಆಯುಸ್ಸು ಕಡಿಮೆಯಾಗುತ್ತದೆ ಎಂದು ತುತೂರಿ ಹಚ್ಚಿ ಸಾರುವವರೇ. ಅಂದಮೇಲೆ ಹೇಗೆ ಬದುಕಬೇಕು ಈ ಬಡಪ್ರಾಣಿ. ವ್ಯಕ್ತಿಗಳಷ್ಟೇ ಸಾಲದು ಎನ್ನುವಂತೆ ಸರಕಾರಗಳೂ ಕೂಡ ಕೈತೊಳೆದುಕೊಂಡು ಬೆನ್ನುಹತ್ತಿವೆ. – ಈ 'ಯವನೀ ನವನೀತ ಕೋಮಲಾಂಗಿಯ' ಸುತ್ತು. ನಿಜವಾಗಿ ಇಂಗ್ಲೆಂಡ್ ಮತ್ತು ಅಮೆರಿಕಾ ದೇಶ ಈ ನಿರಪರಾಧಿ ಅಕಳವನ್ನು ಕೊಂದುಹಾಕಲು ಮಾಡಿದ ಪ್ರಯತ್ನದ ಅರ್ಧದಷ್ಟು ಪ್ರಯತ್ನವನ್ನು ಮತ್ತಾವುದಾದರೂ ಸತ್ಕಾರ್ಯಕ್ಕೆ ಉಪಯೋಗ ಮಾಡಿದ್ದರೆ, ಜಗತ್ತಿನ ಕಲ್ಯಾಣವಾದರೂ ಆಗುತ್ತಿತ್ತು.

ಇಂದಿನಿಂದಲ್ಲ ನಿನ್ನೆಯಿಂದಲ್ಲ ೧೯೬೨ನೆಯ ಇಸವಿಯಿಂದ ಯುದ್ಧ

ಸಾರುತ್ತಲಿವೆ - ಬ್ರಿಟಿಶ್ ಮತ್ತು ಅಮೆರಿಕಾ ಸರಕಾರಗಳು. ಬ್ರಿಟನ್ನದ Royal College of Physicians ಎಂಬ ಸಂಸ್ಥೆ ಸಿಗರೇಟು ಅಪಾಯಕಾರಿ ಎಂದು ಒಂದು ಸಲ ಘೋಷಣೆ ಹೊರಡಿಸಿತು. ಬ್ರಿಟನ್ನದ ಮಕ್ಕಳಾದ ಅಮೆರಿಕನ್ನರು ಹಿಂದೆ ಬಿದ್ದಾರೆಯೇ? ಅವರೂ ಅದೇ ಸೂತ್ರವನ್ನೇ ಮುಂದುವರೆಸಿದರು. ಅಮೆರಿಕಾ ದೇಶದ Surgeon General Luther Terry ಎನ್ನುವವರಿಗೆ ಸಹಾಯಕವಾಗಿ ಒಂದು ಮಂಡಲವನ್ನು ನಿಯಮಿಸಿ, ಸತ್ಯ ಎನ್ನುವುದರ ಶೋಧನೆಗೆ ಹೊರಟಿತು ಈ ತಂಡ. ಅಂತೂ ಅಳೆದೂ ಸುರಿದೂ ಈ ತಂಡ "Smoking and Health" "ಧೂಮ್ರಪಾನ ಮತ್ತು ಆರೋಗ್ಯ" ಎಂಬ ವಿಷಯವಾಗಿ ಮೂರುನೂರಾ ಎಂಬತ್ತೇಳು ಪುಟದ ಒಂದು ಉದ್ಗ್ರಂಥವನ್ನು ಪ್ರಕಟಿಸಿತು. ಜನೆವರಿ ತಿಂಗಳದ ಶನಿವಾರದ ಒಂದು ದಿನ ಮುಂಜಾವು ೧೧ ಗಂಟೆಗೆ ಸುಮಾರು ನೂರು ಜನ ಪತ್ರಿಕಾಪ್ರತಿನಿಧಿಗಳನ್ನು ಆಹ್ವಾನಿಸಿ ಈ ಮಂಡಲ ವಾಶಿಂಗ್ಟನ್‌ದಲ್ಲಿ ತನ್ನ ಮಹಾ ನಿರ್ಣಯವನ್ನು ಸಾರಿತು "Cigarette smoking is a health hazard of sufficient importance in the United States...." ಎಂದು. ಅಂದಿನಿಂದ ತುಟಿಯ ವರೆಗೆ ಸಿಗರೇಟನ್ನು ಒಯ್ದು ಎಷ್ಟೋ ಕೈಗಳು ಮನಸ್ಸಿಲ್ಲದ ಮನಸ್ಸಿನಿಂದ ಸಿಗರೇಟನ್ನು ಕಳಚಬೇಕಾಯಿತು. ಇವೆಲ್ಲದರಿಂದ ನೀವು ಸಾಧಿಸಿದ ಪುರುಷಾರ್ಥವಾದರೂ ಏನು ಎನ್ನುತ್ತೇನೆ. ಪುರಿಟನ್‌ರ ಹಾಗೆ ಇನ್ನೊಬ್ಬರ ಸುಖವನ್ನು ಹನನ ಮಾಡಿದ ಆತ್ಮತೃಪ್ತಿಯು ಮಾತ್ರವಲ್ಲವೇ? ಈ ವರದಿ ಹೇಳಿದ ಗಂಡಾಂತರವೆಂದರೆ ಇವು - (i) ಸಿಗರೇಟಿನಿಂದ ಗಂಡಸರಿಗೆ ಪುಪ್ಪುಸದ ಕ್ಯಾನ್ಸರ್ ರೋಗ ಬರುತ್ತದೆ - (ii) Chronic Bronchitis ಇಗೆ ಇದು ಮಹತ್ವದ ಕಾರಣ (iii)ಇದರಿಂದ ಉಸುರು ಗಟ್ಟಿದಂತಾಗುತ್ತದೆ. (iv) ಗರ್ಭಿಣಿ ಸ್ತ್ರೀಯರು ಸಿಗರೇಟು ಸೇದಿದರೆ, ಕಡಿಮೆ ತೂಕದ ಮಕ್ಕಳನ್ನು ಹೆರಬಹುದು. (v) ಧೂಮ್ರಪಾನ ಮಾಡುವ ಗಂಡಸರಲ್ಲಿ ಹೃದಯ ರೋಗಗಳು ಹೆಚ್ಚುತ್ತಿವೆ ಇತ್ಯಾದಿ ಇತ್ಯಾದಿ. ಸಿಗರೇಟ್‌ವಾದಿಗಳು ಇವೆಲ್ಲಕ್ಕೂ ಉತ್ತರ ಕೊಡಬೇಕೋ? ಕೊಡುವ ಅವಶ್ಯಕತೆಯಾದರೂ ಇದೆಯೇ? ಏನು ಮಹಾ ಸತ್ಯ ಹೇಳಿದ ಹಾಗಾಯಿತು ಈ ವಿದ್ವನ್ಮಂಡಲಿ? ಹತ್ತಾರು ತಿಂಗಳು ಈ ಬುದ್ಧಿವಂತಿಕೆಯ ಗರ್ಭ ಹೊತ್ತೂ ಹೊತ್ತೂ ಕೊನೆಗೆ ಪರಿಣಾಮ ಈ ಪರ್ವತ ಪ್ರಸವ ಮಾತ್ರ ತಾನೆ? "ವಜ್ರದೇಹಿಗಳೆಂದೆ ಗೊನೆಮಿಂಚು ಎನಕೊಂಡೆ ವಿಜಯವಿರಲೆಂದು ಹರಸೀ"- ಆದರೆ ಕೊನೆಗೆ ಹೊರಬಿದ್ದ ಮುಕ್ತಾ ಫಲಗಳು ಇಷ್ಟೇ ತಾನೆ? ಅವಿವೇಕದ ನಿರ್ಣಯಗಳಿಗೆ ವಿವೇಕಿಗಳು ಉತ್ತರ ಕೊಡಬೇಕಾಗಿಲ್ಲ. ಸಿಗರೇಟ್ ಸೇವನೆಯ್ಡಿಂದ ಗಂಡಸರಿಗೆ ಪುಪ್ಪುಸ Cancer ಬರುತ್ತದಂತೆ. ಹೋಗಲಿ ಪುರುಷನ ಅರ್ಧಾಂಗಿಯಾದ

ಉತ್ತಮಾಂಗಿಯಾದ ಸ್ತ್ರೀಗಾದರೂ ಸಿಗರೇಟು ಸೇದಗೊಡಿ. ಎಲ್ಲಿಯಾದರೂ ಪ್ರಜ್ವಲಿಸಲಿ ಈ ಜ್ಞಾನಜ್ಯೋತಿ. ಎಲ್ಲಿಯಾದರೂ ಹೊಗೆ ಇರಲಿ. Bronchitis ಏನು ಮಹಾರೋಗವೇ ಇದು? ಇದೇನು ಕ್ಷಯರೋಗವೇ? ಯಾಕೆ ಹೆದರಿಸುತ್ತೀರಿ ಸುಮ್ಮನೆ ಅಳ್ಳೆದೆಯವರನ್ನು? ಉಸಿರು ಯಾತರಿಂದ ಕಟ್ಟಿಲ್ಲ? ಭೂಮಿಗೇ ಭಾರವಾದ ಇಂದಿನ ಕಾಲದಲ್ಲಿ ಕಡಿಮೆ ತೂಕದ ಕೆಲವು ಮಕ್ಕಳೂ ಇರಲಿ ಅಲ್ಲ? ಎಲ್ಲರೂ Weighty ಜನರೇ ಜಗತ್ತಿನಲ್ಲಾದರೆ ಜಗತ್ತು ತಡೆದೀತು ಹೇಗೆ? "ತಿಣಕಿದನು ಫಣಿರಾಯ". ಇನ್ನು ಹೃದಯ ರೋಗ. ಎಷ್ಟೆಷ್ಟು ರೀತಿಯಿಂದ ಮನುಷ್ಯನಿಗೆ ಹೃದಯರೋಗ ಆಗಿಲ್ಲ? ವಿದ್ಯಾರ್ಥಿಗೆ ಪರೀಕ್ಷೆ ಎಂದರೆ ಹೃದ್ರೋಗ; ಅಧ್ಯಾಪಕನಿಗೆ ಪಾಠಕ್ರಮ ಎಂದರೆ ಹೃದ್ರೋಗ; ರಾಜಕಾರಣಿಗೆ ಕೊಟ್ಟ ವಚನ ಪೂರೈಸುವುದೆಂದರೆ ಹೃದ್ರೋಗ; ಆಡಳಿತಗಾರನಿಗೆ ಪುಕ್ಕಟೆ ಕೆಲಸ ಎಂದರೆ ಹೃದ್ರೋಗ-ಇಷ್ಟೆಲ್ಲ ಹೃದ್ರೋಗದ ಕಾರಣ ಮತ್ತು ರೂಪಗಳಿರುತ್ತಿರುವಾಗ ಕೇವಲ ಸಿಗರೇಟಿಗೆ ಮಾತ್ರ ಅನ್ವಯಿಸುವಲ್ಲಿ ಏನರ್ಥವಿದೆ? ಆದ್ದರಿಂದ ಮುಚ್ಚಿಬಿಡಿ ೩೮೭ ಪುಟದ ಆ ಮಹಾ ವರದಿಯನ್ನು ಅಥವಾ ನಿಮ್ಮ ಕೈಯಲ್ಲಿ ಏನಾದರೂ ಉರಿಯುವ ಸಿಗರೇಟಿನ ತುಂಡಿದ್ದರೆ, ಅದನ್ನೇ ಆದಕ್ಕೆ ತಾಕಿಸಿಬಿಡಿ.

ಆದ್ದರಿಂದ ಸಿಗರೇಟು ಬದುಕಬೇಕು. ಈ ಅರಸು-ಸರಕಾರಗಳ ಕುತಂತ್ರ ದಲ್ಲಿಯೂ ಬದುಕಬೇಕು. ಅರಸು ಎಂದರೆ ಯಾರೆಂದು ಕೇಳುವಿರಾ? ಅದನ್ನೇ ಹೇಳುವದರಲ್ಲಿದ್ದೆ. ಒಂದು ರೀತಿ ನೋಡಿದರೆ, ಅಮೆರಿಕನ್ ಸರಕಾರ ಇಂಗ್ಲಿಷ್ ಸಾಹಿತ್ಯವನ್ನು ಓದಿದ್ದರೆ ಈ ೩೮೭ ಪುಟದ ವರದಿಯನ್ನು ಪ್ರಕಟಿಸಲು ಹೋಗುತ್ತಲೇ ಇರಲಿಲ್ಲ. ಇಂಗ್ಲಂಡದ King James ದೊರೆ ತಂಬಾಕು ಸೇದಬಾರದೆಂದು ರೇಗಿ ಈ ಬಗ್ಗೆ ಅಂದೇ ಬರೆದಿದ್ದಾನೆ. ವಿಷಯದ ತಥ್ಯಾಂತ ಏನೇ ಇರಲಿ ಪಾಪ ದೊರೆ ಕಾವ್ಯಮಯವಾಗಿ ಬಯ್ದಿದ್ದಾನೆ. ಅದಕ್ಕಾಗಿಯಾದರೂ ನೋಡೋಣ ಅವನು ಹೇಳಿದ ಮಾತುಗಳನ್ನು, King James ಹೇಳಿದ್ದು ಹೀಗೆ :

"Have you not reason then to be ashamed and to forbear this filthy novelty, so basely grounded, so foolishly received and so grossly mistaken in the right use thereof? In your abuse thereof-sinning against God, harming yourselves both in persons and goods and making thereby the marks and notes of vanity upon you, a custom loathsome to the eye, hateful to the nose, harmful to the

brain, dangerous to the lungs., and in the black stinking fume thereof, nearest resembling the horrible stygion smoke of the pit that is bottomless."

ಅಷ್ಟೇ ಅಲ್ಲ; ಸಿಗರೇಟ್ ಸೇದಿ, ದೇಹವನ್ನು ಅಡುಗೆ ಮನೆಯನ್ನಾಗಿ ಪರಿವರ್ತಿಸಿಕೊಳ್ಳಬಾರದಾಗಿ ಜೇಮ್ಸ ದೊರೆಯ ಅಭಿಪ್ರಾಯ.

"Surely, smoke becomes a kitchen far better than a fuming chamber and ye it makes a kitchen also oftentimes in the inward parts of men, soiling and infecting them with an oily kind of roof."

ಇಂಥ ಸರಕಾರ ಮತ್ತು ಸಾಮ್ರಾಟರ ವಿರುದ್ಧ ಸಿಗರೇಟು ಹೇಗೆ ತಡೆದೀತು? ಅಷ್ಟೇ ಅಲ್ಲ; ಈ ಅಧಿಕಾರದ ರಾಜದಂಡಕ್ಕೆ ಅಧ್ಯಾತ್ಮದ ಧರ್ಮದಂಡದ ನೆರವೂ ದೊರಕಿತು. ನಮಗೆಲ್ಲರಿಗೂ ವಂದ್ಯರಾದ ಮಹಾತ್ಮಾ ಗಾಂಧಿಯವರು ಕೂಡ ಈ ಬಡಪ್ರಾಣಿಯ ಮೇಲೆ ಬ್ರಹ್ಮಾಸ್ತ್ರವನ್ನೆಸೆಯುವದನ್ನು ಬಿಡಲಿಲ್ಲ. ಸಿಗರೇಟು ಸೇದುವದೆಂದರೆ ಬಾಯನ್ನು ಹೊಲಸುಗೊಳಿಸಿಕೊಂಡಂತೆ-ಬಾಯ ಹೊಗೆಗಿಂಡಿಯನ್ನು ನಿರ್ಮಾಣ ಮಾಡಿದಂತೆ. "And nobody has a right to convert his mouth into a chimney" ಎಂದು ಮಹಾತ್ಮರು ಸಾರಿದರು. ಅಲ್ಲದೆ ಧೂಮಪಾನ ಮಾಡುವವರು, ಯುಕ್ತಾಯುಕ್ತ ಪರಿಜ್ಞಾನವಿಲ್ಲದವರು; ತಾವು ಬಿಡುವ ಹೊಗೆಯಿಂದ ತಮ್ಮ ಸುತ್ತಲಿದ್ದ ಸೇದದವರಿಗೆ ಎಷ್ಟು ತೊಂದರೆಯಾಗುತ್ತವೆಂಬುದನ್ನು ಗಮನಿಸದವರು; ಬಾಯನ್ನು ಹೊಗೆಗಿಂಡಿಯಾಗಿ ಪರಿವರ್ತಿಸುವವರು; ಮತ್ತರು; ಉನ್ಮತ್ತರು - ಎಂದು ಅನೇಕ ಉಕ್ತಿ-ಪ್ರತ್ಯುಕ್ತಿಗಳಿಂದ ಸಿಗರೇಟನ್ನು ಸುರೆಯಕಿಂತ ಹೆಚ್ಚು ಉನ್ಮಾದಕವೆಂದು ಮಹಾತ್ಮರು ವಾದಿಸಿ ಅದಕ್ಕಾಗಿ ಟಾಲ್‌ಸ್ಟಾಯನ ಕಥೆಯ ದೃಷ್ಟಾಂತವನ್ನು ಕೊಟ್ಟರು :

ಟಾಲ್ಸ್ಟಾಯನ ಆ ಕಥೆಯಲ್ಲಿ ಒಬ್ಬ ವ್ಯಕ್ತಿ ಮಲಗಿದ ತನ್ನ ಹೆಂಡತಿಯನ್ನು ಕೊಲೆಮಾಡಲು ಹೋಗುತ್ತಾನೆ. ಅವಳ ಹತ್ತಿರ ಹೋಗಿ ಅವಳ ಮುಖವನ್ನು ನೋಡುತ್ತಾನೆ. ಕೊಲೆಮಾಡಲು ಕೈಯೇ ಏಳುವದಿಲ್ಲ. ಎಂಥ ಹೇಡಿ ನಾನು ಎಂದವನೇ ಹತ್ತಿರವಿದ್ದ ಸಿಗರೇಟನ್ನು ತೆಗೆದು ಎರಡು ಝುರಕಿ ಎಳೆಯುತ್ತಾನೆ. ಎಳೆಯುವುದೊಂದೇ ತಡ, ಅವನ ಉತ್ಸಾಹಶಕ್ತಿಯೆಲ್ಲ ಪುಟನೆಗೆದು ಅವನ ಕೈ ಸೆಟೆದು ನಿಲ್ಲುತ್ತದೆ. ಒಂದು, ಎರಡು, ಮೂರು ಧಡಾರ ಎಂದು ಇಳಿಸುತ್ತಾನೆ ತನ್ನ ಅಸ್ತ್ರಧಾರಿ

ಕೈಯನ್ನು ಹೆಂಡತಿಯ ದೇಹದಲ್ಲಿ. ಸಂಕಲ್ಪಿಸಿದ ಕೆಲಸ ಮುಗಿಯಿತು. ಅವನಿಂದ ಹೊರಟು ಹೋದ ಶಕ್ತಿ ಅವನಿಗೆ ಪುನಹ ಬಂದು ಸಹಾಯಕವಾಗಿ ನಿಂತಿತು. ಆದಕ್ಕೆ ಗಾಂಧೀ ಹೇಳಿದರು - "ಸಿಗರೇಟು ಇಷ್ಟು ಉನ್ಮಾದಕಾರಿ" ಎಂದು. ಸಿಗರೇಟು-ಸುರೆ-ಇವು ಅಣ್ಣ-ತಮ್ಮಂದಿರು. ಅಹಿರಾವಣ ಮಹಿರಾವಣ. ಗಾಂಧೀಜಿ ಹೇಳುತ್ತಾರೆ. If wine is Satan, cigarette is Beelzebub. ಅಂತಲೇ ಸಿಗರೇಟು ವಿನಾಶಕಾರಿ. ಕಥೆಯೇನೋ ಚೆನ್ನಾಗಿದೆ. ಆದರೆ, ಈ ಕಥೆಯಿಂದ ನಿಷ್ಪನ್ನವಾಗಬೇಕಾದ ನೀತಿ ಇದೆಯೇ ಮಹಾತ್ಮಾಜಿ? ತಮ್ಮ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ವಿಶ್ವಾಸವಿದೆ. ಭಕ್ತಿಯಿದೆ. ಶ್ರದ್ಧೆಯಿದೆ. ಪ್ರಪತ್ತಿಭಾವವಿದೆ. ಆದರೆ ಈ ಕಥೆಯ ನೀತಿಯನ್ನು ಹೇಳುವಲ್ಲಿ ತಾವೇನೋ ಸಿಗರೇಟು ಅನರ್ಥಕಾರಿ ಎಂದು ಹೇಳಿದಿರಿ. ಆದರೆ ಅಂಜಲಿಬದ್ಧರಾಗಿ ನಾವು ಪಾಮರರು ಹೇಳಿಕೊಳ್ಳುತ್ತೇವೆ. ಅದರ ನೀತಿ ಏನೂ ಹಾಗಲ್ಲ ಎಂದು... ಟಾಲ್ಸ್ಟಾಯನ ಕಥೆಯ ವ್ಯಕ್ತಿ ಒಂದು ಕೆಲಸ ಮಾಡಲು ಹೊರಟ. ಅದು ಅವನ ಕ-ರ್ತ-ವ್ಯ. ಆದರೆ, ಹೆಂಡತಿಯ ಮುಖವನ್ನು ನೋಡುತ್ತಲೇ ಮೋಹ ಆವಸನ್ನು ಆವರಿಸಿತು. ಅಂತಃಕರಣ ಗೋನಾಳಿಗೌಕಿತು. ಕರ್ತವ್ಯದೃಷ್ಟಿ ಪಲಾಯನ ಹೇಳಿತು. ಹಿಂಜರಿದ. ಅಧೀರನಾದ. ಹೇಡಿಯಾದ. ಅಂಜುಗುಳಿಯಾದ. ಇನ್ನೆರಡು ನಿಮಿಷ ಹೀಗೇ ಹೋಗಿದ್ದರೆ, ತನ್ನ ಕರ್ತವ್ಯವನ್ನೆಲ್ಲಾ ಮರೆತು ತಿರುಗಿ ಓಡಿ ಬರುವವನೇ. ಅಷ್ಟರಲ್ಲಿಯೇ, ಅವನ ಆತ್ಮದ ಹಾಗೆ, ಅವನ ಹತ್ತಿರವೇ ಇದ್ದ ಸಿಗರೇಟು, ಕುರುಕ್ಷೇತ್ರ ರಣರಂಗದಲ್ಲಿ ಶ್ರೀಕೃಷ್ಣಪರಮಾತ್ಮ ಪಾರ್ಥನಿಗೆ ಸಹಾಯಕನಾಗಿ ದೊರೆತ ಹಾಗೆ ದೊರಕಿತು. ಅವನಿಗೆ ಕರ್ತವ್ಯ ಬುದ್ಧಿಯನ್ನು ಬೋಧಿಸಿತು. ನೀನು ಯಾರಪ್ಪ ಕೊಲ್ಲುವವ? ಅವಳು ಯಾರಪ್ಪ ಕೊಲ್ಲಿಸಿಕೊಳ್ಳುವವಳು? ಅವಳು ಸತ್ತೇ ಬಿಟ್ಟಿದ್ದಾಳೆ. ನೀನೂ ಸತ್ತಿದ್ದೀ. ನಿಮ್ಮಿಬ್ಬರನ್ನೂ ಕೊಂದವ ನಾನು-ನಿಹಿತಾಃ ಏವ ಮಯಾ. ಆದ್ದರಿಂದ ಮುನ್ನುಗ್ಗು, ಕರ್ತವ್ಯವನ್ನು ಮಾಡು.

*ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ*
*ಮಾ ಕರ್ಮ ಫಲಹೇತುರ್ಭೂರ್ಮಾ ಮಾತೇ ಸಂಗೋಽಸ್ತ್ವಕರ್ಮಣಿ*

ನಿಯತಂ ಕುರು ಕರ್ಮ-ಕ್ಲೈಬ್ಯಂ ಮಾಸ್ಮಗಮಃ ಪಾರ್ಥ, ನವಿತತ್ ತ್ವಯಿ ಉಪಪದ್ಯತೇ, ಅನಾರ್ಯಜುಷ್ಟಂ ಅಸ್ವರ್ಗ್ಯಂ ಅಕೀರ್ತಿ-ಕರಮರ್ಜನ-ಹೊಡೆ-ಹೂಂ-ಎತ್ತು ಕೈ ಎಂದು ಹೇಳಿದವು ಸಿಗರೇಟ ಝುರಕಿ. ತತೋ ಯುದ್ಧಾಯ ಯುಜ್ಯಸ್ವ-ನ ಏವಮ್ ಪಾಪಮವಾಪ್ಸ್ಯಸಿ. ಅವನ ಮೆದುಳಿನಲ್ಲಿ ಝೂಂಗಟೆ ಬಾರಿಸಿದ ಹಾಗೆ ಭಗವದ್ಗೀತೆಯಲ್ಲಿಯಂತಹ ಈ ಮುಕ್ತಾಫಲಗಳು ಕುಸಿಯುತ್ತಿರುವ

ಅವನ ಧೀಶಕ್ತಿಗೆ ಪ್ರಚೋದನೆಯನ್ನು ಕೊಟ್ಟವು. ಕೈ ಎತ್ತಿದ. ಒನ್, ಟೂ, ಥ್ರೀ, ಢಡಮ್. ಕೆಲಸ ಮುಗಿಸಿದ. ಕರ್ಮವೀರನಾದ. ಸಿಗರೇಟಿನ ಸಹಾಯವಿಲ್ಲದೆ ಈ ಕೆಲಸ ಅವನಿಂದ ಆಗುತ್ತಿತ್ತೇ ಮಹಾತ್ಮಾಜಿ? ಆದ್ದರಿಂದ ಸಿಗರೇಟು ಭಗವದ್ಗೀತೆಯ ಶ್ರೀಕೃಷ್ಣ ಪರಮಾತ್ಮ ಇದ್ದ ಹಾಗೆ. ಸಾಯುವವರೆಗೂ ಅವಿಚ್ಛಿನ್ನವಾಗಿ ಕರ್ಮದಲ್ಲಿಯೇ ಕಾಲ ಕಳೆದ ತಾವು ಸ್ವಷ್ಟಾರ್ಥವನ್ನು ಬಿಟ್ಟು ಬೇರೆ ಅರ್ಥ ಯಾಕೆ ಹಚ್ಚಬೇಕು? ಅದು ಹೋದರೂ ರವೀಂದ್ರರೇ ಹೇಳಿಲ್ಲವೇ "From words of Poets men take what meanings please them; but their last meaning points to Thee" ಎಂದು. ಆದ್ದರಿಂದ ಕಥೆಯ ಕೋಲನ್ನು ಹಿಡಿದುಕೊಂಡು ಈ ಮುದ್ದು ನಾಯಿಮರಿ ಸಿಗರೇಟನ್ನು ಯಾಕೆ ಹೊಡೆಯಬೇಕು? Analogies are imperfect proof ಎಂದು ಹೇಳಲಿಲ್ಲವೇ ಶಾಸ್ತ್ರಜ್ಞರು? ಆದ್ದರಿಂದ ಕಥೆ ಸತ್ಯ. ನೀತಿ ಅಸತ್ಯ.

ಹೋಗಲಿ; ಇಷ್ಟು ದೊಡ್ಡ ತತ್ವಜ್ಞಾನದ ಮಾತೇಕೆ? ಸಿಗರೇಟ್ ಸೇದುವದರಿಂದ ಆದ ಲಾಭಗಳೆಷ್ಟು ನೀವು ಗಮನಿಸಿದ್ದೀರಾ? ಆಡುವವರು ಆಡಲಿ. ನಿಮ್ಮ ಮನಸಾಕ್ಷಿಯಾಗಿ ವಿಚಾರ ಮಾಡಿರಿ. ಬಾಳುವ ಮನೆಗೊಂದು ಬೊಗಳುವುದು ಬೇಕಂತೆ. ಈ ಟೀಕಾಕಾರವನ್ನು ನಾವು ತೆಗೆದುಕೊಂಡು ಏನು ಮಾಡೋಣ.

ನಿಜವಾಗಿ ಸಿಗರೇಟು ಸ್ನೇಹದ ಸಂಕೇತ, ಪರಿಚಯದ ಸಂಚಕಾರ; ಕಾವ್ಯದ ಸೆಲೆ, ಇಹಜೀವನದ ಬ್ರಹ್ಮಾನಂದ, ರಸಿಕತೆಯ ಮಡುವು, ಇಡೀ ನಮ್ಮ ಜೀವನದ ಪ್ರಕಾಶ. ಇಂಥ ಸಿಗರೇಟನ್ನು ಬಿಟ್ಟು ನಮ್ಮ ಜಗತ್ತು ಬಡವಾದೀತು.

ಯಾರಾದರೂ ಸ್ನೇಹಿತರು ದಾರಿಯಲ್ಲಿ ಭೆಟ್ಟಿಯಾದರೆ, ನೀವು ಅವರನ್ನು ಉಪಚರಿಸಿ, ಅವರ ಬಗೆಗಿದ್ದ ನಿಮ್ಮ ಆತ್ಮೀಯ ಭಾವವನ್ನು ವ್ಯಕ್ತಪಡಿಸಬೇಕೆನ್ನುತ್ತೀರಿ. ನಿಜವಾಗಿ ಹೇಳಿ ಇದೇನು ಬರಿಯ ಬಾಯಿಮಾತಿನಿಂದ ಸಾಧ್ಯವೇ? ಎಷ್ಟು ಮಾತಿನ ಬಣಿವೆಗಳನ್ನು ಒಟ್ಟಿದರೆ ನಿಮ್ಮ ನಿಜವಾದ ಸ್ನೇಹ ನಿಮ್ಮ ಮಿತ್ರರಿಗೆ ವಿದಿತವಾದೀತು. ಬರಿಯ ಬಣ್ಣದ ಮಾತಿನಿಂದ ಸ್ನೇಹದ ಆಳ-ಎತ್ತರಗಳನ್ನು ಅಳೆಯಲು ಸಾಧ್ಯವೇ? ಯಥಾ ವಾಚಾ ನಿವರ್ತಂತೇ ಅಪ್ರಾಪ್ಯ ಮನಸಾ ಸಹ...ಹಗಣಗಿತ್ತಿಯ ಗಂಡ ದಿನನಿತ್ಯ ಉಪವಾಸ ಬಂದ ಹಾಗಾದೀತು. ಅವನನ್ನು ಮನೆಗೆ ಕರೆದುಕೊಂಡು ಹೋಗಿ ಅರ್ಘ್ಯಪಾದ್ಯಗಳನ್ನಿತ್ತು, ಒಂದು ಕಪ್ಪು ಚಹಾ ಕೊಡಬೇಕೆಂದರೆ, ನಿಮಗೆ ವೇಳೆ ಎಲ್ಲಿದೆ ಈ ವೇಲಾದರಿದ್ರ ಜಗತ್ತಿನಲ್ಲಿ? ಅದೇ ನಿಮ್ಮ ಕಿಸೆಯಲ್ಲಿ ಒಂದು ಸುಂದರವಾದ ಸಿಗರೇಟ್ ಪೆಟ್ಟಿಗೆ ಇದೆಯೆಂದು ಭಾವಿಸಿರಿ. ಅರೆಕ್ಷಣದಲ್ಲಿಯೇ ಅಣ್ವಸ್ತ್ರ ಹಿರಿದ

ಹಾಗೆ, ನೀವು ಅದನ್ನು ಹಿರಿದು ನಿಮ್ಮ ಮಿತ್ರನ ಮುಖದೆದುರು ಹಿಡಿದಿರೋ-ನೋಡಿರಿ ಸ್ನೇಹದ ಆ ಚಿತ್ರವನ್ನು! ಅವನ ತುಟಿ ಅಲಗುತ್ತವೆ. ಕಣ್ಣು ಬೆಳಕು ತುಂಬುತ್ತವೆ. ಕೆನ್ನೆ ಹರ್ಷನಿರ್ಭರವಾಗಿ ಕೆಂಪಾಗುತ್ತವೆ. ದಂತಪಂಕ್ತಿ ಬೆಳದಿಂಗಳ ಬೆಳಕನ್ನು ಬೀರುತ್ತವೆ. ರೋಮ ರೋಮಗಳಲ್ಲಿ ಸ್ನೇಹ ಉಕ್ಕಿ ಉಕ್ಕಿ ಸೂಸುತ್ತದೆ. ಈಗ ಇದು ಸ್ನೇಹದ ಮಡುವು. ಈ ಸಾಧನೆ ಸಿಗರೇಟು ಇಲ್ಲದಿದ್ದರೆ ಎಂದಾದರೂ ಸಾಧ್ಯವಾಗುತ್ತಿತ್ತೋ? ನಿಜವಾಗಿ ಹೇಳಿರಿ. ಆತ್ಮಸಾಕ್ಷಿಯಾಗಿ ಹೇಳಿರಿ-ಹಿರಿಯರು, ಗುರುಗಳು, ಮಹಾತ್ಮರು, ಸರಕಾರ, ರಾಜದಂಡ ಇವೆಲ್ಲವುಗಳ ಹಳವಂಡವನ್ನು ಮರೆತು ಹೇಳಿರಿ. ನಿಜವಾದ ಸ್ನೇಹದ ವಿದ್ಯುತ್‌ಶಕ್ತಿಯ ಸ್ವಿಚ್ ಅಂದರೆ ಈ ಸಿಗರೇಟು. ಈಗಲಾದರೂ ಒಪ್ಪಿಕೊಳ್ಳಿ ಸ್ವಾಮಿ.

ಅಥವಾ ನೀವು ರೈಲಿನಲ್ಲಿ ಪ್ರವಾಸ ಮಾಡುತ್ತೀರಿ. ನಿಮಗೂ ಸ್ವಲ್ಪ ಸ್ಥಳ ಬೇಕಾಗಿದೆ. ಸುತ್ತಲೂ ಕತ್ತೆತ್ತಿ ನೋಡುತ್ತೀರಿ ಬಕಪಕ್ಷಿಯ ಹಾಗೆ. ಆದರೆ ಸುತ್ತೆಲ್ಲ ಗಂಭೀರವಾದ, ಹೀಯಾಳಿಕೆಯ ಮುಖಗಳು. "ಸುತ್ತೆಲ್ಲ ಕತ್ತಲಾ". ಆಗ ನಿಮ್ಮಲ್ಲಿ "ಒಳಗ ಬೆಳಗತದ ದೀಪ". ನಿಮ್ಮ ಕಿಸೆಯಲ್ಲಿಯ ಬ್ರಹ್ಮಾಸ್ತ್ರವನ್ನು ಹೊರಗೆ ತೆಗೆಯುತ್ತೀರಿ. "Do you smoke? Why not have one." ಎಂದು ಕೈಚಾಚುತ್ತೀರಿ. ಚಾಚಿದ ಈ ಕೈಗೆ ನಿರಾಕರಣೆ ಎಂಬುದೇ ಇಲ್ಲ. ನಿಮ್ಮ ಕೆಲಸ ಸಾಧಿಸಿತು. Cent percent success. ಸಿಗರೇಟನ್ನು ಕೈಗೆತ್ತಿಕೊಂಡ ಜನ ಅತ್ತಿತ್ತ ಸರಿದಾಡುತ್ತಾರೆ. ನೀವು ಈಗ ರೈಲಿನ ಸೀಟಿನ ಸಿಂಹಾಸನಾಧೀಶ್ವರರು. ಅವರ ಮನೋಮಂದಿರದ ಯಜಮಾನರು. ಅಥವಾ ನಿಮಗೆ ೫೦ನಯೆ ಪೈಸೆಯ ಒಂದು Magazine ಓದಬೇಕಾಗಿದೆ. ಬಿಸಾಕಿರಿ ೫ ನಯೆಪೈಸೆಯ ಒಂದು ಸಿಗರೇಟನ್ನು ಆ Magazine ಒಡೆಯನಿಗೆ. Magazine ನಲಿಯುತ್ತ ಬರುತ್ತದೆ ನಿಮ್ಮೆಡೆಗೆ ರಂಭೆ ಊರ್ವಶಿ ಬಂದಹಾಗೆ. ಮೇನಕೆ ಬಂದಹಾಗೆ. ಕಿಂಕಿಣಿ ಕಿಣಿಣೀಣಿ ನಾದದ ನದಿಯೊಂದು ಹೊರಟ್ಹಾಂಗ. ಸಿಗರೇಟಿನ ಈ ವಾಮನಾವತಾರ ಸಾಧಿಸದೆ ಇದ್ದದ್ದು ಯಾವುದೂ ಇಲ್ಲ, ಎಲ್ಲ ಬಲಿಚಕ್ರವರ್ತಿಗಳೂ ಪಾತಾಳಕ್ಕೇ ಹೋಗಬೇಕು. ಪರಿಚಯದ ಸಂಚಕಾರ ಮುಟ್ಟಿತು. ನಿಮ್ಮ Diplomtic relations establish ಆದುವು. ನೀವು ಗೆದ್ದಿರಿ. Diplomatic Relationship ಎಂದಾಕ್ಷಣಕ್ಕೆ ನೆನಪಾಯಿತು. ನೀವು ಈಗಾದರೂ ಹೇಳಿರಿ. ಸಿಗಾರ್ ಇರದ ಚರ್ಚಿಲ್ ಮಹಾಶಯರ ಚಿತ್ರವನ್ನು ನೀವು ಎಂದಾದರೂ ಕಂಡಿದ್ದೀರಾ? ಚರ್ಚಿಲ್‌ರೇನು ಸಾಮಾನ್ಯರೇ? ಎರಡು ಮಹಾಯುದ್ಧಗಳನ್ನು ಗೆದ್ದು ಪ್ರಪಂಚವನ್ನು ನೆಮ್ಮದಿಯಲ್ಲಿ

ನಿಲ್ಲಿಸಿದವರು. ಅವರಿಗೇನು ಆಯುಷ್ಯ ಕಡಿಮೆಯಾಯಿತೇ? ಅಂಥ ಜ್ಞಾನಿಗಳು, ವಿಕ್ರಾಂತರು, ಸಿಗರೇಟನ್ನು ಬಿಡದೆ ಸೇದುತ್ತಿದ್ದಾಗ ಮಹಾಪಾಂಡಿತ್ಯದ ಸೋಗನ್ನು ನಾವೇಕೆ ಹಾಕಬೇಕು? ಎಲ್ಲ Diplomacy ಸಿಗರೇಟಿನ ಹೊಗೆಯಲ್ಲಿಯೇ ಲೀನವಾಗಬೇಕು. ಕೆಲವರಿಗಂತೂ ಸಿಗರೇಟಿನ ಝುರಕಿಯನ್ನು ಎಳೆಯದೆ, ವಿಚಾರಗಳೇ ಹರಿಯುವುದಿಲ್ಲವಂತೆ. ಇದು ನಾನು ಕೇಳಿದ ಕಥೆ, ಬಹುಶಃ ಮೋತೀಲಾಲರ ಬಗ್ಗೆ ಇರಬೇಕು. ಗಾಂಧೀಜಿಯವರೆದುರು ಆರ್ಝಾದರನ್ನು ಬಿಟ್ಟರೆ, ಯಾರೂ ಸಿಗರೇಟು ಸೇದುತ್ತಿದ್ದಿಲ್ಲವಂತೆ-ಒಂದು ಸಲ ಮೋತೀಲಾಲರು A.I.C.G. ಸಭೆಯಲ್ಲಿ ಚರ್ಚೆ ಮಾಡುವದಿತ್ತಂತೆ. ಗಾಂಧೀಜಿಯವರ ಬಗ್ಗೆ ತುಂಬಾ ಆದರವಿದ್ದ ಮೋತೀಲಾಲರು ಸಭೆಯಲ್ಲಿದ್ದ ಗಾಂಧೀಜಿಯವರಿಗೆ ಮರ್ಯಾದೆ ತೋರಿಸುವುದರ ಸಲುವಾಗಿ ಒಂದು ಸಿಗರೇಟನ್ನೂ ಹೊತ್ತಿಸಲಿಲ್ಲವಂತೆ. ತತ್ಪರಿಣಾಮವಾಗಿ ಸಿಗರೇಟು ಚಾಲಿತ ಯಾವ ವಿಚಾರವೂ ಅವರ ಬಾಯಿಯಿಂದ ಬರದೆ ಅವರು ಎಷ್ಟೋ ಹೊತ್ತು ಸಭೆಯಲ್ಲಿ ಮೌನವಾಗಿಯೇ ಇರಬೇಕಾಯಿತಂತೆ. ಇದನ್ನರಿತ ಗಾಂಧೀಜಿ ಕೊನೆಗೆ "ಮೋತೀಲಾಲರೆ, ಯಾಕೆ ಸುಮ್ಮನೆ ಕುಳಿತಿದ್ದೀರಿ? ಮಾತನ್ನೇ ಆಡಲೊಲ್ಲಿರಿ. ನೀವು ಸಿಗರೇಟು ಹಚ್ಚಿ ಮಾತನ್ನು ಪ್ರಾರಂಭಿಸಿರಿ. ನಮಗೆ ಈ ಸಭೆಯಲ್ಲಿ ಬೇಕಾದುದು ನಿಮ್ಮ ವಿಚಾರ; ನೀತಿಯಲ್ಲ" ಎಂದು ಹೇಳಿದರಂತೆ. ಸಿಗರೇಟೆಳೆದ ಮೋತೀಲಾಲರು ಸಭೆಯ ಮುಂದೆ ಉಜ್ವಲವಾದ ವಿಚಾರಗಳನ್ನೇ ಇಟ್ಟಿರಬೇಕು. ಸ್ಫೂರ್ತಿಯ ಸೆಲೆಯಾದ ಈ ಸಿಗರೇಟ್ ಇಲ್ಲದಿದ್ದರೆ ಪರಿಸ್ಥಿತಿ ಏನಾಗುತ್ತಿತ್ತೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಸಿಗರೇಟು ಸ್ನೇಹದ ಸಂಕೇತ, ಪರಿಚಯದ ಸಂಚಕಾರವಿದ್ದಂತೆ, ಕಾವ್ಯದ ಸೆಲೆ. ಸಿಗರೇಟಿನ ಬ್ರಹ್ಮಗಿರಿಯಿಲ್ಲದೆ, ಕಾವ್ಯ ಕಾವೇರಿ ಪ್ರವಹಿಸಳು. ಕವಿಗಳಿಗೆ ಲೇಖಕರಿಗೆ ಹತ್ತಿರ ಲೆಕ್ಕಣಿಕೆ ಕಾಗದಗಳಿರಲಿ ಬಿಡಲಿ. ಸಿಗರೇಟಂತೂ ಬೇಕೇಬೇಕು. ಎದುರು ಸಿಗರೇಟು ಧೂಪವನ್ನು ಹಾಕಿ, ಸರಸ್ವತಿಯ ಆರಾಧನೆಯನ್ನು ಪ್ರಾರಂಭಿಸಿದರೆ, ಕಾವ್ಯಗಂಗೆ ಓತಪ್ರೋತವಾಗಿ ಹರಿದುಬರುತ್ತಾಳೆ.

*"ಇಳಿದು ಬಾ ತಾಯೆ, ಇಳಿದು ಬಾ"*

ಅಂತಲೇ ಕವಿಗಳು ಹತ್ತಾರು ಸಂದರ್ಭಗಳಲ್ಲಿ ತಮ್ಮ ಸ್ಫೂರ್ತಿಯ ಸೆಲೆಯಾದ ಸಿಗರೇಟಿಗೆ ಗೌರವ ಸಲ್ಲಿಸಿದ್ದಾರೆ. ದಿವಂಗತ ಪೇಜಾವರ ಸದಾಶಿವರಾಯರು ವರ್ಣಿಸಿದ ಇಟಲಿಯ ಲಾರೆಂಝೋ ಉತ್ಸವದ ಬಗೆಗೆ ನೀವು ಓದಿಲ್ಲವೇ?- ಕುರುಡು

ಬೆಳಕು ನಿಧಾನವಾಗಿ ಮಾಯವಾಗುತ್ತಿರುವಂತೆ ಸುತ್ತಲೂ ವೇನೀತ್ಸಯದ ಕಡೆದ ಗಾಜು, ಸಾರ್ದೆನಿಯಾದ ಸುರೆಯ ಮೋಜು ಇರುತ್ತಿರಲಿಕ್ಕೆ,

*ನೀನು ಯಾರು? ನಾನು ಸ್ಪಾನ್ಯ.*
*ನೀನು ಯಾರು? ನಾನು ಗ್ರೇಚ್ಯ.*
*ಇದೊ ಇತಾಲ್ಯ*
*ಆದೊ ಜರ್ಮಾನ್ಯ*

ಎಂದು ಯುವತಿಯರ ತಂಡ ಸುತ್ತುವರಿದಿರಲಿಕ್ಕೆ,

*ಮುತ್ತಿರುವರೆ ಕತ್ತಲು*
*ಸೌರಭವಿದೆ ಎತ್ತಲು*
*ಸುಂದರಿಯರು ಸುತ್ತಲು*

– ಈಗ ನಮ್ಮ ಭಾರತದ ನೀತಿ ನಿರ್ಬಂಧವೇಕೆ ಎಂದು ಕವಿ ಕೇಳಿದಾಗ, ಅವನಲ್ಲಿ ಆ ವಿಲಾಸವೃತ್ತಿಯನ್ನುಂಟುಮಾಡಿದುದು "ಸಾವಿರ ಸಿಗರೇಟ ಹೊಗೆ" ಸಾವಿರ ಸಿಗರೇಟ ಹೊಗೆ. ಹೌದು; **ಸಾವ್ ಇರದ ಸಿಗರೇಟ ಹೊಗೆ!**

ಸುಖವಾದ ಹಾಲುಕೀರು ಊಟಮಾಡಿ, ಬಾಯ ತುಂಬೆಲ್ಲ ತಂಬುಲ ಹಾಕಿ, ವಾಮಕುಕ್ಷಿಯಾಗಬೇಕೆಂದು ನಿಮ್ಮ ಕಣ್ಣು ನಿಮಗೆ ಹೇಳುತ್ತಿರುವಾಗ ಇದೋ ಒಂದು Goldflake ತೆರೆದು ಎಳೆದಿರೆಂದರೆ, ಪರಮೇವ್ಯೋಮನ್!! ನೀವು ಈ ಜಗತ್ತಿನ ತುತ್ತ ತುದಿಯಲ್ಲಿಯೇ ಇದ್ದೀರಿ. ಜೀವನ್ ಮುಕ್ತಾವಸ್ಥೆ ನಿಮಗೆ ಯಾವುದು ಬೇಕೋ,– ಆ ಸಿಗರೇಟು ಎಳೆದುಕೊಳ್ಳಿ, ನೀನು ಯಾರು ನಾನು ಸ್ಪಾನ್ಯ. ನೀನು ಯಾರು ನಾನು ಗ್ರೇಚ್ಯ. ಇದೋ ಇತಾಲ್ಯ. ಆದೋ ಜರ್ಮಾನ್ಯ ಎನ್ನುವ ಹಾಗೆ ನಿಮ್ಮ ಸುತ್ತಲೂ ಸೌಂದರ್ಯ ಚಲ್ಲವರಿದು ನಿಂತಿದೆ. ಯಾವ ಬೇಕಾದ ಸಿಗರೇಟನ್ನೂ ನೀವು ಬರಮಾಡಿಕೊಳ್ಳಬಹುದು. ಅಷ್ಟೇ ಅಲ್ಲ! ಬಹುಶಃ ನೀವು ಸೇದುತ್ತಿರುವ ಸಿಗರೇಟಿನಿಂದ ನಿಮ್ಮ ಸ್ವಭಾವವನ್ನೂ ಗುರುತಿಸಬಹುದೆಂದು ಕಾಣುತ್ತದೆ. ಪರೀಕ್ಷೆಮಾಡಿ ನೋಡಿಕೊಳ್ಳಿ. Gold-flake ಸೇದುವವರು ರಸಿಕರು, ಶೃಂಗಾರ, ಸೌಂದರ್ಯ ಪ್ರಿಯರು. Capstan Navycut ಗಟ್ಟಿಗತನ, ದೃಢನಿರ್ಧಾರದ ಲಕ್ಷಣ; Berkely ಪ್ರಜಾಪ್ರಭುತ್ವದ ಪ್ರತಿನಿಧಿ. Simla ಹೆಚ್ಚು danger ಎದುರಿಸಬಾರದೆಂಬ ಮನೋವೃತ್ತಿ. Honeydew ಮವಾಳ ಪಕ್ಷ; Panama ವಿಶ್ವಾಮಿತ್ರನ ಕುಲದವರು.

Charminar ಸಿಗರೇಟ್ ಕುಲದ ಕಟ್ಟಾ ಕೊಲೆಗಡುಕರು; ಅವರಿಗೆ ಯಾವ ಸ್ವರ್ಗದಕಿಂತಲೂ ಸಿಗರೇಟಿನ ನರಕವೇ ಜನ್ಮಜನ್ಮಾಂತರವೂ ಬೇಕು. ಇವರು ಈಚಲ ಗಿಡದ ಬುಡ ಬಿಟ್ಟು ಹೊರಬೀಳದೆ ಇದ್ದಂಥವರು. Maypole ಪಾಪ ಬೆಣ್ಣೆಮುದ್ದೆ. ಸಿಗರೇಟ್ ಲೋಕದ ಊರ್ವಶಿ. ಗೆಜ್ಜೆ-ಪೈಜಣ ಧರಿಸಿದವಳು... ಹೊಟ್ಟೆತುಂಬ ಊಟಮಾಡಿ ಇಂಥ ಯಾವದಾದರೂ ಒಂದು ಸಿಗರೇಟನ್ನು ತೆಗೆದೆಳೆದಿರೆಂದರೆ, ಎಂಥ ಬಣ್ಣದ ಲೋಕ ನಿರ್ಮಾಣವಾಗುತ್ತಿದೆ ನಿಮ್ಮೆದುರಿನಲ್ಲಿ. ಮಗು ಶ್ರೀಕೃಷ್ಣ ಬಾಯಿ ತೆರೆದು ತಾಯಿ ಯಶೋದೆಗೆ ಬ್ರಹ್ಮಾಂಡವನ್ನು ತೋರಿದಂತೆ, ನೀವೂ ಆ ಅನಂತ ಕೋಟಿ ಬ್ರಹ್ಮಾಂಡವನ್ನು ಸೀಗರೇಟ ಹೊಗೆ ತುಂಬಿದ ನಿಮ್ಮ ಬಾಯಿಂದ ಹೇಗೆ ಬೇಕಾದರೂ ನಿರ್ಮಾಣ ಮಾಡಬಹುದು. ನೀವು ಹೊಗೆ ಬಿಡುತ್ತಲೇ, ಸುಳಿ ಸುಳಿಯಾಗಿ, ಲಹರಿ ಲಹರಿಯಾಗಿ, ಬಳ್ಳಿ ಬಳ್ಳಿಯಾಗಿ, ವರ್ತುಲ ವರ್ತುಲವಾಗಿ, ಕೋಟಿ ಕೋಟಿಯಾಗಿ, ಹಸಿರು, ನೀಲಿ, ಹಳದಿ, ಬೂದು, ಬಣ್ಣ ಧರಿಸಿ ನಿಮ್ಮ ಕಣ್ಣೆದುರು ಸಾಲು ಸೈನಿಕರೇ ಹೊರಟಂತೆ ಹೊರಡುತ್ತಿರುವ ಈ ಹೊಗೆ ಚಿತ್ರವೆಂದರೆ ಒಂದು ಕಾವ್ಯವ್ಯಾಪಾರವೇ. ಹಣೆಯಲ್ಲಿ ಬ್ರಹ್ಮ ದೈವವನ್ನು ಕೊರೆದ ಹಾಗೆ, ನೀವು ಗಾಳಿಯಲ್ಲಿ ಚಕ್ರಗಳನ್ನೋ, ಶಂಖಗಳನ್ನೋ, ವರ್ತುಲಗಳನ್ನೋ, ಕೋಟೆಗಳನ್ನೋ ಈ ಹೊಗೆಯಿಂದ ಬಿಡಿಸಬಹುದು. ಪರಮಾತ್ಮ ಸುದರ್ಶನ ಚಕ್ರವನ್ನು ಬಿಟ್ಟು ಪುನಃ ಹಿಂದೆ ತೆಗೆದುಕೊಂಡ ಹಾಗೆ, ನೀವು ಈ ಹೊಗೆ ಸೈನಿಕರಿಗೆಲ್ಲ ಬಾಯಿಂದ March ಎಂದು ಆರ್ಡರ್ ಕೊಟ್ಟು ಮಾರ್ಚ ಮಾಡಿಸಿ ಪುನಃ ಪರಮಾತ್ಮ ಇಡೀ ವಿಶ್ವವನ್ನೇ ತನ್ನಲ್ಲಿ ಲೀನ ಮಾಡಿಕೊಳ್ಳುವ ಹಾಗೆ ನಿಮ್ಮ ವದನದ ಗುಹೆಗೆ ಈ ಸೈನಿಕರನ್ನೆಲ್ಲ ಮರಳಿ ಎಳೆದು ಕೊಳ್ಳಬಹುದು. ಎಂಥ ಬಣ್ಣದ ಆಟವಿದು ಸಿಗರೇಟ ಧೂಮ್ರ ಲೀಲೆ! ಸಿಗರೇಟ ಹೊಗೆಯ ಕೂಡ ಆಟವಾಡುವ ನೀವೂ ಸಾಗರದ ಮಳಲ ತುದಿಯಲ್ಲಿ ಕುಳಿತು ಏರಿ ಬರುವ ಅಲೆಗಳನ್ನು ಎಣಿಸುವ ತತ್ವಜ್ಞಾನಿಗಳೇ. ದಿವಂಗತ ಕೈಲಾಸಮ್ ಅವರಂತೂ ಸಿಗರೇಟ ಹೊಗೆಯಲ್ಲಿಯೇ ಟಿ.ಪಿ. ಕೈಲಾಸಮ್ ಎಂದು ಬರೆಯುತ್ತಿದ್ದರಂತೆ. ಅವರೇನೋ ಇದೆಲ್ಲ ಸುಳ್ಳು ಎಂದು ಹೇಳಿದರು. ಆದರೆ ಒಂದು ಮಾತು ಮಾತ್ರ ನಿಜ. ಕೈಲಾಸಮ್ ಅವರ ಕಲಾಕೀರ್ತಿ ಅವರ ಲೇಖನಗಳ ಮೇಲೆ ನಿಂತಷ್ಟೇ ಅವರ ಈ ಸಿಗರೇಟ ಧೂಮ್ರಲೀಲೆಯ ಮೇಲೆಯೂ ನಿಂತಿದೆ. ಕೈಲಾಸಮ್ ಅವರು ಹೊಗೆಯಿಂದ ಯಾವಾಗ ಬರೆಯುತ್ತಾರೆಂಬುದನ್ನು ನೋಡಲು ಚಿಕ್ಕವರಿದ್ದಾಗ ನಾವು ಹತ್ತಾರು ಮೈಲು ಅವರ ಹಿಂದೆ ನಡೆದ ನೆನಪು ನನಗಿದೆ. ಅಂಥ ಸ್ವಪ್ನ ಸುಂದರ ಜಗತ್ತಿದು ಈ ಧೂಮ್ರ ಲೀಲೆ! ಅಂತಲೇ ಆಂಗ್ಲ ಕವಿ Calverley ಅವರು ಸಿಗರೇಟಿಗೆ ನಮೋ ನಮೋ ಎಂದು ಪ್ರಣಾಮವನ್ನರ್ಪಿಸಿದರು :

*Thou who, when fears attack,*
*Bidst them avaunt, and Black*
*Care, at the horseman's back*
*Perching, unseatest;*

*Sweet, when the morn is gray;*
*Sweet, when they've cleared away*
*Lunch; and at close of day*
*Possibly sweetest :*

*I have a liking old*
*For thee, though manifold*
*Stories, I know, are told,*
*Not to thy credit.*

ಕವಿ ಗೋಪಾಲಕೃಷ್ಣ ಅಡಿಗರು ಈ ಧೂಮಲೀಲೆಯನ್ನು ಸುಂದರವಾಗಿ ವರ್ಣಿಸಿದರು :

*ಸಿಗರೇಟಿನ ಹೊಗೆ*
*ವರ್ತುಳ ವರ್ತುಳ*
*ಧೂಪ ಧೂಮ ಮಾಲೆ*
*ವಿವಿಧ ರೂಪ, ವಿಹ್ವಲ ವಿಲಾಸಗಳು*
*ವಿಕೃತ ಚಿತ್ರಗಳು*
*ಗಾಳಿಯಲೆಯ ಮೇಲೆ.*

*ಗಾಳಿಗು ನಸು ಹಗುರ ಹೊಗೆ :*
*ಅಂತೆ ಅನಾಯಾಸ ಏರುತಿದೆ ಹೊಗೆ ಹೀಗೆ, ಹೀಗೆ.*
*ಸುರುಳಿ ಸುರುಳಿ, ಹೊರ ಹೊರಳಿಯುರುಳಿ*
*ಎಳೆ ಎಳೆ ಬಿಡಿಬಿಡಿಸಿ ಬೆಳ್ಳಿಗೆರೆ,*
*ಎರೆದು ಕೊರೆದ ಹಾಗೆ*
*ಕೊರೆದು ಬಿಟ್ಟಹಾಗೆ*

ಈ ಸೌಂದರ್ಯ ಹೋಗಲಿ. ಎಂಥ ತತ್ವಜ್ಞಾನ ಅಡಗಿದೆ ಈ ಸಿಗರೇಟಿನ ಹಿಂದೆ!

*ನಾನು ನೀನು ಸಿಗರೇಟು - ಆಹಹ! - ಅದೆ ಬಣ್ಣವಣ್ಣ ತಿಣ್ಣ!*
*ನಮ್ಮ ಬಾಳು ಹೊಗೆ, ಕಾಣದೊಂದು ನಗೆ ಹರಹುತಿರುವ ಬಣ್ಣ!*
*ಯಾರೊ ಏನೊ ಕುಡಿಕುಡಿದು ಹೊಗೆಯನುಫ್ ಎಂದು ಉಗುಳುತಿಹನು;*
*ಹೊತ್ತಿಯುರಿಯುವ ಸಿಗರೇಟು ಬಲ್ಲುದೇನವನ ಸಂತಸವನು?*

ಬಾಳೆಂದರಾದರೂ ಏನು? ನಾಲ್ಕು ದಿನವಿದ್ದು, ಸುಟ್ಟು ಬೂದಿಯಾಗಿ ಅನಂತದಲ್ಲಿ ಲೀನವಾಗಿ ಹೋಗುವುದೇ ಅಲ್ಲವೇ? Like wind we came, like water we go. ಗಾಳಿಯಂತೆ ಬಂದೆವು. ನೀರಿನಂತೆ ತೆರಳುತ್ತೇವೆ. ಗಾಳಿ ನಡೆದ ಹೆಜ್ಜೆ, ಎಲ್ಲಿದ್ದೆವು? ಏನಾದೆವು? ಗೊತ್ತಿಲ್ಲ, ಎಲ್ಲವೂ ಹೊಗೆ. ಬರೀ ಹೊಗೆ. ಬಾ–ಳೇ ಹೊ–ಗೆ.

*ಹೊಗೆಯೆ ಮೊದಲು ಕೊನೆಯು*
*ಈ ಬಾಳ ನನೆಯು-ಕೊನೆಯು*

ಯಾವ ಮಾಂತ್ರಿಕ ನಮ್ಮನ್ನು ಸಿಗರೇಟು ಮಾಡಿಕೊಂಡು, ಸುಡುತ್ತಿದ್ದಾನೋ ಯಾರು ಬಲ್ಲರು? ಚೆಲುವಾದ, ಮುದ್ದಾದ, ಬಿಳಿದಾದ, ಸಿಗರೇಟು ಸುಟ್ಟು ನೆಲಕ್ಕೆ ಬಿದ್ದಾಗ ಕಾಣುವುದೇನು? ಬೂದಿ–ಬರೀ ಬೂದಿ; ಉಪಯುಕ್ತ ಜೀವನದ ಕೇವಲ ಅವಶೇಷ ಮಾತ್ರ. ಆದರೆ, ಉರಿಯುವಾಗ ಆ ಸಿಗರೇಟು ಎಂಥ ಸುಂದರ ಜಗತ್ತನ್ನು ನಿರ್ಮಿಸಿತು–ಎಷ್ಟು ಜನರ ಜೀವನಕ್ಕೆ ಚೈತನ್ಯವನ್ನು, ಉತ್ಸಾಹವನ್ನು, ಆಶೆಯನ್ನು ಕೊಟ್ಟಿತು? ಅಲೆ ಅಲೆಯಾಗಿ, ಎಳೆ ಎಳೆಯಾಗಿ, ಸುರುಳಿ ಸುರುಳಿಯಾಗಿ ಆನೆ, ಒಂಟೆ, ಆಮೆ, ಎಲ್ಲ ಚಿತ್ರ ಕೊರೆದು, ಹಸಿರು, ಕಂದು, ನೀಲಿ, ಬೂದು ಬಣ್ಣ ಧರಿಸಿ ಕಣ್ಣಿಗೆ ಏನು ಹಬ್ಬವನ್ನು ಕೊಟ್ಟಿತು? ಜೀವನದಲ್ಲಿ ಕೊನೆಗೆ ಸತ್ಯ ಯಾವುದೋ ಮಿಥ್ಯ ಯಾವುದೋ? ಯಾರಿಗೆ ಗೊತ್ತು? ಇಂದಿನ ಸತ್ಯ ನಾಳಿನ ಮಿಥ್ಯ. ಬದುಕಿದ್ದಾಗ-ಕಂಡ ಸೌಂದರ್ಯವೇ ನಿಜಸತ್ಯ.

ನನ್ನ ಈ ಹರಟೆಗಳೂ–ಧೂಪ–ಧೂಮ ಲೀಲೆ. ಬಯಲಲ್ಲಿ ಕೊರೆದ ಚಿತ್ರಗಳು. ಆಕಾಶದ ಬೆನ್ನಿಗೆ ಅಂಟಿಸಿದ ನಕ್ಷತ್ರಪುಂಜ. ಮೋಡಗಳ ರಾಸಕ್ರೀಡೆ. ಹಿಡಿದರೆ ನುಸುಳುತ್ತವೆ. ಬಿಟ್ಟರೆ ಸೌಂದರ್ಯ ತೋರುತ್ತವೆ. ಅನಂತದಲ್ಲಿ ಉದ್ಭವಿಸಿ ಅನಂತದಲ್ಲಿ ಲೀನವಾಗುತ್ತವೆ ಈ ಕಟೆದ ಧೂಮ್ರವಲಯಗಳು... (ಹಾಂ–ಏನಪ್ಪ ಇದು .ಕೆಮ್ಮು? ಹಕ್ ಹಕ್. ಹಕ್ ಹಕ್ ಹಕ್ ಹಕ್. ಥೆ ಠಸಿಗಿ ಹತ್ತಿತು. ಬಿಡುವುದಿಲ್ಲಿದು ಕೆಮ್ಮು. ಸುಡುಗಾಡು ಸಿಗರೇಟು... ಕೆಮ್ಮು. ಈ ಹರಟೆ

ಬರೆಯುವದರಲ್ಲಿಯೇ ನಾನೆಷ್ಟು ಸಿಗರೇಟು ಸೇದಿದೆ? ಒಂದು, ಎರಡು, ಮೂರು, ಹತ್ತು. ಹತ್ತು ಸಿಗರೇಟು ಸೇದಿದೆ. ಹಕ್ ಹಕ್ ಹಕ್. ಛೆ! ಛೆ! ಬಿಡುವುದಿಲ್ಲ ಈ ಕೆಮ್ಮು ಸುಡುಗಾಡು ಸಿಗರೇಟು. ಕೆಮ್ಮು). ಇಲ್ಲಿಗೆ ಮುಗಿಸಿ ಬಿಡೋಣ ಈ ಹರಟೆಯನ್ನು. ಎಷ್ಟು ನಿನ್ನನ್ನು ಹೊಗಳಿದರೂ ಕೊನೆಗೂ ಗಸ್ತು ಕೊಟ್ಟು ಬಿಟ್ಟೆಯಾ ಮುಂಡೇದೆ ಸಿಗರೇಟೆ? ನಿನ್ನ ಆರಾಧಕನಾಗಿದ್ದ ನನ್ನದೇ ಗತಿ ಹೀಗಾದಾಗ, ಉಳಿದವರ ಅವಸ್ಥೆ ಏನು? ಹಕ್. ನಿನ್ನ ಮನೆ ಹಾಳಾಗಾ! **ಸುಡುಗಾಡು ಸಿಗರೇಟೇ!!**